24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 38 | ನವದೆಹಲಿ | ಬೆಲೆ ₹10 | ಆಗಸ್ಟ್ 3 2026, ಸೋಮವಾರ

An inspiring Day of Recognition, Ideas, and Public Leadership

PUBLIC RELATIONS COUNCIL OF INDIA
COMMUNICATION FOR A BETTER WORLD

A high-level forum of PRCI on

## TRANSFORMATIVE GOVERNANCE

Followed By

## PRCI NEXTGEN GOVERNANCE AWARDS

Celebrating Excellence in Public Administration and Governance

22 YEARS OF PRCI

Inauguration and Welcome remarks

Ceremonial Welcome and Felicitations to Dignitaries

Welcome Address by
**M.B. Jayaram**
Chairman Emeritus, PRCI

About PRCI by
**Dr T. Vinay Kumar**
Chairman, GC, PRCI

Inauguration by
**Hon'ble Shri Justice P B Bajanthri**
Former Chief Justice, High Court of Judicature at Patna

A Brief about the Symposium and Awards by
**Mrs. Geetha Shankar**
National President, PRCI

Address by Guest of Honor
**Dr. Dharam Pal** IAS
Advisor to the Union Public Service Commission (UPSC)

Address by Guest of Honor
**Shri B.V. Vittal,** Executive Director (HR)
National Fertilizers Limited (NFL)

Keynote Address by
**Shri S. Venkat Narayan,**
Former Editor, India Today;
President, Foreign Correspondents' Club

Talk by
**Hon'ble Shri Justice P B Bajanthri**
Former Chief Justice, High Court of Judicature at Patna

Talk by Invitees

Presidential Remarks by
**S.Narendra**
Former PIO, Govt of India

Unveiling of PRCI 20th Global Communication Conclave Logo by
**Rtn AKS Dr Srinivasan**
Director, GC

1.10 pm — **Next GEN Awards Ceremony**

Inauguration by — **Hon'ble Shri Justice P B Bajanthri**
Former Chief Justice, High Court of Judicature at Patna

Guests of Honor — **Dr. Dharam Pal** IAS
Advisor to the Union Public Service Commission (UPSC)

**Shri B.V. Vittal,** Executive Director (HR)
National Fertilizers Limited (NFL)

**Shri S. Venkat Narayan,**
Former Editor, India Today;
President, Foreign Correspondents' Club

### Excellence in Citizen Centric Urban Governance

Institutional Award
**Bangalore Development Authority**

Under the leadership of
**Shri N.A. Haris**
Chairman, BDA

Screening of the documentary
**BDA Guarantee (PGRS)**

Award acceptance and remarks

## Individual Awards Ceremony

Presented to

**Shri Syedain Abbasi,** IAS
Special Chief Secretary, PHED & Water Resources, Govt of Assam
PRCI Next Gen Award for Sustainable Water Leadership

**Shri Arun Dev Gautam,** IPS
Director General of Police (DGP), Chhattisgarh
PRCI Next Gen Award for Excellence in Ethical Governance

**Shri Dr. Rajiv Kumar Singh**
Director (Academic), National Institute of Open Schooling (NIOS),
Ministry of Education, New Delhi
PRCI Next Gen Award for Inclusive Education Leadership

VENUE
INDIA HABITAT CENTRE
NEW DELHI

DATE | TIME
03.08.2026
11.00 AM ONWARDS

RECOGNISING EXCELLENCE
INSPIRING CHANGE.
BUILDING A BETTER TOMORROW.

## ನಿತ್ಯ ಪಂಚಾಂಗ 3.08.2026 ಸೋಮವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ,
ದಕ್ಷಿಣಾಯಣ ಗ್ರೀಷ್ಮ ಋತು,
ಚಾಂದ್ರಮಾನ, ಆಷಾಢ-ಶ್ರಾವಣ ಮಾಸ

ಆಷಾಢ ಬಹುಳ, ಪಂಚಮಿ, ಉತ್ತಾರಾಭಾದ್ರಾ ನಕ್ಷತ್ರ,
ಮೇಲುಕೋಟೆ ಕೃಷ್ಣರಾಜಮುಡಿ ಉತ್ಸವ,
ಮಳಖೇಡ ಟೀಕಾಚಾರ್ಯ ತೋಟಕಾಚಾರ್ಯ ಆರಾಧನೆ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 12.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ಕಾವೇರಿ ಸಂಕಷ್ಟ ಪರಿಹಾರ ಸೂತ್ರ ಆಗದಿದ್ದರೆ ಪರಿಸ್ಥಿತಿ ಕಠಿಣ: ಸಿದ್ದರಾಮಯ್ಯ ಎಚ್ಚರಿಕೆ



**ಬೆಂಗಳೂರು ಆ.2:** ಕಾವೇರಿ ವಿವಾದ ಆಗಾಗ ಎದುರಾಗುವುದರಿಂದ ಸರ್ಕಾರಕ್ಕೆ ತಲೆನೋವು ತಪ್ಪಿದ್ದಲ್ಲ. ಹೀಗಾಗಿ ಶಾಶ್ವತ ಹಾಗೂ ವೈಜ್ಞಾನಿಕವಾದ ಪರಿಹಾರ ಸೂತ್ರ ಬೇಕಿದೆ. ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕಾವೇರಿ ನದಿ ನೀರಿನ ವಿಚಾರಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸರ್ವಪಕ್ಷ ನಾಯಕರ ಸಭೆಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಮಾತನಾಡಿ ಸಂಕಷ್ಟ ಪರಿಹಾರ ಸೂತ್ರ ಆಗಲೇಬೇಕು. ಇಲ್ಲದಿದ್ದರೆ ರಾಜ್ಯ ಮತ್ತು ರಾಜ್ಯದ ರೈತರ ಹಿತ ಕಾಯುವುದು ಕಷ್ಟ. ಆಗ ಸರ್ಕಾರ ಸಂಕಷ್ಟಕ್ಕೆ ಗುರಿ ಆಗಬೇಕಾಗುತ್ತದೆ ಎಂದರು.

ಇದು ಭಾವಾವೇಶದ ವಿಚಾರ. ಹೀಗಾಗಿ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು. ರೈತರ ನೆರವಿಗೆ ಧಾವಿಸುವುದು ಸರ್ಕಾರದ ಕರ್ತವ್ಯ. ಕೇಂದ್ರ ಸರ್ಕಾರ ಅಥವಾ ಸುಪ್ರೀಂ ಕೋರ್ಟ್ ಸಂಕಷ್ಟ ಪರಿಹಾರ ಸೂತ್ರ ರಚನೆ ಮಾಡುವುದು ಅಗತ್ಯ. ಎಂದರು

ಕೊರತೆ ಸಂದರ್ಭದಲ್ಲಿ ನೀರನ್ನು ನಾಲ್ಕು ರಾಜ್ಯಗಳು ಯಾವ ರೀತಿ ಹಂಚಿಕೊಳ್ಳಬೇಕೆಂಬ ಸೂತ್ರ ಅಗತ್ಯ ನಾವು ಸಂಕಷ್ಟ ಪರಿಹಾರ ಸೂತ್ರಕ್ಕೆ ಒತ್ತಾಯಿಸಬೇಕು. ಎಂದು ಹೇಳಿದರು,

ಕುಡಿಯುವ ನೀರಿಗಾಗಿ ನಾವು ಅಗತ್ಯ ಕ್ರಮ ಕೈಗೊಳ್ಳಬೇಕಿದೆ. ಇದಕ್ಕಾಗಿ 39 ಟಿಎಂಸಿ ಬೇಕಿದೆ. ಹವಾಮಾನ ವರದಿ ಪ್ರಕಾರ ಮಳೆ ಕೊರತೆ ಇದೆ. ಹೀಗಾಗಿ ಕುಡಿಯುವ ನೀರಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು. ನಿರ್ಲಕ್ಷ್ಯ ಮಾಡಬಾರದು. 40 ಟಿಎಂಸಿ ಕಾಯ್ದಿರಿಸಬೇಕು ಎಂದರು

ಜೊತೆಗೆ ಬೆಳೆಗಳಿಗೆ ಕೂಡಲೇ ನೀರು ಒದಗಿಸುವ ಕೆಲಸ ಆಗಬೇಕು. ನೀರಿನ ಸಂಗ್ರಹಣೆ ಬಗ್ಗೆ ಕೇಂದ್ರ ಸರ್ಕಾರ, ನದಿ ನೀರು ಪ್ರಾಧಿಕಾರ ಹಾಗೂ ತಮಿಳುನಾಡಿಗೆ ಮಾಹಿತಿ ಇದೆ. ಆದರೂ ಕದ್ದುಮುಚ್ಚಿ ತಮಿಳುನಾಡಿಗೆ ನೀರು ಬಿಡಲಾಗುತ್ತಿದೆ ಎಂಬ ಆರೋಪ ಬಂದಿದೆ. ಇದು ಸುಳ್ಳು. ಎಂದರು

ಮಳೆ ಕೈ ಕೊಟ್ಟ ಸಂದರ್ಭದಲ್ಲಿ ಕಾವೇರಿ ನದಿ ನೀರಿನ ವಿಚಾರದಲ್ಲಿ ಸಭೆ ಕರೆಯುವ ವಾಡಿಕೆ ಇದೆ. 76 ವರ್ಷಗಳಲ್ಲಿ 25 ಬಾರಿ ಸಭೆ ಕರೆದು ಚರ್ಚೆ ಮಾಡಲಾಗಿದೆ. ನಾನು ಸಿಎಂ ಆಗಿದ್ದ ಅವಧಿಯಲ್ಲಿ ಎರಡು ಬಾರಿ ಸಭೆ ನಡೆದಿದೆ ಎಂದರು

ಪ್ರಸ್ತುತ ಕೊಡಗು ಹಾಗೂ ವಯನಾಡು ಭಾಗದಲ್ಲಿ ಮಳೆ ಆಗುತ್ತಿದ್ದು ಕಬಿನಿ, ಹಾರಂಗಿ ಜಲಾಶಯ ಭರ್ತಿ ಆಗಿದೆ. ಕೆಆರ್‌ಎಸ್ ಅಣೆಕಟ್ಟೆಯಲ್ಲಿ 19 ಟಿಎಂಸಿ ನೀರಿದೆ. ಎಲ್ ನೀನೋ ಪರಿಣಾಮ ಬರ ಪರಿಸ್ಥಿತಿ ಉಂಟಾಗಿದೆ.

ನೀರು ಇದ್ದಾಗ ಮಾತ್ರ ತಮಿಳುನಾಡಿಗೆ ಕೊಡಲು ಸಾಧ್ಯ. ಆದರೂ ಪ್ರಾಧಿಕಾರದ ಆದೇಶ ಪ್ರಕಾರ ನೀರು ಕೊಡಲೇಬೇಕಾಗುತ್ತದೆ. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಗೆ ಹೋಗುವುದರಿಂದ ಪ್ರಯೋಜನ ಆಗದು. ಹಿಂದೆ ಅರ್ಜಿ ವಜಾ ಆಗಿದೆ.

ಬೆಳೆಗಳಿಗೆ ನೀರು ಹರಿಸುವುದಿಲ್ಲ ಎಂದಿರುವ ಕಾರಣ ರೈತರಿಗೆ ಪರಿಹಾರ ವಿತರಿಸಬೇಕಿದೆ. ಕಬಿನಿ, ಹಾರಂಗಿ ಜಲಾಶಯ ತುಂಬಿರುವುದರಿಂದ ಸಮಸ್ಯೆ ಬಗೆಹರಿಯುವ ಸಾಧ್ಯತೆ ಇದೆ. ಆದ್ದರಿಂದ ರೈತರ ಬೆಳೆಗಳಿಗೆ ಕೂಡಲೇ ನೀರು ಒದಗಿಸಬೇಕು. ಎಂದರು.

# ಕಾವೇರಿ ನದಿ ನೀರು ಹಂಚಿಕೆ ವಿವಾದ ಸೌಹಾರ್ದಯುತವಾಗಿ ಬಗೆಹರಿಸಿ ತಮಿಳುನಾಡು ಸಿಎಂಗೆ ಬಿ.ವೈ.ವಿ. ಪತ್ರ



ಬೆಂಗಳೂರು, ಆ.2: ಕರ್ನಾಟಕ ಮತ್ತು ತಮಿಳುನಾಡು ನಡುವೆ ಮತ್ತೆ ಕಾವೇರಿ ನೀರು ಹಂಚಿಕೆ ಮತ್ತು ಮೇಕೆದಾಟು ಯೋಜನೆ ವಿವಾದಕ್ಕೆ ಮುನ್ನೆಲೆಗೆ ಬಂದಿದೆ. ತಮಿಳುನಾಡಿಗೆ ಪ್ರತಿದಿನ 3,500 ಕ್ಯೂಸೆಕ್ ನೀರು ಹರಿಸುವಂತೆ ಕರ್ನಾಟಕಕ್ಕೆ ಕಾವೇರಿ ನೀರು ನಿರ್ವಹಣಾ ಮಂಡಳಿ ಸೂಚಿಸಿರುವುದು ರಾಜ್ಯಕ್ಕೆ ಹಿನ್ನಡೆ ಉಂಟು ಮಾಡಿದೆ. ಇದೇ ವಿಚಾರವಾಗಿ, ರಾಜ್ಯದಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ. ಇದೀಗ, ತಮಿಳುನಾಡು ಸಿಎಂ ವಿಜಯ್ ಅವರಿಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪತ್ರ ಬರೆದಿದ್ದಾರೆ. ವಿವಾದವನ್ನು ಪರಿಹರಿಸಲು ಸೌಹಾರ್ದಯುತ ಮಾರ್ಗಕ್ಕಾಗಿ ಮನವಿ ಮಾಡಿದ್ದಾರೆ.

ಕಾವೇರಿ ವಿಷಯದಲ್ಲಿ ರಾಜಕೀಯ ವೈರತ್ವವನ್ನು ಬದಿಗಿಟ್ಟು, ಎರಡೂ ರಾಜ್ಯಗಳ ಹಿತಾಸಕ್ತಿಗೆ ಪೂರಕವಾಗಿ ಮಾರ್ಗವನ್ನು ಕಂಡುಕೊಳ್ಳಲು ಸಹಕಾರ ನೀಡಬೇಕು? ಎಂದು ಪತ್ರದಲ್ಲಿ ಕೋರಿದ್ದಾರೆ. ?ಕರ್ನಾಟಕ ಮತ್ತು ತಮಿಳುನಾಡು ನಡುವಿನ ಬಾಂಧವ್ಯ ಬಹಳಷ್ಟು ಹಿಂದಿನದು. ಎರಡೂ ರಾಜ್ಯಗಳು ಶತಮಾನಗಳಿಂದಲೂ ಇತಿಹಾಸ, ಸಂಸ್ಕೃತಿ, ವಾಣಿಜ್ಯ ಹಾಗೂ ಜನರ ನಡುವಿನ ಆತ್ಮೀಯ ಸಂಬಂಧದ ಮೂಲಕ ಒಂದಾಗಿವೆ. ಕೋಟ್ಯಂತರ ತಮಿಳರು ಕರ್ನಾಟಕವನ್ನು ವಿಶೇಷವಾಗಿ ಬೆಂಗಳೂರನ್ನು ತಮ್ಮ ಸ್ವಂತ ಮನೆಯಾಗಿ ಮಾಡಿಕೊಂಡಿದ್ದಾರೆ. ರಾಜ್ಯದ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ. ಅದೇ ರೀತಿ, ತಮಿಳುನಾಡಿನಲ್ಲಿರುವ ಕನ್ನಡಿಗರೂ ಅಲ್ಲಿನ ಪ್ರಗತಿಗೆ ಶ್ರಮಿಸುತ್ತಿದ್ದಾರೆ? ಎಂದು ವಿಜಯೇಂದ್ರ ವಿವರಿಸಿದ್ದಾರೆ.

ವಿವಾದಗಳನ್ನು ನಾವು ಹೇಗೆ ಬಗೆಹರಿಸಿಕೊಳ್ಳುತ್ತೇವೆ ಎಂಬುದೇ ಪ್ರಮುಖ ವಿಷಯ. ಹಿಂದೆ ಬೆಂಗಳೂರಿನಲ್ಲಿ ತಿರುವಳ್ಳುವರ್ ಪ್ರತಿಮೆ ಸ್ಥಾಪನೆ ವಿಚಾರ ನನೆಗುದಿಗೆ ಬಿದ್ದಿತ್ತು. ಆದರೆ, ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಮತ್ತು ತಮಿಳುನಾಡಿನ ಮಾಜಿ ಸಿಎಂ ಎಂ. ಕರುಣಾನಿಧಿ ಅವರ ರಾಜತಾಂತ್ರಿಕ ಪ್ರೌಢತೆ ಮತ್ತು ಔದಾರ್ಯದಿಂದ ಅದು ಇತ್ಯರ್ಥವಾಗಿತ್ತು. ಜನರ ಒಳಿತನ್ನು ಮನಸ್ಸಿನಲ್ಲಿಟ್ಟುಕೊಂಡರೆ ಎಂಥದ್ದೇ ಸವಾಲನ್ನೂ ಎದುರಿಸಬಹುದು ಎಂಬುದಕ್ಕೆ ಅದೇ ಸಾಕ್ಷಿ? ಎಂದು ನೆನಪಿಸಿದ್ದಾರೆ.

# ಕಾವೇರಿ ನೀರು ಹಂಚಿಕೆಯಲ್ಲಿ ರಾಜ್ಯದ ರೈತರ ಹಿತ ರಕ್ಷಿಸಿ: ಬಸವರಾಜ ಬೊಮ್ಮಾಯಿ ಆಗ್ರಹ

**ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ನಲ್ಲಿ ಸೂಕ್ತ ದಾಖಲೆಗಳೊಂದಿಗೆ ಸಮರ್ಥ ವಾದ ಮಂಡಿಸಬೇಕು: ಬಸವರಾಜ ಬೊಮ್ಮಾಯಿ**




**ಬೆಂಗಳೂರು, ಆ.2:** ಕಾವೇರಿ ಕೊಳ್ಳದಲ್ಲಿ ಉತ್ತಮ ಮಳೆಯಾಗಿರುವುದು ಕಾವೇರಿ ನೀರಿನ ಅಭಾವಕ್ಕೆ ನಿಸರ್ಗವೇ ನೀಡಿದ ಪರಿಹಾರವಾಗಿದೆ.

ಆದರೆ, ಇದು ತಾತ್ಕಾಲಿಕ ಶಮನವೇ ಹೊರತು ಶಾಶ್ವತ ಪರಿಹಾರವಲ್ಲ. ರಾಜ್ಯ ಸರ್ಕಾರ ತನ್ನ ಬಳಿ ಇರುವ ಸಮಗ್ರ ದತ್ತಾಂಶಗಳನ್ನು ಆಧಾರವಾಗಿಟ್ಟುಕೊಂಡು ಸುಪ್ರೀಂ ಕೋರ್ಟ್‌ನಲ್ಲಿ ಸರಿಯಾದ ವಾದ ಮಂಡಿಸಬೇಕು. ಇಲ್ಲವಾದಲ್ಲಿ ಕೋರ್ಟ್‌ನಿಂದ ಕಠಿಣ ಆದೇಶ ಬಂದರೆ ರಾಜ್ಯ ಸರ್ಕಾರ ಮತ್ತೆ ಸಂಕಷ್ಟಕ್ಕೆ ಸಿಲುಕಲಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಎಚ್ಚರಿಕೆ ನೀಡಿದ್ದಾರೆ.

ಕಾವೇರಿ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಭಾನುವಾರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ನೇತೃತ್ವದಲ್ಲಿ ನಡೆದ ಸರ್ವಪಕ್ಷ ಸಭೆಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಇತ್ತೀಚೆಗೆ ವಯನಾಡು, ಕೊಡಗು, ಚಿಕ್ಕಮಗಳೂರು ಮತ್ತು ಸಕಲೇಶಪುರ ಭಾಗಗಳಲ್ಲಿ ಉತ್ತಮ ಮಳೆಯಾಗಿರುವುದು ಕಾವೇರಿ ನೀರಿನ ಅಭಾವಕ್ಕೆ ನಿಸರ್ಗವೇ ತಾತ್ಕಾಲಿಕವಾಗಿ ನೀಡಿದ ಪರಿಹಾರವಾಗಿದೆ". ಆದರೆ, ರಾಜ್ಯ ಸರ್ಕಾರ ಈ ವಿಷಯದಲ್ಲಿ ನಿರಾಳವಾಗಿ ಕೂರುವಂತಿಲ್ಲ. ವರ್ಷವಿಡೀ ರಾಜ್ಯಕ್ಕೆ ಕುಡಿಯುವ ನೀರು ಹಾಗೂ ರೈತರ ಕೃಷಿಗೆ ನೀರು ಪೂರೈಸುವುದು ಬಹುಮುಖ್ಯವಾದ ಸವಾಲಾಗಿದೆ" ಎಂದರು.

**ಸುಪ್ರೀಂ ಕೋರ್ಟ್‌ನಲ್ಲಿ ಸೂಕ್ತ ವಾದ ಮಂಡಿಸಲಿ**

ಪ್ರತಿ 15 ದಿನಗಳಿಗೊಮ್ಮೆ ಸಿಡಬ್ಲ್ಯುಆರ್‌ಸಿ (ಕಾವೇರಿ ನೀರು ನಿಯಂತ್ರಣ ಸಮಿತಿ) ಹಾಗೂ ತಿಂಗಳಿಗೊಮ್ಮೆ ಸಿಡಬ್ಲ್ಯು ಎಂಎ (ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ) ಸಭೆಗಳು ನಡೆಯಲಿದ್ದು, ಕಷ್ಟಕಾಲದ ಸೂತ್ರದ ಆಧಾರದ ಮೇಲೆ ನೀರು ಬಿಡಬೇಕಾಗುತ್ತದೆ. ಈಗಾಗಲೇ ಡಿಎಂಕೆ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಬರುವ ಸೋಮವಾರ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯಲಿದೆ. ರಾಜ್ಯ ಸರ್ಕಾರ ತನ್ನ ಬಳಿ ಇರುವ ಸಮಗ್ರ ದತ್ತಾಂಶಗಳನ್ನು ಆಧಾರವಾಗಿಟ್ಟುಕೊಂಡು ಸುಪ್ರೀಂ ಕೋರ್ಟ್‌ನಲಿ ಸರಿಯಾದ ವಾದ ಮಂಡಿಸಬೇಕು. ಇಲ್ಲವಾದಲ್ಲಿ ಕೋರ್ಟ್‌ನಿಂದ ಕಠಿಣ ಆದೇಶ ಬಂದರೆ ರಾಜ್ಯ ಸರ್ಕಾರ ಮತ್ತೆ ಸಂಕಷ್ಟಕ್ಕೆ ಸಿಲುಕಲಿದೆ ಎಂದು ಅವರು ಹೇಳಿದರು.

**ಸರ್ಕಾರದ ಸಾಧನೆಯಲ್ಲ**

ನೀರು ಬಿಡುವ ಪ್ರಮಾಣವನ್ನು 9,500 ರಿಂದ 3,000 ಕ್ಯೂಸೆಕ್‌ಗೆ ಇಳಿಸಿರುವುದನ್ನೇ ಸರ್ಕಾರ ದೊಡ್ಡ ಸಾಧನೆ ಎಂದು ಬಿಂಬಿಸಿಕೊಳ್ಳುತ್ತಿರುವುದಕ್ಕೆ ಬೊಮ್ಮಾಯಿ ಆಕ್ಷೇಪ ವ್ಯಕ್ತಪಡಿಸಿದರು. ರೈತರಿಗೆ, ನಾಲೆಗಳಿಗೆ ಹಾಗೂ ಕೆರೆಗಳಿಗೆ ನೀರು ತುಂಬಿಸಿದ್ದರೆ ಅದನ್ನು ಸಾಧನೆ ಎನ್ನಬಹುದಿತ್ತು. ಕೆಆರ್‌ಎಸ್ ಅಣೆಕಟ್ಟಿನಿಂದ ಹನಿ ನೀರನ್ನೂ ನಮ್ಮ ರೈತರಿಗೆ ಬಿಡದೆ, ಸಾಧನೆ ಎಂದು ಬಿಂಬಿಸಿಕೊಳ್ಳುವುದು ಸರಿಯಲ್ಲ" ಎಂದು ಹೇಳಿದರು.

**ರೈತರಿಗೆ ಸೂಕ್ತ ಪರಿಹಾರ ನೀಡಲು ಆಗ್ರಹ:**

ಮುಂಗಾರು ಮತ್ತು ಹಿಂಗಾರು ಬೆಳೆಗಳಿಗೆ ನೀರಿಲ್ಲದ ಕಾರಣ 'ಬಿತ್ತನೆ ಮಾಡಬೇಡಿ' ಎಂದು ಸರ್ಕಾರ ಹೇಳಿದ್ದರೂ, ರೈತರು ಶೇ. 70ರಷ್ಟು ಬಿತ್ತನೆ ಮಾಡಿದ್ದಾರೆ. ಕೃಷಿ ಚಟುವಟಿಕೆ ಮಾಡಬೇಡಿ ಎಂದ ಮೇಲೆ ರೈತರ ಸಂಪೂರ್ಣ ವರ್ಷದ ಜೀವನೋಪಾಯಕ್ಕೆ ಸರ್ಕಾರ ನೀಡುವ ನಷ್ಟ ಪರಿಹಾರ ಏನು? ಎಂದು ಬೊಮ್ಮಾಯಿ ಪ್ರಶ್ನಿಸಿದರು.

ಮುಂದಿನ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿಯೂ ಕಾವೇರಿ ನೀರಿನ ಅಭಾವ ಹಾಗೂ ನೀರು ಬಿಡುವಂತೆ ಆದೇಶಗಳು ಬರುವ ಸಾಧ್ಯತೆ ಇದೆ. ಆದ್ದರಿಂದ ಬೇಸಿಗೆಯಲ್ಲಿ ಬೆಂಗಳೂರು, ಮಂಡ್ಯ, ಮೈಸೂರು ಭಾಗಗಳಿಗೆ ಕುಡಿಯುವ ನೀರು ಹಾಗೂ ಕೃಷಿ ನೀರಿಗೆ ಯಾವುದೇ ತೊಂದರೆಯಾಗದಂತೆ ಹೆಜ್ಜೆಯಿಡಬೇಕು ಎಂದು ಬೊಮ್ಮಾಯಿ ಸರ್ಕಾರವನ್ನು ಆಗ್ರಹಿಸಿದರು.

**ಮೇಕೆದಾಟುವಿಗೆ ಸಹಕಾರ**

ಮೇಕೆದಾಟು ಯೋಜನೆಯನ್ನು ನಾವೆಲ್ಲರೂ ಸೇರಿ ಒಟ್ಟಿಗೆ ಮಾಡಬೇಕು ಎಂದು ಹೇಳಿದ್ದಾರೆ. ಅದಕ್ಕೆ ತಾತ್ವಿಕವಾಗಿ ನಮ್ಮ ಒಪ್ಪಿಗೆಯೂ ಇದೆ. ಹಲವಾರು ವಿಚಾರಗಳಲ್ಲಿ ರಾಜ್ಯದ ಹಿತದೃಷ್ಟಿಯಿಂದ ನಾವೆಲ್ಲಾ ಬೆಂಬಲ ಕೊಟ್ಟಿದ್ದೇವೆ.

ಆದರೆ, ರೈತರ ವಿಚಾರದಲ್ಲಿ ಹಾಗೂ ಜನಸಾಮಾನ್ಯರ ಕುಡಿಯುವ ನೀರಿನ ವಿಚಾರದಲ್ಲಿ ನಾವು ಈ ಸರ್ಕಾರಕ್ಕೆ ಎಚ್ಚರಿಕೆಯನ್ನು ನೀಡಿದ್ದೇವೆ. ನೀರಿನ ನಿರ್ವಹಣೆಯನ್ನು ಸರಿಯಾಗಿ ಮಾಡಬೇಕು. ಇಲ್ಲದಿದ್ದರೆ, ಈ ಭಾಗದ ಜನ ನಿಮ್ಮನ್ನು ಕ್ಷಮಿಸುವುದಿಲ್ಲ ಎನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ ಎಂದರು.

**ಕೆಆರ್‌ಎಸ್‌ನಿಂದ ನೀರು ಬಿಡಬೇಡಿ**

ಸರ್ಕಾರಕ್ಕೆ ಏನು ಸಲಹೆ ನೀಡಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಇದು ತಾತ್ಕಾಲಿಕ ಶಮನ ಆದರೆ ಈ ಸಮಾಧಾನಕ್ಕೆ ಸರ್ಕಾರ ಸುಮ್ಮನೆ ಕುಳಿತುಕೊಳ್ಳಬಾರದು. ಅವರು ನಿರಂತರವಾಗಿ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಬೇಕು ಮತ್ತು ನಮ್ಮ ಕುಡಿಯುವ ನೀರು ಹಾಗೂ ಬೆಳೆಗಳಿಗೆ ಅಗತ್ಯವಿರುವ ನೀರಿನ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳಬೇಕು. ಅದಕ್ಕೇ ಮೊದಲ ಆದ್ಯತೆ ನೀಡಬೇಕು. ಹೆಚ್ಚುವರಿ ನೀರು ಹೋಗುವುದು ಹೋಗಲಿ. ಕೆಆರ್‌ಎಸ್‌ಗೆ ಈಗ ಒಳಹರಿವು ಹೆಚ್ಚಾಗಿದೆ. ಅದು ಎಲ್ಲಿಯವರೆಗೆ ತುಂಬುವುದಿಲ್ಲವೋ ಅಲ್ಲಿಯವರೆಗೂ ಅಲ್ಲಿಂದ ನೀರು ಬಿಡಬೇಡಿ, ನಮ್ಮ ರೈತರಿಗೆ, ಕಾಲುವೆಗೆ, ಕೆರೆಗಳಿಗೆ ನೀರು ಬಿಡಿ, ಕುಡಿಯುವ ನೀರಿಗೆ ನೀರು ಬಿಡಿ ಅಂತ ಹೇಳಿದ್ದೇವೆ ಎಂದರು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ಗೋವಿಂದ ಕಾರಜೋಳ ಹಾಜರಿದ್ದರು.

# ಮೇಲ್ಮನೆ ಸಭಾಪತಿ ಹೊರಟ್ಟಿ ರಾಜೀನಾಮೆ



**ಬೆಂಗಳೂರು, ಆ.2:** ಕರ್ನಾಟಕ ವಿಧಾನ ಪರಿಷತ್‌ನ ಸಭಾಪತಿ ಬಸವರಾಜ ಹೊರಟ್ಟಿ ಅವರು ತಮ್ಮ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಆ ಮೂಲಕ ಕಳೆದ ಕೆಲವು ದಿನಗಳಿಂದ ರಾಜ್ಯ ರಾಜಕಾರಣದಲ್ಲಿ ಹರಿದಾಡುತ್ತಿದ್ದ ವದಂತಿ ನಿಜವಾಗಿದೆ. ಎರಡು ದಿನಗಳ ಹಿಂದಷ್ಟೇ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡುವ ಕುರಿತು ಹರಿದಾಡುತ್ತಿದ್ದ ಸುದ್ದಿಗಳನ್ನು ಅವರು ತಳ್ಳಿಹಾಕಿ, ತಮ್ಮ ಮೇಲೆ ಒತ್ತಡ ಇಲ್ಲ ಎಂದು ಸ್ಪಷ್ಟಪಡಿಸಿದ್ದರು.

ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ್ದ ಹೊರಟ್ಟಿ ಪರಿಷತ್ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ನನ್ನ ಮೇಲೆ ಯಾರೂ ಒತ್ತಡ ಹಾಕಿಲ್ಲ. ಇದು ಗಾಳಿ ಸುದ್ದಿ' ಎಂದು ಹೇಳಿದ್ದರು. ಅನಾರೋಗ್ಯದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದ ವೇಳೆ ಸಿಎಂ ಡಿ.ಕೆ. ಶಿವಕುಮಾರ್ ಆರೋಗ್ಯ ವಿಚಾರಿಸಿದ್ದರೂ, ರಾಜೀನಾಮೆ ಕುರಿತು ಪ್ರಸ್ತಾಪ ಮಾಡಿರಲಿಲ್ಲ ಎಂದಿದ್ದರು. ಅಲ್ಲದೆ, ಕಾಂಗ್ರೆಸ್‌ನ ಇಬ್ಬರು ಸದಸ್ಯರು ಸಭಾಪತಿ ಸ್ಥಾನದ ಮೇಲೆ ಕಣ್ಣಿಟ್ಟಿದ್ದು, ಅವರೇ ಇಂತಹ ಗಾಳಿ ಸುದ್ದಿಗಳನ್ನು ಹರಡುತ್ತಿದ್ದಾರೆ ಎಂದು ಆರೋಪಿಸಿದ್ದರು.

ಇದೇ ವೇಳೆ, ನಾನು ಕುರ್ಚಿಗೆ ಅಂಟಿಕೊಂಡಿಲ್ಲ. ಸರ್ಕಾರ ಸೂಚಿಸಿದರೆ ತಕ್ಷಣ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ. ಅವಿಶ್ವಾಸ ನಿರ್ಣಯ ಬರುವವರೆಗೂ ಕಾಯುವುದಿಲ್ಲ. ಮುಖ್ಯಮಂತ್ರಿ ಮೇಲೆ ಒತ್ತಡವಿದ್ದರೆ ನನ್ನನ್ನು ಬದಲಿಸಲಿ' ಎಂದು ಹೇಳಿದ್ದರು.

# ರವಿಚಂದ್ರ ಶೆಟ್ಟಿ ಅವರ ಕಲಾಸೇವೆಯನ್ನು ಯುವಪೀಳಿಗೆಯು ಸ್ಮರಿಸಬೇಕು- ಕೆರೆಮನೆ ಶಿವಾನಂದ ಹೆಗಡೆ






**ನವದೆಹಲಿ, ಆ.2:** ಜನಾನುರಾಗಿಯಾಗಿ ತನ್ನನ್ನು ತಾನು ಸಮರ್ಪಣಾ ಮನೋಭಾವದಿಂದ ತೊಡಗಿಸಿಕೊಂಡ ರವಿಚಂದ್ರ ಶೆಟ್ಟಿಯವರ ಅಗಲಿಕೆ ಕಲಾಲೋಕಕ್ಕೆ ಅಪಾರ ನೋವು ತಂದಿದೆ. ಅವರ ಕಲಾಸೇವೆಯನ್ನು ಯುವಪೀಳಿಗೆಯು ಸ್ಮರಿಸಬೇಕು ಎಂದು ಖ್ಯಾತ ಯಕ್ಷಗಾನ ಕಲಾವಿದ ಕೆರೆಮನೆ ಶಿವಾನಂದ ಹೆಗಡೆ ಹೇಳಿದರು.

ಅವರು ದೆಹಲಿ ಕರ್ನಾಟಕ ಸಂಘದಲ್ಲಿ ಇತ್ತೀಚೆಗೆ ಅಗಲಿದ ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ಕೇಂದ್ರ ಘಟಕದ ಜೊತೆ ಕಾರ್ಯದರ್ಶಿ, ಸಮಾಜಬಂಧು, ಸಹೃದಯಿ ರವಿಚಂದ್ರ ಶೆಟ್ಟಿ ಅಶೋಕನಗರ ಇವರಿಗೆ ಯಕ್ಷಧ್ರುವ ಫೌಂಡೇಶನ್ ದೆಹಲಿ ಘಟಕದ ವತಿಯಿಂದ ಭಾವಚಿತ್ರಕ್ಕೆ ಪುಷ್ಪವನ್ನು ಅರ್ಪಿಸಿ, ನುಡಿನಮನಗೈಯುತ್ತಾ ಇಂದಿನ ಕಾಲದಲ್ಲಿ ಸಮಾಜ ಸೇವೆಯಲ್ಲಿ ಸಕ್ರಿಯವಾಗಿರುವವರೇ ವಿರಳ. ಆದರೆ ರವಿಚಂದ್ರ ಶೆಟ್ಟಿ ಅವರ ಸಾಮಾಜಿಕ ಕಳಕಳಿ, ಧಾರ್ಮಿಕ ಚಟುವಟಿಕೆ ಮರೆಯಲಾಗದ್ದು. ಇಂತಹ ಕ್ರಿಯಾಶೀಲ ವ್ಯಕ್ತಿತ್ವದ, ಸಜ್ಜನಿಕೆಯ, ಅಪರೂಪದ ವ್ಯಕ್ತಿತ್ವವನ್ನು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಯಕ್ಷಧ್ರುವ ಫೌಂಡೇಶನ್ ದೆಹಲಿ ಘಟಕವು ನೆನಪಿಸಿಕೊಳ್ಳುತ್ತಿರುವುದು ಸ್ಮರಣೀಯ ಎಂದರು.

ಯಕ್ಷಧ್ರುವ ಫೌಂಡೇಶನ್ ದೆಹಲಿ ಘಟಕದ ನಿಕಟಪೂರ್ವ ಅಧ್ಯಕ್ಷ, ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತ ಸಾಮಾಜಿಕ ಹಿತಚಿಂತನೆಯೊಂದಿಗೆ ಕಲಾಸೇವೆಯನ್ನು ತನ್ನ ಬದುಕಿನ ಗುರಿಯಾಗಿಸಿದ್ದ ರವಿಚಂದ್ರ ಶೆಟ್ಟಿ ಅವರು ಯಕ್ಷಧ್ರುವ ಫೌಂಡೇಶನ್ ದೆಹಲಿ ಘಟಕದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಲ್ಲದೆ ಪ್ರಪ್ರಥಮ ಬಾರಿಗೆ ಕಾಶ್ಮೀರದಲ್ಲಿ ನಡೆದ ಯಕ್ಷಗಾನ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ನೆನಪು ಎಂದಿಗೂ ಕಣ್ಮರೆಯಾಗದು ಎಂದರು ಹಾಗೂ ಕಾರ್ಯಕ್ರಮವನ್ನು ನಿರೂಪಿಸಿದರು.

ಪೂಜಾ ರಾವ್ ರವಿಚಂದ್ರ ಶೆಟ್ಟಿಯವರ ಸಮಾಜ ಸೇವೆ, ಸಾಧನೆಯ ಚಿತ್ರಣವನ್ನು ಮುಂದಿಟ್ಟರು. ಯಕ್ಷಧ್ರುವ ಫೌಂಡೇಶನ್ ದೆಹಲಿ ಘಟಕದ ಕಾರ್ಯದರ್ಶಿ ಪ್ರಶಾಂತ ಶೆಟ್ಟಿ ಸಂತಾಪ ಸೂಚಿಸುತ್ತಾ ರವಿಚಂದ್ರ ಶೆಟ್ಟಿಯವರ ಸಾಂಸ್ಕೃತಿಕ ಒಲವಿನ ಜೊತೆಗೆ ದೆಹಲಿಯ ಒಡನಾಟವನ್ನು ಸ್ಮರಿಸಿಕೊಂಡರು.

ಯಕ್ಷಧ್ರುವ ಫೌಂಡೇಶನ್ ದೆಹಲಿ ಘಟಕದ ಗೌರವಾಧ್ಯಕ್ಷ ಶಿವಪ್ರಸಾದ್ ಶೆಟ್ಟಿ, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರಭಾರ ಗೌರವ ಕಾರ್ಯದರ್ಶಿ, ಗೌರವ ಖಜಾಂಚಿ ಕಾಶಿನಾಥ ಬಿರಾದರ್, ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕ ಉಮೇಶ್ ಬಿ. ಆರ್., ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷ ಶಾಂತಕುಮಾರ್ ನಿಂಬಾಳ, ದೆಹಲಿ ತುಳುಸಿರಿಯ ಮಾಜಿ ಅಧ್ಯಕ್ಷ ಕೆ. ಆರ್. ರಾಮಮೂರ್ತಿ ಹಾಗೂ ದೆಹಲಿ ಕನ್ನಡಿಗರು, ಯಕ್ಷಪ್ರೇಮಿಗಳು ಉಪಸ್ಥಿತರಿದ್ದರು.

# ಸರಿಯಾದ ನಿದ್ದೆ ಯೋಗ ಸಮಾಧಿ ಡಿನ್ನರ್ ನಮ್ಮ ಸಂಸ್ಕೃತಿಯಲ್ಲ




ಗೋಕರ್ಣ : ಆಹಾರ ಹಾಗೂ ನಿದ್ದೆ ಪರಸ್ಪರ ಸಂಬಂಧಿತವಾಗಿದೆ. ನಿದ್ದೆ ಚನ್ನಾಗಿ ಬರಲು ಹಸಿವು ಅಗತ್ಯ ಹಾಗೂ ಆಹಾರ ಸರಿಯಾಗಿದ್ದರೆ ಸರಿಯಾದ ನಿದ್ರೆ ಪ್ರಾಪ್ತವಾಗುತ್ತದೆ. ದೇಹಕ್ಕೆ ಸಂಬಂಧಿಸಿದ ಮೂರು ಉಪಾಂಗಗಳಲ್ಲಿ ನಿದ್ದೆ ಹಾಗೂ ಆಹಾರ ಪ್ರಮುಖವಾಗಿವೆ ಎಂದು ಶ್ರೀರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ರಾಘವೇಶ್ವರ ಭಾರತೀ ಮಹಾಸ್ವಾಮೀಜಿ ಪ್ರತಿಪಾದಿಸಿದ್ದಾರೆ.

ಗೋಕರ್ಣದ ಅಶೋಕೆಯ ಮೂಲಮಠದ ಪರಿಸರದಲ್ಲಿ ನಡೆಯುತ್ತಿರುವ 'ಅನ್ನಬ್ರಹ್ಮ ಚಾತುರ್ಮಾಸ್ಯ'ದ ಧರ್ಮಸಭೆಯಲ್ಲಿ ಭಾನುವಾರ 'ಅನ್ನಂ ಬ್ರಹ್ಮ' ಪ್ರವಚನ ಸರಣಿಯಲ್ಲಿ ನಿದ್ದೆಯೆಂಬ ಪೂಜೆ ವಿಚಾರವಾಗಿ ಆಶೀರ್ವಚನ ನೀಡಿ, ನಿದ್ರೆ ಕೇವಲ ಒಂದು ಅವಸ್ಥೆಯಲ್ಲ. ಅದು ಮಾತೃಸ್ವರೂಪಿಣಿ ದೇವಿಯೇ ಆಗಿದ್ದು, ಶ್ರಮವನ್ನು ಕಳೆಯಲು, ಶರೀರ ಹಾಗೂ ಮನಸ್ಸಿಗೆ ಆದ ಹಾನಿಯನ್ನು ಸರಿಪಡಿಸಲು, ಶಕ್ತಿತುಂಬಲು ಹಾಗೂ ಹೊಸ ಚೈತನ್ಯವನ್ನು ತುಂಬಲು ನಿದ್ದೆ ಸಹಕಾರಿ. ಸಕಾಲದಲ್ಲಿ ಬರುವ ನಿದ್ರೆ ಸುಖ, ಆರೋಗ್ಯ ಹಾಗೂ ಹಲವಾರು ಸಿದ್ಧಿಗಳನ್ನು ನೀಡುತ್ತದೆ ಎಂದು ತಿಳಿಸಿದರು. ನಿದ್ರೆ ಸರಿಯಾಗಿ ಬಂದಾಗ ಅದು ಸಮಾಧಿಸ್ಥಿತಿ ಎಂದು ಶಂಕರಾಚಾರ್ಯರು ಉಲ್ಲೇಖಿಸಿದ್ದು, ರಾತ್ರಿ ಹಾಗೂ ಬೆಳಗ್ಗೆಯ ನಡುವಿನ ಎರಡು ಯಾಮಗಳು ನಿದ್ದೆಗೆ ಸೂಕ್ತ ಎಂದು ಶಾಸ್ತ್ರಗಳು ಹೇಳಿವೆ. ಮಧ್ಯರಾತ್ರಿ ಸಮಾನವಾಗಿ ಬರುವಂತೆ ನಿದ್ದೆ ಮಾಡಿದಾಗ ಅದು ಬರಿಯ ನಿದ್ದೆಯಲ್ಲ, ಯೋಗ ಸಮಾಧಿ ಎಂದು ಕರೆಸಿಕೊಳ್ಳುತ್ತದೆ ಎಂದ ಶ್ರೀಗಳು, ಪೂರ್ವಕ್ಕೆ ತಲೆಹಾಕಿ ಮಲಗಿದಾಗ ಸಂಪತ್ತು ಪ್ರಾಪ್ತಿ, ದಕ್ಷಿಣಕ್ಕೆ ಮಲಗಿದಾಗ ಆಯಸ್ಸಿನ ವೃದ್ಧಿ, ಪಶ್ಚಿಮಕ್ಕೆ ಮಲಗಿದಾಗ ಚಿಂತೆ ಹೆಚ್ಚಾಗುವುದು ಹಾಗೂ ಉತ್ತರಕ್ಕೆ ಮಲಗಿದಾಗ ಮೃತ್ಯು ಸಂಭವ ಎಂದು ವಿವರಿಸಿ, ನಿದ್ದೆಗೂ ಪೂರ್ವದಲ್ಲಿ ಸಿದ್ಧತೆಗಳು ಹೇಗಿರಬೇಕು ಎಂದು ವಿಸ್ತಾರವಾಗಿ ಮಾಹಿತಿ ನೀಡಿದರು.

# ಹವಾಮಾನ-ಸಹನಶೀಲ ಕೃಷಿ ಮತ್ತು ಶಾಸನಾತ್ಮಕ ಸಾಮರ್ಥ್ಯ ನಿರ್ಮಾಣ ಕುರಿತು ದೆಹಲಿಯಲ್ಲಿ ಎನ್‌ಎಫ್‌ಟಿಆರ್‌ಸಿ ಕಾರ್ಯಾಗಾರ




**ನವದೆಹಲಿ, ಆ.2:** ನೇಷನ್ ಫಸ್ಟ್ ಪಾಲಿಸಿ ರಿಸರ್ಚ್ ಅಂಡ್ ಚೇಂಜ್ ಫೌಂಡೇಶನ್ ನಿಂದ ನವದೆಹಲಿಯ ಇಂಡಿಯಾ ಹ್ಯಾಬಿಟಾಟ್ ಸೆಂಟರ್‌ನ ಗುಲ್‌ಮೊಹರ್ ಹಾಲ್‌ನಲ್ಲಿ ಸಂಸದರು ಮತ್ತು ಶಾಸಕರಿಗಾಗಿ ಹವಾಮಾನ–ಸಹನಶೀಲ ಕೃಷಿ, ಬೆಳೆ ವಿಮೆ, ನೀರಾವರಿ, ಡಿಜಿಟಲ್ ಸಂವಹನ ಮತ್ತು ಶಾಸನಾತ್ಮಕ ಸಾಮರ್ಥ್ಯ ನಿರ್ಮಾಣ ಕುರಿತಾದ ಕಾರ್ಯಾಗಾರ ಆಯೋಜಿಸಲಾಗಿತ್ತು.

ರಾಜ್ಯಸಭಾ ಸದಸ್ಯ ಹಾಗೂ ಎನ್‌ಎಫ್‌ಟಿಆರ್‌ಸಿ ಫೌಂಡೇಶನ್ ಅಧ್ಯಕ್ಷ ತರುಣ್ ಚುಗ್, ಸಾಕ್ಷ್ಯಾಧಾರಿತ ನೀತಿ ರೂಪಣೆ, ಬೆಳೆ ವೈವಿಧ್ಯೀಕರಣ, ಜಲ ಸಂರಕ್ಷಣೆ, ನೀರಾವರಿ ಮತ್ತು ವಿಮಾ ವ್ಯಾಪ್ತಿಯ ಮಹತ್ವವನ್ನು ಪ್ರತಿಪಾದಿಸಿದರು. ಇವುಗಳು ಭಾರತದ ಕೃಷಿ ಸ್ಥೈರ್ಯವನ್ನು ಬಲಪಡಿಸಿ ವಿಕಸಿತ ಭಾರತದ ದೃಷ್ಟಿಯನ್ನು ಮುಂದುವರಿಸಲು ನೆರವಾಗುತ್ತವೆ ಎಂದು ಅವರು ಹೇಳಿದರು.

ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯ ಡಾ. ಪ್ರವೀಣ್‌ಕುಮಾರ್ ಸಿಂಗ್ ಹಾಗೂ ಐಸಿಎಆರ್‌ನ ಉಪ ಮಹಾನಿರ್ದೇಶಕ ಡಾ.ರಾಜಬೀರ್ ಸಿಂಗ್ ಕೃಷಿಯಲ್ಲಿ ಹವಾಮಾನ ಸ್ಥೈರ್ಯ, ನೀತಿಗಳಿಂದ ಕೊನೆಯ ಹಂತದ ಅನುಷ್ಠಾನವರೆಗೆ ಎಂಬ ವಿಷಯದ ಮೇಲೆ ಮಾತನಾಡಿ, ಪ್ರಾದೇಶಿಕ ಮಟ್ಟದ ಬೆಳೆ ವೈವಿಧ್ಯೀಕರಣ, ಹವಾಮಾನ ಬದಲಾವಣೆ, ತಳಿಗಳು, ಜಲಾನಯನ ಅಭಿವೃದ್ಧಿ, ಮಳೆನೀರು ಸಂಗ್ರಹಣೆ, ಭೂಗರ್ಭ ಜಲ ಪುನರ್ಭರ್ತಿ ಮತ್ತು ಸೂಕ್ಷ್ಮ ನೀರಾವರಿಯ ಮಹತ್ವವನ್ನು ವಿವರಿಸಿದರು. ಹವಾಮಾನ ಬದಲಾವಣೆಯಿಂದ ರೈತರ ಮೇಲೆ ಉಂಟಾಗುವ ಅಪಾಯವನ್ನು ಕಡಿಮೆ ಮಾಡಲು ನಿರಂತರ ಜಲ ಸಂರಕ್ಷಣೆ ಮತ್ತು ಸ್ಥೈರ್ಯಯುತ ಕೃಷಿ ಪದ್ಧತಿಗಳ ಅಗತ್ಯವನ್ನು ಅವರು ಒತ್ತಿಹೇಳಿದರು. ಐಸಿಆರ್‌ಇಆರ್‌ನ ವಿಶಿಷ್ಟ ಪ್ರಾಧ್ಯಾಪಕ ಹಾಗೂ ನೀತಿ ಆಯೋಗದ ಮಾಜಿ ಸದಸ್ಯ ಪ್ರೊ. ರಮೇಶ್‌ಚಂದ್ ಮಾತನಾಡಿ, ವಿಸ್ತೃತ ಮಟ್ಟದಲ್ಲಿ ಕೃಷಿ ನವೋದ್ಯಮ, ತಂತ್ರಜ್ಞಾನ, ಹಣಕಾಸು ಮತ್ತು ಆಡಳಿತ ಕುರಿತು ಮಾತನಾಡಿದರು. ಕೃಷಿ ಸ್ಥೈರ್ಯವನ್ನು ಬಲಪಡಿಸಲು ಹಾಗೂ ದೀರ್ಘಕಾಲೀನ ಬೆಳವಣಿಗೆಗೆ ಬೆಂಬಲ ನೀಡಲು ತಂತ್ರಜ್ಞಾನ, ಬೆಳೆವಿಮೆ, ನೀರಾವರಿ ಯೋಜನೆಗಳು ಹಾಗೂ ಕೃತಕ ಬುದ್ಧಿಮತ್ತೆ, ಡ್ರೋನ್‌ಗಳು ಮತ್ತು ಐಓಟಿ ಮುಂತಾದ ಹೊಸ ಸಾಧನಗಳ ಪಾತ್ರವನ್ನು ಅವರು ವಿವರಿಸಿದರು.

# ಯುವಶಕ್ತಿ ರಾಷ್ಟ್ರದ ಆಸ್ತಿ ರಾಜ್ಯಪಾಲ ಗೆಹಲೋತ್



**ಕೆಂಗೇರಿ:, ಆ.2:** ದೇಶದ ಯುವಶಕ್ತಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸಮರ್ಪಕವಾಗಿ ತೊಡಗಿಕೊಂಡರೆ ಪ್ರಧಾನಿ ನರೇಂದ್ರ ಮೋದಿ ಅವರ ವಿಕಸಿತ ಭಾರತದ ಕನಸು ಅವಧಿಗೆ ಮೊದಲೇ ಸಾಕಾರಗೊಳ್ಳಲಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಭಿಪ್ರಾಯಪಟ್ಟರು.

ದಿಶಾಬೋಧ್ ಫೌಂಡೇಷನ್‌ನ ಸಹಯೋಗದೊಂದಿಗೆ ರಾಜರಾಜೇಶ್ವರಿ ಸಮೂಹ ಸಂಸ್ಥೆ ಆಯೋಜಿಸಿದ್ದ ನಶಾಮುಕ್ತ ಯುವ ಭಾರತ ಸಂಕಲ್ಪ ಅಭಿಯಾನದಲ್ಲಿ ಅವರು ಮಾತನಾಡಿದರು.

ಡ್ರಗ್ಸ್ ಸೇರಿದಂತೆ ಯುವ ಜನರನ್ನು ಕಾಡುತ್ತಿರುವ ಮಾರಕ ಚಟಗಳ ವಿರುದ್ಧ ಜನಾಂದೋಲನ ಆರಂಭಿಸುವ ನಿಟ್ಟಿನಲ್ಲಿ ಮೋದಿ ಅವರು ರಾಷ್ಟ್ರವ್ಯಾಪಿ ಕಾರ್ಯಕ್ರಮ ಆಯೋಜನೆಗೆ ಒತ್ತು ನೀಡುತ್ತಿದ್ದಾರೆ. ಆರೋಗ್ಯವಂತ ಹಾಗೂ ಸುಶಿಕ್ಷಿತ ಯುವ ಜನಾಂಗವೇ ರಾಷ್ಟ್ರದ ನಿಜವಾದ ಆಸ್ತಿ ಮತ್ತು ಶಕ್ತಿಯಾಗಿದೆ. ಯುವಶಕ್ತಿಯನ್ನು ದುಶ್ಚಟಗಳಿಂದ, ನಕಾರಾತ್ಮಕ ಚಿಂತನೆಗಳಿಂದ ದೂರವಿರಿಸಿದರೆ ರಾಷ್ಟ್ರದ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಪ್ರಗತಿಗೆ ಮತ್ತಷ್ಟು ವೇಗ ದೊರೆಯಲಿದೆ ಎಂದು ತಿಳಿಸಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಭಗವಾನ್, ಆರ್.ಆರ್ ಮೆಡಿಕಲ್ ಕಾಲೇಜು ಅಧ್ಯಕ್ಷ ಎ.ಸಿ.ಎಸ್. ಅರುಣ್ ಕುಮಾರ್, ಸಿಇಓ ಸೀತಾರಾಮ್, ಡೀನ್ ಸತ್ಯಮೂರ್ತಿ ಬಿ., ವೈದ್ಯಕೀಯ ಸಲಹೆಗಾರ ಎಸ್. ನವೀನ್ ಉಪಸ್ಥಿತರಿದ್ದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

ಆಗಸ್ಟ್ 3 2026, ಸೋಮವಾರ

## ಒಳಪುಟಗಳಲ್ಲಿ

ನಾಳೆಯಿಂದ ನೀಟ್-ಯುಜಿ ಕೌನ್ಸೆಲಿಂಗ್

ಸೆ.8ರಿಂದ ಶೈಕ್ಷಣಿಕ ಅವಧಿ ಆರಂಭ - ಪು.4

ರಾಜ್ಯಾದ್ಯಂತ ಸುಗಮವಾಗಿ ನಡೆದ ಸಿವಿಲ್ ಪೊಲೀಸ್ ಪೇದೆಗಳ ನೇಮಕಾತಿ ಪರೀಕ್ಷೆ - ಪು.5

ಹೆತ್ತ ಮಡಿಲು ಹೊತ್ತ ಹೆಗಲು ಜ್ಞಾನವಿತ್ತ ಗುರುವನ್ನು ಮರೆಯಬಾರದು: ಶ್ರೀ ರಂಭಾಪುರಿ ಜಗದ್ಗುರುಗಳು ಪು.6

# ಕಾವೇರಿ ವಿವಾದ: ರಾಜ್ಯ ಸರ್ಕಾರದ ನಿಲುವಿಗೆ ಸರ್ವಪಕ್ಷ ಸಭೆ ಒಮ್ಮತದ ಬೆಂಬಲ



**ಬೆಂಗಳೂರು, ಆ.2: ಕಾವೇರಿ ನದಿ ನೀರಿನ ವಿಚಾರವಾಗಿ ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳು ಅಭಿಪ್ರಾಯ ಭೇದ ಮರೆತು ಒಗ್ಗಟ್ಟು ಪ್ರದರ್ಶಿಸಿದ್ದು, ನಾಡಿನ ಹಿತರಕ್ಷಣೆಗೆ ಬದ್ಧತೆ ಘೋಷಿಸಿವೆ. ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಸರ್ವಪಕ್ಷ ಸಭೆಯಲ್ಲಿ ಎಲ್ಲಾ ಪಕ್ಷಗಳ ಪ್ರಮುಖರು, ಮಾಜಿ ಮುಖ್ಯಮಂತ್ರಿಗಳು, ಮಾಜಿ ನೀರಾವರಿ ಸಚಿವರು ಪಾಲ್ಗೊಂಡು ಸಂಕಷ್ಟ ಪರಿಸ್ಥಿತಿಯನ್ನು ಎದುರಿಸುವ ಕುರಿತಂತೆ ಸೂಕ್ತ ಸಲಹೆಗಳನ್ನು ನೀಡಿದರು. ಸಭೆ ಅತ್ಯಂತ ಸೌಹಾರ್ದಯುತವಾಗಿ ನಡೆದಿದ್ದು ವಿಶೇಷವಾಗಿತ್ತು.**

ತಮಿಳುನಾಡಿಗೆ 15 ದಿನಗಳವರೆಗೂ ನಿತ್ಯ 3,500 ಕ್ಯೂಸೆಕ್ ನೀರು ಹರಿಸಬೇಕು ಎಂದು ಕಾವೇರಿ ನೀರು ನಿರ್ವಹಣಾ ಸಮಿತಿ ಮತ್ತು ಪ್ರಾಧಿಕಾರ ಆದೇಶ ನೀಡಿದ ಬಳಿಕ ರಾಜ್ಯದಲ್ಲಿ ಆಕ್ರೋಶದ ಸನ್ನಿವೇಶ ಸೃಷ್ಟಿಯಾಗಿತ್ತು. ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿದ್ದವು.

ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾನುವಾರ ಗೃಹ ಕಚೇರಿ ಕೃಷ್ಣಾದಲ್ಲಿ ಸರ್ವಪಕ್ಷ ಸಭೆ ನಡೆಸಿದರು. ಸಭೆಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಬಿ.ಎಸ್. ಯಡಿಯೂರಪ್ಪ ಎಚ್.ಡಿ.ಕುಮಾರಸ್ವಾಮಿ, ಸದಾನಂದಗೌಡ, ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ಉಪಮುಖ್ಯಮಂತ್ರಿ ಜಿ.ಪರಮೇಶ್ವರ, ಸಚಿವರಾದ ರಾಮಲಿಂಗಾರೆಡ್ಡಿ, ಕೃಷ್ಣಭೈರೇಗೌಡ, ಎಂ.ಬಿ.ಪಾಟೀಲ್, ಕೆ.ಜೆ.ಜಾರ್ಜ್, ಮಾಜಿ ಸಚಿವ ಟಿ.ಬಿ.ಜಯಚಂದ್ರ, ಸಂಸತ್ ಸದಸ್ಯ ಗೋವಿಂದ ಕಾರಜೋಳ, ವಿರೋಧ ಪಕ್ಷದ ನಾಯಕರಾದ ಅಶೋಕ್, ಛಲವಾದಿ ನಾರಾಯಣಸ್ವಾಮಿ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ಮಾಜಿ ಸಚಿವರಾದ ಎಚ್.ಕೆ.ಪಾಟೀಲ್, ಚಲುವರಾಯಸ್ವಾಮಿ, ಸಿ.ಎಸ್.ಪುಟ್ಟರಾಜು, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್ ಬಾಬು, ಎಸ್. ಎಲ್.ಭೋಜೇಗೌಡ, ಶಾಸಕ ದರ್ಶನ್ ಪುಟ್ಟಣ್ಣಯ್ಯ, ನಿವೃತ್ತ ನ್ಯಾಯಾಧೀಶ ನ್ಯಾ. ನಾಗಮೋಹನದಾಸ್, ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಮುಖ್ಯಮಂತ್ರಿಯವರ ವಿಶೇಷ ಸಲಹೆಗಾರ ಜಿ.ಸಿ.ಚಂದ್ರಶೇಖರ್, ಆರ್ಥಿಕ ಸಲಹೆಗಾರ ಎಲ್. ಕೆ.ಅತೀಕ್, ಅಪರ ಮುಖ್ಯಕಾರ್ಯದರ್ಶಿ ತುಷಾರ್ ಗಿರಿನಾಥ್ ಸೇರಿದಂತೆ ಹಿರಿಯ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಹಾಜರಿದ್ದರು.

ಕೊಡಗು ಮತ್ತು ಕೇರಳದ ವಯನಾಡು ಭಾಗದಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಸದ್ಯಕ್ಕೆ ನೀರು ನಿರ್ವಹಣಾ ಪ್ರಾಧಿಕಾರದ ಆದೇಶ ಪಾಲನೆ ಕಷ್ಟಸಾಧ್ಯ ಅಲ್ಲ ಎಂಬ ಅಭಿಪ್ರಾಯಗಳು ಕೇಳಿ ಬಂದವು. ರಾಜ್ಯದ ರೈತರ ಹಿತಾಸಕ್ತಿ ಮತ್ತು ಕುಡಿಯುವ ನೀರಿನ ಭದ್ರತೆಗೆ ಸರ್ಕಾರ ಎಚ್ಚರಿಕೆ ವಹಿಸಬೇಕೆಂಬ ಸಲಹೆಗಳು ವ್ಯಕ್ತವಾದವು.

ಪ್ರಮುಖವಾಗಿ ಮೇಕೆದಾಟು ಯೋಜನೆಯ ಬಗ್ಗೆ ಚರ್ಚೆಯಾಗಿದೆ. ಕೇಂದ್ರ ಸರ್ಕಾರ ಅಣೆಕಟ್ಟು ನಿರ್ಮಾಣಕ್ಕೆ ನೆರೆ ರಾಜ್ಯಗಳ ಅನುಮತಿ ಅಗತ್ಯ ಇಲ್ಲ ಎಂದು ಅಧಿಕೃತವಾಗಿ ಹೇಳಿಕೆ ನೀಡಿದೆ. ನ್ಯಾಯಾಲಯವು ಅಣೆಕಟ್ಟೆ ನಿರ್ಮಾಣದ ಪರವಾಗಿದೆ. ರಾಜ್ಯ ಸರ್ಕಾರ ವಿಳಂಬ ಮಾಡದೇ ಕೂಡಲೇ ವಿಸ್ತೃತ ಯೋಜನಾ ವರದಿಯಲ್ಲಿನ ಸಣ್ಣಪುಟ್ಟ ಲೋಪದೋಷಗಳನ್ನು ಸರಿ ಪಡಿಸಿ, ಪರಿಷ್ಕೃತ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಬೇಕೆಂದು ವಿರೋಧ ಪಕ್ಷದ ನಾಯಕರುಗಳು ಸಲಹೆ ನೀಡಿದ್ದಾರೆ.

ಕೇಂದ್ರ ಸರ್ಕಾರ ರಾಜ್ಯದ ಹಿತರಕ್ಷಣೆ ವಿಚಾರವಾಗಿ ಸಹಕಾರ ನೀಡುತ್ತವೆ ಎಂದು ಮುಖ್ಯಮಂತ್ರಿಯವರು ಸಭೆಗೆ ತಿಳಿಸಿದ್ದಾರೆ. ಸಕಾಲಿಕವಾಗಿ ಸರ್ವ ಪಕ್ಷ ಸಭೆ ಕರೆದ ಮುಖ್ಯಮಂತ್ರಿಯವರ ನಡೆಗೆ ವಿರೋಧ ಪಕ್ಷಗಳು ಮೆಚ್ಚುಗೆ ವ್ಯಕ್ತಪಡಿಸಿವೆ.ಉತ್ತಮ ಮಳೆಯಾಗುತ್ತಿದೆ ಎಂಬ ಕಾರಣಕ್ಕೆ ತಮಿಳುನಾಡಿಗೆ ನೀರು ಹರಿಸುವ ಬದಲಾಗಿ ರಾಜ್ಯದ ಕೆರೆ ಕಟ್ಟೆಗಳು ಮತ್ತು ನಾಲೆಗಳಿಗೆ ನೀರು ಹರಿಸಿ ನಮ ನೀರಿನ ಭದ್ರತೆಯನ್ನು ಖಾತ್ರಿ ಪಡಿಸಿಕೊಳ್ಳಬೇಕೆಂದು ವಿರೋಧ ಪಕ್ಷದ ಸದಸ್ಯರು ಒತ್ತಾಯಿಸಿದ್ದಾರೆ.

ಸರ್ವಪಕ್ಷಗಳ ಸಭೆ ಕರೆದಿರುವಾಗ ಇಲ್ಲಿ ಚರ್ಚೆಯಾಗಿ, ನಿರ್ಣಯ ಕೈಗೊಳ್ಳುವ ಮೊದಲೇ ತಮಿಳುನಾಡಿಗೆ ನೀರು ಹರಿಸಿರುವುದು ಸರಿಯಲ್ಲ ಎಂದು ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ಮಾಜಿ ಸಚಿವ ಎಚ್.ಕೆ.ಪಾಟೀಲ್, ಜಲ ಸಂಪನೂಲ ಇಲಾಖೆಯ ಮಾಜಿ ಸಚಿವ ಎಂ.ಬಿ.ಪಾಟೀಲ್ ಮತ್ತು ಕಾನೂನು ತಜ್ಞರು ಪ್ರಸ್ತುತ ಕಾನೂನು ಸಂಘರ್ಷದ ವಿಚಾರಗಳನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ.

ಮೇಕೆದಾಟು, ಕಳಸಾ-ಬಂಡೂರಿ ಅಣೆಕಟ್ಟುಗಳ ನಿರ್ಮಾಣ, ಭದ್ರಾ ಮೇಲ್ದಂಡೆ ಯೋಜನೆ ಸೇರಿದಂತೆ ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳ ವಿಚಾರವಾಗಿ ಕೇಂದ್ರದ ಗಮನ ಸೆಳೆಯಲು ಸರ್ವಪಕ್ಷ ಗಳ ನಿಯೋಗವನ್ನು ದೆಹಲಿಗೆ ಕರೆದೊಯ್ದು ಪ್ರಧಾನಿಯವರನ್ನು ಭೇಟಿ ಮಾಡುವಂತೆ ಸಲಹೆ ಕೇಳಿಬಂದಿದೆ.

ರಾಜಕೀಯ ಸಂಘರ್ಷಕ್ಕೆ ಅವಕಾಶ ಮಾಡಿಕೊಡದೇ ನಾಡಿನ ಹಿತರಕ್ಷಣೆಯ ವಿಚಾರವಾಗಿ ಒಮತದ ಅಭಿಪ್ರಾಯಗಳಿರಬೇಕೆಂಬ ಚರ್ಚೆಗಳಾಗಿವೆ. ಸಿಡಬ್ಲ್ಯೂಎಂಎ ಆದೇಶದ ಕುರಿತಂತೆ ಸುಪ್ರೀಂಕೋರ್ಟ್‌ಗೆ ಮೇಲನವಿ ಸಲ್ಲಿಸಲು ಸಲಹೆಗಳು ಕೇಳಿ ಬಂದಿದ್ದು, ಈಗಾಗಲೇ ಮೇಲನವಿ ಸಲ್ಲಿಸಲಾಗಿದೆ ಎಂದು ಮುಖ್ಯಮಂತ್ರಿ ಸ್ಪಷ್ಟನೆ ನೀಡಿದ್ದಾರೆ.

ಕೃಷ್ಣಾ, ಗೋದಾವರಿ, ಕಾವೇರಿ ನದಿ ಜೋಡಣೆಗಳ ವಿಚಾರದಲ್ಲಿ ರಾಜ್ಯಕ್ಕೆ ಅನ್ಯಾಯವಾಗದಂತೆ ಎಚ್ಚರಿಕೆ ವಹಿಸಲು ರಾಜಕೀಯ ಪಕ್ಷಗಳ ಮುಖಂಡರುಗಳು ಸಲಹೆ ನೀಡಿದ್ದಾರೆ. ಮಾಜಿ ಮುಖ್ಯಮಂತ್ರಿಗಳು ತಮ ಅನುಭವವನ್ನು ವಿವರಿಸಿದರೆ, ಕೇಂದ್ರ ಸಚಿವರು ರಾಜ್ಯ ಸರ್ಕಾರ ಅನುಸರಿಸಬೇಕಾದ ಕಾರ್ಯತಂತ್ರಗಳ ಬಗ್ಗೆ ತಿಳಿವಳಿಕೆ ನೀಡಿದ್ದಾರೆ.

ಕಾನೂನಾತ್ಮಕ ಹೋರಾಟದ ಜೊತೆಗೆ, ಮಾತುಕತೆಯ ಮೂಲಕವೂ ವಿವಾದವನ್ನು ಬಗೆಹರಿಸುವ ಪ್ರಯತ್ನಕ್ಕೆ ಸರ್ವಪಕ್ಷಗಳ ನಾಯಕರುಗಳು ಬೆಂಬಲ ವ್ಯಕ್ತಪಡಿಸಿದ್ದಾರೆ.

**ಜಲವಿವಾದಕ್ಕೆ ಮೇಕೆದಾಟು ಯೋಜನೆಯೇ ಶಾಶ್ವತ ಪರಿಹಾರ: ಸಿಎಂ**

ಕರ್ನಾಟಕ ಮತ್ತು ತಮಿಳುನಾಡು ನಡುವಿನ ನೀರಿನ ವಿವಾದಕ್ಕೆ ಪ್ರಸ್ತಾವಿತ ಮೇಕೆದಾಟು ಯೋಜನೆಯೇ ಶಾಶ್ವತ ಪರಿಹಾರ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು ಇನ್ನು ಮುಂದೆ ಸಮಯ ವ್ಯರ್ಥ ಮಾಡದೆ ಮೇಕೆದಾಟು ಯೋಜನೆಯನ್ನು ಆರಂಭಿಸಬೇಕಿದೆ. ಈ ಯೋಜನೆ ಎರಡೂ ರಾಜ್ಯಗಳಿಗೆ ಅನುಕೂಲಕರವಾಗಿದೆ. ತಮಿಳುನಾಡಿಗೆ ಹೆಚ್ಚಿನ ಅನುಕೂಲವಾಗಲಿದೆ. ಹಾಗಾಗಿ, ಯೋಜನೆಯನ್ನು ಬಳಸಿಕೊಳ್ಳಬೇಕು ಎಂದರು.

## ಕೇಂದ್ರದಿಂದ ರಾಜ್ಯಗಳಿಗೆ 1.09 ಲಕ್ಷ ಕೋಟಿ ಹೆಚ್ಚುವರಿ ತೆರಿಗೆ ಹಂಚಿಕೆ

ನವದೆಹಲಿ, ಆ.2: ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ 1.09 ಲಕ್ಷ ಕೋಟಿ ರೂಪಾಯಿಗಳ ಹೆಚ್ಚುವರಿ ತೆರಿಗೆ ಹಂಚಿಕೆ ಮಾಡಿದೆ ಎಂದು ಹಣಕಾಸು ಸಚಿವಾಲಯ ಶನಿವಾರ ತಿಳಿಸಿದೆ. ಹೆಚ್ಚುವರಿ ಕಂತು ರಾಜ್ಯಗಳಿಗೆ ಬಂಡವಾಳ ಮತ್ತು ಅಭಿವೃದ್ಧಿ ವೆಚ್ಚವನ್ನು ವೇಗಗೊಳಿಸಲು ಹೆಚ್ಚಿನ ಅವಕಾಶ ನೀಡುವ ಉದ್ದೇಶವನ್ನು ಹೊಂದಿದೆ ಎಂದು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ತೆರಿಗೆ ಹಂಚಿಕೆಯಲ್ಲಿ ಉತ್ತರ ಪ್ರದೇಶವು ಅತಿ ಹೆಚ್ಚು ಪಾಲನ್ನು ಪಡೆದಿದೆ. ಈ ರಾಜ್ಯಕ್ಕೆ 19,208 ಕೋಟಿ ರೂ. ಹಂಚಿಕೆ ಮಾಡಲಾಗಿದೆ. ಬಿಹಾರಕ್ಕೆ 10,845 ಕೋಟಿ ರೂ. ಮತ್ತು ಮಧ್ಯಪ್ರದೇಶಕ್ಕೆ 8,010 ಕೋಟಿ ರೂ. ರಿಲೀಸ್ ಮಾಡಲಾಗಿದೆ. ಪಶ್ಚಿಮ ಬಂಗಾಳಕ್ಕೆ 7,866 ಕೋಟಿ ರೂ. ಮತ್ತು ಮಹಾರಾಷ್ಟ್ರಕ್ಕೆ 7,022 ಕೋಟಿ ರೂ. ನೀಡಲಾಗಿದೆ.

ರಾಜಸ್ಥಾನಗೆ 6,460 ಕೋಟಿ ರೂ., ಒಡಿಶಾಗೆ 4,819 ಕೋಟಿ ರೂ., ಆಂಧ್ರಪ್ರದೇಶಕ್ಕೆ 4,597 ಕೋಟಿ ರೂ., ಕರ್ನಾಟಕಕ್ಕೆ 4,504 ಕೋಟಿ ರೂ. ಮತ್ತು ತಮಿಳುನಾಡಿಗೆ 4,466 ಕೋಟಿ ರೂ. ರಿಲೀಸ್ ಆಗಿದೆ.

ಸಣ್ಣ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಸಹ ತಮ್ಮ ಪಾಲನ್ನು ಪಡೆದಿವೆ. ಸಿಕ್ಕಿಂ 365 ಕೋಟಿ ರೂ., ಗೋವಾ 398 ಕೋಟಿ ರೂ. ಮತ್ತು ನಾಗಾಲ್ಯಾಂಡ್ 524 ಕೋಟಿ ರೂ. ಪಡೆದಿವೆ. ಇದು ಪಟ್ಟಿಯಲ್ಲಿ ಅತ್ಯಂತ ಕಡಿಮೆ ಹಂಚಿಕೆಯಾಗಿದೆ.

ತೆರಿಗೆ ವಿಕೇಂದ್ರೀಕರಣ ಎಂದರೆ ಹಣಕಾಸು ಆಯೋಗವು ಶಿಫಾರಸು ಮಾಡಿದ ಸೂತ್ರದ ಆಧಾರದ ಮೇಲೆ ಕೇಂದ್ರ ಸರ್ಕಾರವು ರಾಜ್ಯಗಳಿಗೆ ನೀಡುವ ಕೇಂದ್ರ ತೆರಿಗೆಗಳ ಪಾಲು. ರಾಜ್ಯಗಳು ತಮ್ಮ ಬಜೆಟ್ಗಳಿಗೆ, ವಿಶೇಷವಾಗಿ ಮೂಲಸೌಕರ್ಯ ಮತ್ತು ಕಲ್ಯಾಣ ಯೋಜನೆಗಳ ಮೇಲಿನ ಬಂಡವಾಳ ವೆಚ್ಚಕ್ಕೆ ಹಣಕಾಸು ಒದಗಿಸಲು ಈ ಪಾಲಿನ ಮೇಲೆ ಹೆಚ್ಚು ಅವಲಂಬಿತವಾಗಿವೆ.

### ಕುಡಿಯುವ ಉದ್ದೇಶ ಹಾಗೂ ಕೆರೆ ತುಂಬಿಸಲು ಕಾವೇರಿ ಕೊಳ್ಳದ ಅಣೆಕಟ್ಟುಗಳಿಂದ ಕಾಲುವೆಗಳಿಗೆ ನೀರು: ಡಿ.ಕೆ.ಶಿವಕುಮಾರ್

# ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಕೆ: ತಜ್ಞರ ಜೊತೆ ಚರ್ಚಿಸಿ ತೀರ್ಮಾನ



**ಬೆಂಗಳೂರು, ಆ.2:** ಕಾವೇರಿ ಭಾಗದ ಅಣೆಕಟ್ಟುಗಳಲ್ಲಿ ಒಳ ಹರಿವಿನ ಪ್ರಮಾಣ 67 ರಿಂದ 68 ಸಾವಿರ ಕ್ಯೂಸೆಕ್‌ನಷ್ಟಿದ್ದು, ಕುಡಿಯುವ ಉದ್ದೇಶಕ್ಕೆ ಹಾಗೂ ಕೆರೆಗಳಿಗೆ ನೀರು ತುಂಬಿಸಲು ಕಾಲುವೆಗಳಿಗೆ ನೀರು ಹರಿಸಲಾಗುತ್ತಿದೆ" ಎಂದು ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ತಿಳಿಸಿದ್ದಾರೆ. ಕಾವೇರಿ ನದಿ ನೀರಿನ ವಿಚಾರವಾಗಿ ಗೃಹ ಕಚೇರಿ ಕೃಷ್ಣಾದಲ್ಲಿ ಸರ್ವಪಕ್ಷಗಳ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು.

**35% ರಷ್ಟು ಮಾತ್ರ ಮಳೆಯಾಗಿದೆ:**

"ಮಳೆ ಬಾರದೆ ರಾಜ್ಯದಲ್ಲಿ ಬರಗಾಲದ ಛಾಯೆ ಆವರಿಸಿದೆ. ಕೇವಲ 30-35%ರಷ್ಟು ಮಾತ್ರ ಮಳೆಯಾಗಿದೆ. ನಾವು ಮಾರ್ಗದರ್ಶನ ನೀಡುವವರೆಗೆ ಬೆಳೆ ಹಾಕಿಕೊಳ್ಳಬೇಡಿ ಎಂದು ನಾವು ರೈತರಿಗೆ ಮನವಿ ಮಾಡಿದ್ದೇವೆ. ತಮಿಳುನಾಡು 9 ಟಿಎಂಸಿ ನೀರು ನೀಡಬೇಕು ಎಂದು ಮನವಿ ಮಾಡಿತ್ತು. ಆದರೆ ಕಾವೇರಿ ನೀರು ನಿಯಂತ್ರಣ ಸಮಿತಿ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ತಮಿಳುನಾಡಿಗೆ 15 ದಿನಗಳ ಕಾಲ ನಿತ್ಯ 3,500 ಕ್ಯೂಸೆಕ್ಸ್ ನೀರು ಹರಿಸಬೇಕು ಎಂದು ಆದೇಶ ನೀಡಿದೆ" ಎಂದು ತಿಳಿಸಿದರು. "ಈ ಆದೇಶ ಬಂದಾಗ ನಮ್ಮ ಅಣೆಕಟ್ಟುಗಳು ತುಂಬಿರಲಿಲ್ಲ. ಮಳೆಯೂ ಇರಲಿಲ್ಲ. ರಾಜ್ಯದ ಜನರ ಪ್ರಾರ್ಥನೆಯಂತೆ ಮಳೆಯಾಗಿದ್ದು, ನಮ್ಮ ಪರಿಸ್ಥಿತಿ ಸ್ವಲ್ಪ ಮಟ್ಟಿನ ಸುಧಾರಣೆ ಕಂಡಿದೆ. ಭಾನುವಾರ ಮಧ್ಯಾಹ್ನದವರೆಗೆ ನನಗೆ ಬಂದಿರುವ ಮಾಹಿತಿ ಪ್ರಕಾರ, ಕಬಿನಿಯಲ್ಲಿ 24,000, ಕೆಆರ್ ಎಸ್ ನಲ್ಲಿ 22,000, ಹೇಮಾವತಿಯಲ್ಲಿ 11,884, ಹಾರಂಗಿಯಲ್ಲಿ 10,430 ಕ್ಯೂಸೆಕ್ ನೀರು ಒಳ ಹರಿವು ಇದೆ. ಎಷ್ಟೇ ಕಷ್ಟದ ಪರಿಸ್ಥಿತಿ ಬಂದರೂ ಕುಡಿಯುವ ನೀರಿನ ಭದ್ರತೆಗೆ ಜಲಾಶಯಗಳಲ್ಲಿ 40 ಟಿಎಂಸಿ ನೀರು ಉಳಿಸಿಕೊಳ್ಳಬೇಕು. ಅದರಲ್ಲಿ 36 ಟಿಎಂಸಿ ಕುಡಿಯುವ ಉದ್ದೇಶಕ್ಕೆ ಹಾಗೂ 4 ಟಿಎಂಸಿ ಆವಿಯಾಗುತ್ತದೆ" ಎಂದು ವಿವರಿಸಿದರು..

**ಬಂದ್ ಕೈಬಿಡಿ**

"ಕೆಲವು ಸಂಘ ಸಂಸ್ಥೆಗಳು ಪ್ರತಿಭಟನೆ ಮಾಡುತ್ತಿದ್ದಾರೆ. ದೇವರು ಕಳೆದ ಎರಡು ದಿನಗಳಿಂದ ಕೃಪೆ ತೋರಿದ ಪರಿಣಾಮ ಪರಿಸ್ಥಿತಿ ಶಾಂತವಾಗಿದೆ. ರೈತರು, ಕನ್ನಡ ಪರ ಎಲ್ಲಾ ಸಂಘಟನೆಗಳು ಆ. 13ರಂದು ಹಮ್ಮಿಕೊಂಡಿರುವ ಬಂದ್ ಅನ್ನು ಕೈಬಿಡಬೇಕು. ಸಂಘಟನೆ ಜೊತೆಗೆ ನಾನು ಹಾಗೂ ಸಚಿವರು ಚರ್ಚೆ ಮಾಡುತ್ತೇವೆ. ಬಂದ್ ಮಾಡುವುದರಿಂದ ಯಾವುದೇ ಪರಿಹಾರ ಸಿಗಲ್ಲ. ಸರ್ಕಾರವೇ ನಿಮ್ಮ ಪರವಾಗಿ ನಿಂತಿರುವಾಗ ಪ್ರತಿಭಟನೆ ಮಾಡುವ ಅಗತ್ಯವಿಲ್ಲ.

– ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

**ಕಬಿನಿ ಜಲಾಶಯ ಭರ್ತಿ**

"ಈ ಹಿಂದಿನ ವರ್ಷಗಳಲ್ಲಿ ನಾವು ತಮಿಳುನಾಡಿಗೆ ಜೂನ್ ತಿಂಗಳಲ್ಲಿ 9.19 ಟಿಎಂಸಿ ನೀರು ಹಾರಿಸಿದ್ದೆವು. ಆದರೆ ಈ ವರ್ಷ 2.9 ಟಿಎಂಸಿ ನೀರು ಬಿಟ್ಟಿದ್ದೇವೆ. ಕಳೆದ ವರ್ಷ ಜುಲೈ ನಲ್ಲಿ 31 ಟಿಎಂಸಿ ನೀರು ಹರಿಸಲಾಗಿತ್ತು. ಈ ವರ್ಷ 0.7 ಟಿಎಂಸಿ ನೀರು ಮಾತ್ರ ಹರಿಸಿದ್ದೇವೆ. ನಾವು ಈ ವರ್ಷ ಈವರೆಗೆ 40 ಟಿಎಂಸಿ ನೀರು ಹರಿಸಬೇಕಿತ್ತು. ಆದರೆ ನಾವು ಹರಿಸಿರುವುದು 3.6 ಟಿಎಂಸಿ ಮಾತ್ರ. ನಾವು ಈ ವರ್ಷ ಜಲಾಶಯಗಳಿಂದ ನೀರು ಬಿಟ್ಟಿಲ್ಲ. ಕಬಿನಿ ಜಲಾಶಯ ತುಂಬಿರುವ ಹಿನ್ನೆಲೆಯಲ್ಲಿ ಅದರ ಸುರಕ್ಷತೆ ಹಿತದೃಷ್ಟಿಯಿಂದ ಅಣೆಕಟ್ಟು ಮೂಲಕ ನೀರು ಹರಿಸಲು ಆದೇಶ ನೀಡಿದ್ದೇವೆ" ಎಂದರು.

"ಈ ವಿಚಾರದಲ್ಲಿ ಎಲ್ಲಾ ಸಂಸದರು, ವಿರೋಧ ಪಕ್ಷದ ನಾಯಕರು ರಾಜ್ಯ ಸರ್ಕಾರದ ತೀರ್ಮಾನಕ್ಕೆ ಬದ್ಧ ಎಂದು ತಿಳಿಸಿದ್ದಾರೆ. ಆ ನಾಯಕರ ಸಲಹೆಗಳನ್ನು ಕಾನೂನು ಚೌಕಟ್ಟಿನಲ್ಲಿ ತಜ್ಞರು ಹಾಗೂ ಸಚಿವ ಸಹೋದ್ಯೋಗಿಗಳ ಜೊತೆ ಚರ್ಚೆ ಮಾಡುತ್ತೇವೆ" ಎಂದು ತಿಳಿಸಿದರು.

"ಇಂದಿನ ಸಭೆಗೆ ಬಂದಿದ್ದ ಮಾಜಿ ಮುಖ್ಯಮಂತ್ರಿಗಳು, ಕೇಂದ್ರದ ಸಚಿವರು, ಸಂಸದರು ರಾಜ್ಯದ ಹಿತಕ್ಕಾಗಿ ಅನೇಕ ವಿಭಿನ್ನ ಸಲಹೆಗಳನ್ನು ನೀಡಿದ್ದಾರೆ. ಸಭೆಗೆ ಆಗಮಿಸಿದ್ದ ಎಲ್ಲಾ ನಾಯಕರಿಗೆ ಸರ್ಕಾರದ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ. ಮಾಜಿ ಮುಖ್ಯಮಂತ್ರಿಗಳು, ಮಾಜಿ ನೀರಾವರಿ ಸಚಿವರು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ನಮ್ಮ ಕಾನೂನು ಆತಜ್ಞರು ಸಭೆಯಲ್ಲಿ ಭಾಗಿಯಾಗಿ ಪರಿಸ್ಥಿತಿ ಹಾಗೂ ಮುಂದಿನ ತೀರ್ಮಾನದ ಬಗ್ಗೆ ಮಾಹಿತಿ ನೀಡಿದ್ದಾರೆ. ಸಂಕಟ ಸೂತ್ರದ ವಿಚಾರದಲ್ಲಿ ಕಾನೂನನ್ನು ಗಮನದಲ್ಲಿಟ್ಟು ಕೊಂಡು ಕಾನೂನು ತಜ್ಞರೊಂದಿಗೆ ಚರ್ಚಿಸಿ ತೀರ್ಮಾನ ಮಾಡಲಾಗುವುದು. ಸುಪ್ರೀಂ ಕೋರ್ಟ್ ನಲ್ಲಿ ಮೇಲ್ಮನವಿ ಸಲ್ಲಿಸುವ ವಿಚಾರದಲ್ಲೂ ಕಾನೂನು ತಜ್ಞರ ಸಲಹೆ ಗಮನದಲ್ಲಿಟ್ಟುಕೊಂಡು ಚರ್ಚೆ ಮಾಡಿ ತೀರ್ಮಾನ ಮಾಡುತ್ತೇವೆ. ರಾಜಕೀಯಕ್ಕಿಂತ ರೈತರ ಮತ್ತು ಜನರ ಹಿತರಕ್ಷಣೆಯೇ ಮುಖ್ಯವಾಗಿದೆ. ಕಾವೇರಿ ವಿವಾದ ನಮಗೂ ಹೊಸದಲ್ಲ, ನಿಮಗೂ ಹೊಸದಲ್ಲ. ಈ ವಿವಾದದೊಂದಿಗೆ ನಾವು ಬೆಳೆದಿದ್ದೇವೆ. ಕುಡಿಯುವ ನೀರಿಗೆ ಮೊದಲ ಆದ್ಯತೆ ನೀಡಬೇಕು ಎಂಬುದು ಸರ್ಕಾರದ ದೃಢ ನಿಲುವಾಗಿದೆ. ಈ ವಿಚಾರದಲ್ಲಿ ಸರ್ವಪಕ್ಷಗಳಿಗೂ ಸಂಪೂರ್ಣ ಸಹಮತವಿದೆ ಎಂಬ ವಿಶ್ವಾಸ ನನಗಿದೆ ಎಂದರು. ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯೂಆರ್‌ಸಿ) ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯೂಎಂಎ) ಸಭೆಗೂ ಮುನ್ನವೇ ಕೇಂದ್ರ ಸಚಿವರಾದ ಸಿ.ಆರ್. ಪಾಟೀಲ್, ಪ್ರಹ್ಲಾದ್ ಜೋಶಿ ಹಾಗೂ ವಿ. ಸೋಮಣ್ಣ ಅವರನ್ನು ಭೇಟಿಮಾಡಿ ರಾಜ್ಯದ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟಿದ್ದೆ. ಅದೇ ರೀತಿ ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಹಾಗೂ ಜಗದೀಶ್ ಶೆಟ್ಟರ್ ಅವರನ್ನೂ ಭೇಟಿ ಮಾಡಿ ರಾಜ್ಯದ ಪರವಾಗಿ ಬೆಂಬಲ ಕೋರಲಾಗಿತ್ತು. ಅವರಿಗೂ ನಾನು ಕೃತಜ್ಞತೆ ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.

# ಕಾಮನ್‌ವೆಲ್ತ್: ಭಾರತದ ಚಿನ್ನದ ಬೇಟೆ



**ಗ್ಲಾಸ್ಗೊ, ಆ.2:** ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತ ತನ್ನ ಪದಕ ಬೇಟೆಯನ್ನು ಮತ್ತಷ್ಟು ವಿಸ್ತರಿಸಿದ್ದು, 39 ಪದಕಗಳನ್ನು ಗೆದ್ದು ಪದಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೆ ಏರಿದೆ.

ಭಾರತದ ಖಾತೆಯಲ್ಲಿ 13 ಚಿನ್ನ, 17 ಬೆಳ್ಳಿ ಹಾಗೂ 9 ಕಂಚಿನ ಪದಕಗಳಿದ್ದು, ಕ್ರೀಡಾಕೂಟದ ಅಂತಿಮ ಹಂತದಲ್ಲಿ ಭಾರತೀಯ ಕ್ರೀಡಾಪಟುಗಳು ಅದ್ಭುತ ಪ್ರದರ್ಶನ ಮುಂದುವರಿಸಿದ್ದಾರೆ.

ಶನಿವಾರ ಭಾರತಕ್ಕೆ ಅತ್ಯಂತ ಯಶಸ್ವಿ ದಿನವಾಗಿದ್ದು, ಒಂದೇ ದಿನ 16 ಪದಕಗಳು ದೇಶದ ಖಾತೆಗೆ ಸೇರಿವೆ. ಅದರಲ್ಲೂ ಬಾಕ್ಸಿಂಗ್‌ನಲ್ಲಿ ಭಾರತೀಯ ಬಾಕ್ಸರ್‌ಗಳು ಐತಿಹಾಸಿಕ ಸಾಧನೆ ಮಾಡಿ ಏಳು ಚಿನ್ನ ಹಾಗೂ ಮೂರು ಬೆಳ್ಳಿ ಪದಕಗಳನ್ನು ಗೆದ್ದು ಮಿಂಚಿದರು. ಅಥ್ಲೆಟಿಕ್ಸ್, ಪ್ಯಾರಾ ಅಥ್ಲೆಟಿಕ್ಸ್ ಹಾಗೂ ಜೂಡೋ ಸ್ಪರ್ಧೆಗಳಲ್ಲೂ ಭಾರತ ಪದಕಗಳ ಕೊಯ್ಲು ನಡೆಸಿತು.

5000 ಮೀಟರ್ ಓಟದಲ್ಲಿ ಗುಲ್ವೀರ್ ಸಿಂಗ್ ಐತಿಹಾಸಿಕ ಪದಕ ಗೆದ್ದು, ಕಾಮನ್‌ವೆಲ್ತ್ ಕ್ರೀಡಾಕೂಟದ ಈ ವಿಭಾಗದಲ್ಲಿ ಪದಕ ಗೆದ್ದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಒಂದೇ ಕ್ರೀಡಾಕೂಟದಲ್ಲಿ ಎರಡು ಅಥ್ಲೆಟಿಕ್ಸ್ ಪದಕ ಗೆದ್ದ ಮೊದಲ ಭಾರತೀಯ ಟ್ರ್ಯಾಕ್ ಅಥ್ಲೀಟ್ ಎಂಬ ದಾಖಲೆಯನ್ನೂ ಅವರು ನಿರ್ಮಿಸಿದ್ದಾರೆ.

ಚಿನ್ನದ ಪದಕ ವಿಜೇತರು: ಮೀರಾಬಾಯಿ ಚಾನು (ವೇಟ್‌ಲಿಫ್ಟಿಂಗ್), ಶರ್ಮಿಳಾ ಧಂಕರ್ (ಪ್ಯಾರಾ ಶಾಟ್‌ಪುಟ್), ಹಾಗೂ ಬಾಕ್ಸಿಂಗ್‌ನಲ್ಲಿ ಏಳು ಭಾರತೀಯ ಬಾಕ್ಸರ್‌ಗಳು ಚಿನ್ನದ ಪದಕ ಗೆದ್ದು ಭಾರತದ ಯಶಸ್ಸಿಗೆ ಪ್ರಮುಖ ಕಾರಣರಾದರು. ಉಳಿದ ಚಿನ್ನದ ಪದಕಗಳು ಅಥ್ಲೆಟಿಕ್ಸ್ ಮತ್ತು ಇತರ ವಿಭಾಗಗಳಿಂದ ಲಭಿಸಿವೆ.

ಇತರ ಪ್ರಮುಖ ಪದಕ ವಿಜೇತರು:

ಸರ್ವೇಶ್ ಕುಶಾರೆ (ಹೈಜಂಪ್?ಬೆಳ್ಳಿ), ಜ್ಞಾನೇಶ್ವರಿ ಯಾದವ್ (ಬೆಳ್ಳಿ), ವಲ್ಲೂರಿ ಅಜಯ ಬಾಬು (ಬೆಳ್ಳಿ), ಬಿಂದ್ಯಾರಾಣಿ ದೇವಿ (ಕಂಚು), ಶಿಲ್ಪಾ ಕೆ. ಶೈಲಾ (ಕಂಚು), ಉನ್ನತಿ ಶರ್ಮಾ (ಜೂಡೋ?ಕಂಚು) ಹಾಗೂ ಗುಲ್ವೀರ್ ಸಿಂಗ್ (5000 ಮೀ.?ಪದಕ) ಗಮನಾರ್ಹ ಸಾಧನೆ ಮಾಡಿದ್ದಾರೆ.

ಭಾರತದ ಹಲವು ಕ್ರೀಡಾಪಟುಗಳು ಇನ್ನೂ ಅಂತಿಮ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲಿರುವುದರಿಂದ ಪದಕಗಳ ಸಂಖ್ಯೆ ಮತ್ತಷ್ಟು ಹೆಚ್ಚುವ ನಿರೀಕ್ಷೆ ಮೂಡಿದೆ.

# ಆ.5: ದೆಹಲಿಯಲ್ಲಿ ಶೇಖ್ ಹಸೀನಾ ಮೊದಲ ಬಹಿರಂಗ ಸುದ್ದಿಗೋಷ್ಠಿ



**ನವದೆಹಲಿ, ಆ.2:** ಬಾಂಗ್ಲಾದೇಶದಲ್ಲಿ ನಡೆದ ಬೃಹತ್ ವಿದ್ಯಾರ್ಥಿ ಚಳವಳಿಯ ಪರಿಣಾಮವಾಗಿ ಅಧಿಕಾರದಿಂದ ಪದಚ್ಯುತಗೊಂಡ ಸುಮಾರು ಎರಡು ವರ್ಷಗಳ ನಂತರ, ಬಾಂಗ್ಲಾ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರು ಮೊದಲ ಬಾರಿಗೆ ಭಾರತದಲ್ಲಿ ಮಾಧ್ಯಮಗಳ ಮುಂದೆ ಸಾರ್ವಜನಿಕವಾಗಿ ಕಾಣಿಸಿಕೊಳ್ಳಲಿದ್ದಾರೆ.

ದೆಹಲಿಯಲ್ಲಿರುವ ಫಾರಿನ್ ಕರೆಸ್ಪಾಂಡೆಂಟ್ಸ್ ಕ್ಲಬ್ ಆಫ್ ಸೌತ್ ಏಷ್ಯಾ ಆಯೋಜಿಸಿರುವ ವರ್ಚುವಲ್ ಕಾರ್ಯಕ್ರಮದಲ್ಲಿ ಹಸೀನಾ ಭಾಗವಹಿಸಲಿದ್ದು, ತಮ್ಮ ಭವಿಷ್ಯದ ಯೋಜನೆಗಳು ಹಾಗೂ ಬಾಂಗ್ಲಾದೇಶಕ್ಕೆ ಮರಳುವ ಕುರಿತು ಮಾತನಾಡಲಿದ್ದಾರೆ.

ಈ ಮಹತ್ವದ ಮಾಧ್ಯಮ ಸಂವಾದವು ಇದೇ ಆಗಸ್ಟ್ 5ರಂದು ಸಂಜೆ 6ಗಂಟೆಗೆ ದೆಹಲಿಯ ಮಥುರಾ ರಸ್ತೆಯಲ್ಲಿರುವ 'ಸರ್ ಮಾರ್ಕ್ ಟಲ್ಲಿ ಆಡಿಟೋರಿಯಂ'ನಲ್ಲಿ ನಡೆಯಲಿದೆ. ಅಲ್ಲದೆ, ಕ್ಲಬ್‌ನ ಅಧಿಕೃತ ಸಾಮಾಜಿಕ ಜಾಲತಾಣಗಳಲ್ಲೂ ಈ ಕಾರ್ಯಕ್ರಮ ನೇರಪ್ರಸಾರವಾಗಲಿದೆ.

**ಅಧಿಕಾರ ಪತನದ ನಂತರದ ಮೊದಲ ಪ್ರಮುಖ ಭೇಟಿ!**

ಬಾಂಗ್ಲಾದೇಶದಲ್ಲಿ 15 ವರ್ಷಗಳ ಕಾಲ ನಡೆದ ಶೇಖ್ ಹಸೀನಾ ಅವರ ಆಡಳಿತವು 2024ರ ಆಗಸ್ಟ್ 5ರಂದು ಅಂತ್ಯಗೊಂಡಿತ್ತು. ಉದ್ಯೋಗ ಮೀಸಲಾತಿ, ಕೋಟಾ ಪದ್ಧತಿಯ ವಿರುದ್ಧ ಆರಂಭವಾಗಿದ್ದ ವಿದ್ಯಾರ್ಥಿಗಳ ಪ್ರತಿಭಟನೆಯು ಕ್ರಮೇಣ ದೇಶವ್ಯಾಪಿ ಸರ್ಕಾರ ವಿರೋಧಿ ಅಲೆಯಾಗಿ ಮಾರ್ಪಟ್ಟಿತ್ತು. ಪ್ರತಿಭಟನಾಕಾರರು ಢಾಕಾದಲ್ಲಿನ ಸರ್ಕಾರಿ ಕಟ್ಟಡಗಳಿಗೆ ನುಗ್ಗಿ ಧ್ವಂಸಗೊಳಿಸಿದ ನಂತರ ಹಸೀನಾ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿ ಭಾರತಕ್ಕೆ ಪಲಾಯನ ಮಾಡಿದ್ದರು. ಭಾರತದಲ್ಲಿ ಆಶ್ರಯ ಪಡೆದಂದಿನಿಂದ ಅವರು ಯಾವುದೇ ಸಾರ್ವಜನಿಕ ಕಾರ್ಯಕ್ರಮ ಅಥವಾ ಮಾಧ್ಯಮಗಳ ಭೇಟಿಯಿಂದ ದೂರವೇ ಉಳಿದಿದ್ದರು.

**ಪ್ರಮುಖ ಬಾಂಗ್ಲಾ ಗಣ್ಯರ ಭಾಗಿ!**

ಈ ಸಂವಾದ ಕಾರ್ಯಕ್ರಮದಲ್ಲಿ ಶೇಖ್ ಹಸೀನಾ ಅವರೊಂದಿಗೆ ಬಾಂಗ್ಲಾದೇಶದ ಹಲವು ಪ್ರಮುಖರೊಂದಿಗೆ ರಾಜಕೀಯ ನಾಯಕರು, ಮಾಜಿ ರಾಯಭಾರಿಗಳು ಹಾಗೂ ಪ್ರಸಿದ್ಧ ವ್ಯಕ್ತಿಗಳು ಭಾಗವಹಿಸಲಿದ್ದಾರೆ.

**ಬದಲಾದ ಬಾಂಗ್ಲಾದೇಶ ರಾಜಕೀಯ**

ಹಸೀನಾ ಅವರ ನಿರ್ಗಮನದ ನಂತರ ಬಾಂಗ್ಲಾದೇಶದ ರಾಜಕೀಯ ಚಿತ್ರಣ ಸಂಪೂರ್ಣವಾಗಿ ಬದಲಾಗಿದೆ. ನೋಬೆಲ್ ಪುರಸ್ಕೃತ ಮುಹಮ್ಮದ್ ಯೂನಸ್ ನೇತೃತ್ವದಲ್ಲಿದ್ದ ಮಧ್ಯಂತರ ಆಡಳಿತವು 2026ರ ಫೆಬ್ರವರಿಯಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯ ನಂತರ ಮುಕ್ತಾಯಗೊಂಡಿದೆ. ಪ್ರಸ್ತುತ ತಾರಿಖ್ ರೆಹಮಾನ್ ನೇತೃತ್ವದ 'ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ' (ಃಓಕ) ಸರ್ಕಾರ ಆಡಳಿತದಲ್ಲಿದೆ. ಹೊಸ ಸರ್ಕಾರವು ಹಸೀನಾ ಅವರ ಅವಾಮಿ ಲೀಗ್ ಪಕ್ಷದ ನಾಯಕರ ವಿರುದ್ಧ ಕಾನೂನು ಕ್ರಮಗಳನ್ನು ಮುಂದುವರಿಸಿದ್ದು, ಭಯೋತ್ಪಾದನೆ ತಡೆ ಕಾಯ್ದೆಯಡಿ ಪಕ್ಷದ ರಾಜಕೀಯ ಚಟುವಟಿಕೆಗಳ ಮೇಲಿನ ನಿಷೇಧ ಇನ್ನೂ ಜಾರಿಯಲ್ಲಿದೆ.

# ಸಚಿವರ ಪದಗ್ರಹಣಕ್ಕೆ ಎಲ್ಲ ಸಿದ್ಧತೆ ಮಾಡಿಕೊಳ್ಳಿ: ಎಐಸಿಸಿ ಪ್ರಧಾನ ಕಾರ್ಯದರ್ಶಿಗಳ ಸೂಚನೆ

ಬೆಂಗಳೂರು, ಆ. 2– ರಾಜ್ಯ ಸಚಿವ ಸಂಪುಟ ವಿಸ್ತರಣೆಗೆ ರಾಜ್ಯಭವನದಲ್ಲಿ ಸಿದ್ಧತೆಗಳು ಪೂರ್ಣಗೊಂಡಿದೆ. ಸಚಿವರ ಪಟ್ಟಿಯನ್ನು ಹೊತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲ ಇಂದು ಸೋಮವಾರ ಬೆಳಿಗ್ಗೆ ಆಗಮಿಸುವ ನಿರೀಕ್ಷೆ ಇದೆ.

ರಾಜ್ಯ ಸಚಿವ ವಿಸ್ತರಣೆ ಬಗ್ಗೆ ಮೂರು ದಿನಗಳ ಹಿಂದೆ ದೆಹಲಿಯಲ್ಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ ಅವರ ನಿವಾಸದಲ್ಲಿ ರಾಹುಲ್‌ಗಾಂಧಿ ಉಪಸ್ಥಿತಿಯಲ್ಲಿ ಚರ್ಚೆಗಳು ನಡೆದಿದ್ದವು. ಈ ಸಭೆಯಲ್ಲಿ ಭಾಗಿಯಾಗಿದ್ದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಇವರ ಜತೆ ರಾಹುಲ್‌ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಇವರುಗಳು ಚರ್ಚೆ ನಡೆಸಿ, ಭಾನುವಾರ ನೂತನ ಸಚಿವರ ಪಟ್ಟಿಯನ್ನು ಕಳುಹಿಸುತ್ತೇವೆ. ಸೋಮವಾರ ಸಚಿವರ ಪದಗ್ರಹಣಕ್ಕೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಿ ಎಂದು ಹೇಳಿದ್ದರು.

ಇದಾದ ಬಳಿಕ ಸಂಪುಟ ವಿಸ್ತರಣೆ ಬಗ್ಗೆ ಚರ್ಚಿಸಲು ದೆಹಲಿಗೆ ತೆರಳಿದ್ದ ರಾಜ್ಯ ನಾಯಕರು ಬೆಂಗಳೂರಿಗೆ ವಾಪಸ್ಸಾಗಿದ್ದು, ನಾಳೆ ಸಂಪುಟ ವಿಸ್ತರಣೆಗೆ ಮುಹೂರ್ತ ನಿಗದಿಯಾಗಿದ್ದು, ನೂತನ ಸಚಿವರುಗಳ ಪಟ್ಟಿಯನ್ನು ಇಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ವೇಣುಗೋಪಾಲ್ ರವರು ತಾವೇ ಖುದ್ಧ ತರಲಿದ್ದಾರೆ ಎಂದು ಹೇಳಲಾಗಿದೆ.

ಈ ಇಬ್ಬರು ನಾಯಕರು ಬೆಂಗಳೂರಿಗೆ ಬರಲಿದ್ದು, ಹೈಕಮಾಂಡ್ ಸಿದ್ಧಪಡಿಸಿರುವ ಸಚಿವರ ಪಟ್ಟಿಯನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ನೀಡುವರು. ನಂತರ ಮುಖ್ಯಮಂತ್ರಿಗಳು ಅದನ್ನು ರಾಜ್ಯಪಾಲರಿಗೆ ಕಳುಹಿಸಿ ನಾಳೆ ನೂತನ ಸಚಿವರ ಪದಗ್ರಹಣಕ್ಕೆ ಅವಕಾಶ ನೀಡುವರು ಎಂದು ಹೇಳಲಾಗಿದೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈಗಾಗಲೇ ನಾಳೆ ನೂತನ ಸಚಿವರ ಪ್ರಮಾಣ ವಚನ ನಡೆಯಲಿದೆ ಎಂದು ಹೇಳಿದ್ದು, ರಾಜ್ಯಭವನದಲ್ಲೂ ನೂತನ ಸಚಿವರ ಪದಗ್ರಹಣಕ್ಕೆ ಎಲ್ಲ ಸಿದ್ಧತೆಗಳು ನಡೆದಿವೆ. ನಾಳೆ ಸಂಜೆ 6 ಗಂಟೆಗೆ ನೂತನ ಸಚಿವರು ಪದಗ್ರಹಣ ಮಾಡಲಿದ್ದಾರೆ.

ರಾಜ್ಯ ಸಚಿವ ಸಂಪುಟದಲ್ಲಿ20 ಸ್ಥಾನಗಳು ಖಾಲಿ ಇದ್ದು, ಆ ಪೈಕಿ 2 ಸ್ಥಾನಗಳನ್ನು ಉಳಿಸಿಕೊಂಡು 18 ಸ್ಥಾನಗಳನ್ನು ಭರ್ತಿ ಮಾಡಲು ಹೈಕಮಾಂಡ್ ನಿರ್ಧರಿಸಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಹೊಸ ಮುಖಗಳಿಗೆ ಹೆಚ್ಚಿನ ಆದ್ಯತೆ ಸಿಗಲಿದ್ದು, 3–4 ಬಾರಿ ಗೆದ್ದಿರುವ ಶಾಸಕರಿಗೆ ಸಚಿವ ಸಂಪುಟದಲ್ಲಿ ಹೆಚ್ಚಿನ ಪ್ರಾತಿನಿಧ್ಯ ಸಿಗುವ ಸಾಧ್ಯತೆಗಳು ಹೆಚ್ಚಿವೆ.

# ವ್ಯಸನಮುಕ್ತ ಯುವ ಅಭಿಯಾನಕ್ಕೆ ಮೋದಿ ಚಾಲನೆ

ನವದೆಹಲಿ: ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣಕ್ಕೆ ಯುವಜನತೆ ಮಾದಕ ವ್ಯಸನದಿಂದ ದೂರವಿರುವುದು ಅತ್ಯಗತ್ಯ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ವಿಡಿಯೋ ಕಾನ್ಫರೆನ್ಸ್ ಮೂಲಕ ವಿಕಸಿತ ಭಾರತ ಸಂಕಲ್ಪ ಅಭಿಯಾನಕ್ಕಾಗಿ ನಶಾಮುಕ್ತ ಯುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇದು ಕೇವಲ ಒಬ್ಬ ವ್ಯಕ್ತಿಗಷ್ಟೇ ಸಂಬಂಧಿಸಿಲ್ಲ, ಒಂದು ಕುಟುಂಬ, ಸಮಾಜ ಮತ್ತು ಇಡೀ ರಾಷ್ಟ್ರಕ್ಕಾಗಿ ನಡೆಯುತ್ತಿರುವ ಅಭಿಯಾನವಾಗಿದೆ ಎಂದು ಹೇಳಿದರು. ಆರೋಗ್ಯವಂತ, ಆತ್ಮವಿಶ್ವಾಸದಿಂದ ಕೂಡಿದ ಹಾಗೂ ಮಾದಕ ವ್ಯಸನದಿಂದ ಮುಕ್ತವಾಗಿರುವ ಯುವಜನತೆ ವಿಕಸಿತ ಭಾರತದ ಕನಸನ್ನು ನನಸಾಗಿಸುತ್ತದೆ ಎಂದು ತಿಳಿಸಿದರು.

ಮಾದಕ ವ್ಯಸನದ ವಿರುದ್ಧದ ಹೋರಾಟವನ್ನು ಒಬ್ಬ ವ್ಯಕ್ತಿ ಮಾತ್ರ ಗೆಲ್ಲಲು ಸಾಧ್ಯವಿಲ್ಲ. ಸಮಾಜ ಒಟ್ಟಾಗಿ ಕೈಜೋಡಿಸಿದಾಗ ಮಾತ್ರ ದೊಡ್ಡ ಬದಲಾವಣೆ ಸಾಧ್ಯ. ಲಕ್ಷಾಂತರ ಯುವಕರು ಈಗಾಗಲೇ ಮಾದಕವಸ್ತುಗಳಿಂದ ದೂರವಿರುವ ಪ್ರತಿಜ್ಞೆ ಮಾಡಿದ್ದಾರೆ. ಮುಂದಿನ 100 ವಾರಗಳ ಕಾಲ ದೇಶಾದ್ಯಂತ ಈ ಜಾಗೃತಿ ಅಭಿಯಾನ ನಡೆಯಲಿದೆ ಎಂದು ಹೇಳಿದರು.




ಈ ಅಭಿಯಾನವನ್ನು ಮೊದಲು ಕಾಶಿಯಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗಿತ್ತು. ಈಗ ಅದು ರಾಷ್ಟ್ರವ್ಯಾಪಿ ಚಳವಳಿಯಾಗಿ ಬೆಳೆಯುತ್ತಿದೆ. 125ಕ್ಕೂ ಹೆಚ್ಚು ಆಧ್ಯಾತ್ಮಿಕ ಸಂಸ್ಥೆಗಳು, ವಿವಿಧ ಸಾಮಾಜಿಕ ಸಂಘಟನೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ಈ ಅಭಿಯಾನದಲ್ಲಿ ಭಾಗಿಯಾಗಿವೆ ಎಂದು ಮಾಹಿತಿ ನೀಡಿದರು.

ದೇಶದಾದ್ಯಂತ ಪ್ರತಿ ಭಾನುವಾರ ಜಾಗೃತಿ ಕಾರ್ಯಕ್ರಮಗಳು ನಡೆಯಲಿವೆ. ಕ್ರೀಡಾಕೂಟ, ವಾಕಥಾನ್, ಧ್ಯಾನ, ಸಾಂಸ್ಕೃತಿಕ ಕಾರ್ಯಕ್ರಮ, ಬೀದಿನಾಟಕ, ಚರ್ಚೆಗಳು, ಚಿತ್ರಕಲೆ ಸ್ಪರ್ಧೆಗಳು ಸೇರಿದಂತೆ ಹಲವು ಚಟುವಟಿಕೆಗಳ ಮೂಲಕ ಯುವಜನರಲ್ಲಿ ಮಾದಕ ವ್ಯಸನದ ವಿರುದ್ಧ ಅರಿವು ಮೂಡಿಸಲಾಗುತ್ತದೆ.

ಪ್ರತಿ ಯುವಕನು ಮಾದಕ ವಸ್ತುಗಳಿಂದ ದೂರವಿದ್ದು, ತನ್ನ ಸುತ್ತಮುತ್ತಲಿನವರಿಗೂ ಜಾಗೃತಿ ಮೂಡಿಸಬೇಕು. ಒಗ್ಗಟ್ಟಿನ ಪ್ರಯತ್ನದಿಂದಲೇ ಮಾದಕ ವ್ಯಸನಮುಕ್ತ ಭಾರತ ನಿರ್ಮಾಣ ಸಾಧ್ಯ ಎಂದು ಪ್ರಧಾನಿ ಮೋದಿ ಕರೆ ನೀಡಿದರು.

# ಕೇರಳದಲ್ಲಿ ಸಮರಸಜ್ಜಿನಂತೆ ಮುಂಗಾರು ಪರಿಹಾರ ಕಾರ್ಯ: 7,674 ಜನರಿಗೆ ಆಶ್ರಯ

**ತಿರುವನಂತಪುರಂ, ಆ.2:** ಕೇರಳ ಕಂದಾಯ ಸಚಿವ ಎ.ಪಿ. ಅನಿಲ್ ಕುಮಾರ್ ಭಾನುವಾರ, ಮುಂಗಾರು ಹಾನಿಯ ನಂತರ ರಾಜ್ಯಾದ್ಯಂತ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳು ಯುದ್ಧೋಪಾದಿಯಲ್ಲಿ ಪ್ರಗತಿಯಲ್ಲಿವೆ, ಪ್ರಸ್ತುತ 273 ಪರಿಹಾರ ಶಿಬಿರಗಳಲ್ಲಿ 7,674 ಜನರಿಗೆ ಆಶ್ರಯ ನೀಡಲಾಗಿದೆ ಎಂದು ಹೇಳಿದರು. ರಾಜ್ಯ ಸರ್ಕಾರವು ಎಲ್ಲಾ ಜಿಲ್ಲಾಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದೆ ಮತ್ತು ಪರಿಹಾರ ಶಿಬಿರಗಳಲ್ಲಿ ಸೌಲಭ್ಯಗಳನ್ನು ಬಲಪಡಿಸಲು ಸಂಸದರು ಮತ್ತು ಶಾಸಕರೊಂದಿಗೆ ಸಮನ್ವಯ ಸಾಧಿಸುತ್ತಿದೆ ಎಂದು ಸಚಿವರು ಹೇಳಿದರು. ಎಲ್ಲಾ ಶಿಬಿರಗಳಲ್ಲಿ ಆಹಾರ, ಕುಡಿಯುವ ನೀರು, ವೈದ್ಯಕೀಯ ಆರೈಕೆ ಮತ್ತು ನೈರ್ಮಲ್ಯವನ್ನು ಖಚಿತಪಡಿಸಲಾಗಿದೆ. ಭಾನುವಾರ ಸಂಜೆಯ ಹೊತ್ತಿಗೆ, ರಾಜ್ಯಾದ್ಯಂತ 273 ಪರಿಹಾರ ಶಿಬಿರಗಳನ್ನು ತೆರೆಯಲಾಗಿದೆ, ಇದರಲ್ಲಿ ಪತ್ತನಂತಿಟ್ಟದಲ್ಲಿ 75, ಕೊಟ್ಟಾಯಂನಲ್ಲಿ 64, ಕೋಝಿಕ್ಕೋಡ್‌ನಲ್ಲಿ 36, ವಯನಾಡಿನಲ್ಲಿ 28, ಕಣ್ಣೂರಿನಲ್ಲಿ 18, ಅಲಪ್ಪುಳದಲ್ಲಿ 14, ಇಡುಕ್ಕಿಯಲ್ಲಿ 13, ಎರ್ನಾಕುಲಂನಲ್ಲಿ ಏಳು ಮತ್ತು ತ್ರಿಶೂರ್ ಮತ್ತು ಕಾಸರಗೋಡಿನಲ್ಲಿ ತಲಾ ಆರು ಸೇರಿವೆ. ಮಲಪ್ಪುರಂನಲ್ಲಿ ನಾಲ್ಕು, ತಿರುವನಂತಪುರಂ, ಆಲಪ್ಪುಳ ಮತ್ತು ಇಡುಕ್ಕಿಯಲ್ಲಿ ತಲಾ ಎರಡು ಮತ್ತು ಕೋಝಿಕ್ಕೋಡ್‌ನಲ್ಲಿ ಒಂದು ಸೇರಿದಂತೆ ಮಳೆಗಾಲದ ಸಾವಿನ ಸಂಖ್ಯೆ 11 ಕ್ಕೆ ಏರಿದೆ. 30 ಮನೆಗಳು ಸಂಪೂರ್ಣವಾಗಿ ನಾಶವಾಗಿವೆ ಮತ್ತು 293 ಭಾಗಶಃ ಹಾನಿಯಾಗಿವೆ ಎಂದು ಸಚಿವರು ಹೇಳಿದರು. ಮೃತರ ಕುಟುಂಬಗಳಿಗೆ ಆರ್ಥಿಕ ನೆರವು ಮತ್ತು ಹಾನಿಗೊಳಗಾದ ಮನೆಗಳಿಗೆ ಪರಿಹಾರವನ್ನು ವಿಳಂಬವಿಲ್ಲದೆ ವಿತರಿಸಲಾಗುವುದು, ಗ್ರಾಮ ಅಧಿಕಾರಿಗಳು ಸಲ್ಲಿಸಿದ ಪ್ರಾಥಮಿಕ ವರದಿಗಳ ಆಧಾರದ ಮೇಲೆ ಮೊದಲ ಕಂತನ್ನು ಜಮಾ ಮಾಡಲಾಗುತ್ತದೆ. ಹಲವಾರು ಪ್ರದೇಶಗಳಲ್ಲಿ ಮಳೆ ಕಡಿಮೆಯಾಗಿರುವುದರಿಂದ, ಜಿಲ್ಲಾಡಳಿತಗಳು ಶುಚಿಗೊಳಿಸುವ ಕಾರ್ಯಾಚರಣೆಗಳನ್ನು ಪ್ರಾರಂಭಿಸಲು ನಿರ್ದೇಶಿಸಲಾಗಿದೆ, ಆದರೆ ಆರೋಗ್ಯ ಇಲಾಖೆಯು ಸಾಂಕ್ರಾಮಿಕ ರೋಗಗಳ ಹರಡುವಿಕೆಯನ್ನು ತಡೆಗಟ್ಟಲು ಕ್ರಮಗಳನ್ನು ತೀವ್ರಗೊಳಿಸಿದೆ. ಓಆಖಈ, ಖಆಖಈ, ಅಗ್ನಿಶಾಮಕ ಮತ್ತು ರಕ್ಷಣಾ ಸೇವೆಗಳು ಮತ್ತು ಪೊಲೀಸರ ಸಂಘಟಿತ ಪ್ರಯತ್ನಗಳೊಂದಿಗೆ ರಕ್ಷಣಾ ಕಾರ್ಯಾಚರಣೆಗಳು ಮುಂದುವರೆದಿವೆ ಎಂದು ಅವರು ಹೇಳಿದರು. ಭೂಕುಸಿತ ಪೀಡಿತ ಪ್ರದೇಶಗಳಲ್ಲಿ ವಾಸಿಸುವ ಜನರು ಅಧಿಕಾರಿಗಳ ಸಲಹೆಯಂತೆ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಗೊಳ್ಳುವಂತೆ ಸಚಿವರು ಒತ್ತಾಯಿಸಿದರು ಮತ್ತು ತುರ್ತು ಸಹಾಯಕ್ಕಾಗಿ 24ಥ7 ಜಿಲ್ಲಾ ನಿಯಂತ್ರಣ ಕೊಠಡಿಗಳನ್ನು ಸಂಪರ್ಕಿಸಲು ಸಾರ್ವಜನಿಕರನ್ನು ಕೇಳಿಕೊಂಡರು.

# ಕೇರಳದ ಮಳೆ ಸಂತ್ರಸ್ತರಿಗೆ ಸಹಾಯ ಮಾಡಲು ಕಾಂಗ್ರೆಸ್ ಕಾರ್ಯಕರ್ತರಿಗೆ ರಾಹುಲ್ ಮನವಿ

**ನವದೆಹಲಿ, ಆ.2:** ಕೇರಳದಾದ್ಯಂತ ಭಾರೀ ಮಳೆಯಿಂದ ಉಂಟಾದ ಜೀವಹಾನಿ ಮತ್ತು ವ್ಯಾಪಕ ವಿನಾಶದ ಬಗ್ಗೆ ಕಾಂಗ್ರೆಸ್ ನಾಯಕ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಭಾನುವಾರ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ, ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸಿದ್ದಾರೆ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಮತ್ತು ಸ್ವಯಂಸೇವಕರು ನಡೆಯುತ್ತಿರುವ ಪರಿಹಾರ ಮತ್ತು ಪುನರ್ವಸತಿ ಪ್ರಯತ್ನಗಳಿಗೆ ಸಕ್ರಿಯವಾಗಿ ಸಹಾಯ ಮಾಡುವಂತೆ ಒತ್ತಾಯಿಸಿದ್ದಾರೆ. ರಾಜ್ಯದಲ್ಲಿ ನಿರಂತರ ಮಳೆಯಿಂದ ಉಂಟಾದ ವಿನಾಶದಿಂದ ಅವರು "ತೀವ್ರ ದುಃಖಿತರಾಗಿದ್ದಾರೆ" ಎಂದು ಗಾಂಧಿ ಹೇಳಿದರು, ಇದು ಕನಿಷ್ಠ ಎಂಟು ಜೀವಗಳನ್ನು ಬಲಿ ತೆಗೆದುಕೊಂಡಿದೆ ಮತ್ತು ಹಲವಾರು ಜನರನ್ನು ಕಾಣೆಯಾಗಿದೆ. "ಕೇರಳದಾದ್ಯಂತ ಭಾರೀ ಮಳೆಯಿಂದ ಉಂಟಾದ ವಿನಾಶದಿಂದ ತೀವ್ರವಾಗಿ ದುಃಖಿತನಾಗಿದ್ದೇನೆ. ಜೀವ ಕಳೆದುಕೊಂಡ ಎಂಟು ಜನರ ಕುಟುಂಬಗಳಿಗೆ ನನ್ನ ಹೃತ್ಪೂರ್ವಕ ಸಂತಾಪಗಳು. ಇನ್ನೂ ಕಾಣೆಯಾದವರು ಸುರಕ್ಷಿತವಾಗಿ ಸಿಗಲಿ ಮತ್ತು ಗಾಯಾಳುಗಳು ಶೀಘ್ರವಾಗಿ ಚೇತರಿಸಿಕೊಳ್ಳಲಿ" ಎಂದು ಗಾಂಧಿ ಹೇಳಿದರು. ಕೇರಳ ಸರ್ಕಾರವು ಪೀಡಿತ



ಕುಟುಂಬಗಳನ್ನು ಬೆಂಬಲಿಸಲು ಮತ್ತು ಮಳೆ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಮತ್ತು ಚೇತರಿಕೆ ಕಾರ್ಯಾಚರಣೆಗಳನ್ನು ಸಂಘಟಿಸಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ ಎಂದು ಕಾಂಗ್ರೆಸ್ ನಾಯಕ ಹೇಳಿದರು. "ಪೀಡಿತ ಕುಟುಂಬಗಳನ್ನು ಬೆಂಬಲಿಸಲು ಮತ್ತು ಪರಿಹಾರ ಮತ್ತು ಚೇತರಿಕೆ ಕಾರ್ಯಾಚರಣೆಗಳನ್ನು ಸಂಘಟಿಸಲು ರಾಜ್ಯ ಸರ್ಕಾರ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ. ಎಲ್ಲಾ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಸ್ವಯಂಸೇವಕರು ಈ ಪ್ರಯತ್ನಗಳಿಗೆ ಸಾಧ್ಯವಿರುವ ಎಲ್ಲ ರೀತಿಯಲ್ಲಿ ಸಹಾಯ ಮಾಡುವಂತೆ ನಾನು ಒತ್ತಾಯಿಸುತ್ತೇನೆ" ಎಂದು ಅವರು ಹೇಳಿದರು. ವಿಶೇಷವಾಗಿ ದುರ್ಬಲ ಪ್ರದೇಶಗಳಲ್ಲಿ ಜನರು ಎಚ್ಚರಿಕೆಯಿಂದ ಇರಬೇಕೆಂದು ಮನವಿ ಮಾಡಿದ ರಾಹುಲ್ ಗಾಂಧಿ, ನಿವಾಸಿಗಳು ಜಾಗರೂಕರಾಗಿರಿ ಮತ್ತು ಅಧಿಕಾರಿಗಳು ಹೊರಡಿಸಿದ ನಿರ್ದೇಶನಗಳನ್ನು ಪಾಲಿಸಬೇಕೆಂದು ಒತ್ತಾಯಿಸಿದರು. "ದಯವಿಟ್ಟು ಜಾಗರೂಕರಾಗಿರಿ, ವಿಶೇಷವಾಗಿ ಗುಡ್ಡಗಾಡು ಪ್ರದೇಶಗಳಲ್ಲಿ, ಮತ್ತು ಅಧಿಕಾರಿಗಳ ಮಾರ್ಗದರ್ಶನವನ್ನು ಅನುಸರಿಸಿ" ಎಂದು ಅವರು ಹೇಳಿದರು. ವಿಪತ್ತಿನಿಂದ ಹಾನಿಗೊಳಗಾದವರೊಂದಿಗೆ ತಮ್ಮ ಒಗ್ಗಟ್ಟನ್ನು ಪುನರುಚ್ಚರಿಸಿದ ರಾಹುಲ್ ಗಾಂಧಿ, "ಈ ಕಷ್ಟದ ಸಮಯದಲ್ಲಿ ಕೇರಳ ಒಗ್ಗಟ್ಟಾಗಿ ನಿಂತಿದೆ. ನಾನು ಪ್ರತಿ ಪೀಡಿತ ಕುಟುಂಬದೊಂದಿಗೆ ದೃಢವಾಗಿ ನಿಲ್ಲುತ್ತೇನೆ" ಎಂದು ಹೇಳಿದರು. ಕಳೆದ ಹಲವಾರು ದಿನಗಳಿಂದ ಕೇರಳದಲ್ಲಿ ಭಾರೀ ಮಳೆಯಾಗುತ್ತಿದ್ದು, ಹಲವಾರು ಜಿಲ್ಲೆಗಳಲ್ಲಿ ಭೂಕುಸಿತ, ಪ್ರವಾಹ ಮತ್ತು ವ್ಯಾಪಕ ಅಡ್ಡಿ ಉಂಟಾಗಿದೆ. ರಾಜ್ಯ ಸಂಸ್ಥೆಗಳು ಪೀಡಿತ ನಿವಾಸಿಗಳಿಗೆ ಸಹಾಯ ಮಾಡಲು ಮತ್ತು ಸಾಮಾನ್ಯ ಸ್ಥಿತಿಯನ್ನು ಪುನಃಸ್ಥಾಪಿಸಲು ಪ್ರಯತ್ನಗಳನ್ನು ಮುಂದುವರಿಸುತ್ತಿರುವುದರಿಂದ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳು ನಡೆಯುತ್ತಿವೆ.

# ನಾಳೆಯಿಂದ ನೀಟ್-ಯುಜಿ ಕೌನ್ಸೆಲಿಂಗ್ ಸೆ.8ರಿಂದ ಶೈಕ್ಷಣಿಕ ಅವಧಿ ಆರಂಭ

**ನವದೆಹಲಿ, ಆ.2:** ಅಖಿಲ ಭಾರತ ಕೋಟಾ ಅಡಿಯಲ್ಲಿ ಎಂಬಿಬಿಎಸ್ ಮತ್ತು ನೀಟ್ (ಯುಜಿ) ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ಮೊದಲ ಸುತ್ತಿನ ಕೌನ್ಸೆಲಿಂಗ್ ಆಗಸ್ಟ್ 4 ರಂದು ಪ್ರಾರಂಭವಾಗಲಿದ್ದು, 2026-27ನೇ ಬ್ಯಾಚ್‌ನ ಶೈಕ್ಷಣಿಕ ಅವಧಿ ಸೆಪ್ಟೆಂಬರ್ 8 ರಂದು ಶುರುವಾಗಲಿದೆ ಎಂದು ವೈದ್ಯಕೀಯ ಸಮಾಲೋಚನಾ ಸಮಿತಿ ತಿಳಿಸಿದೆ.

ಶನಿವಾರ ರಾತ್ರಿ ಸಮಿತಿ ಕೌನ್ಸಿಲಿಂಗ್ ವೇಳಾಪಟ್ಟಿ ಬಿಡುಗಡೆ ಮಾಡಿದ್ದು, ಅದರ ಪ್ರಕಾರ ನೀಟ್ (ಯುಜಿ) ವೈದ್ಯಕೀಯ ಕೋರ್ಸ್‌ಗಳ ಶೈಕ್ಷಣಿಕ ಅವಧಿ ಸೆಪ್ಟೆಂಬರ್ 8 ರಂದು ಪ್ರಾರಂಭವಾಗಲಿದ್ದು, ನಂತರದ ಸುತ್ತಿನಲ್ಲಿ ಖಾಲಿ ಸೀಟುಗಳಿಗೆ ಕೌನ್ಸೆಲಿಂಗ್ ಮುಂದುವರಿಯಲಿದೆ.ಡೀಮ್ಡ್ ಮತ್ತು ಕೇಂದ್ರೀಯ ವಿಶ್ವವಿದ್ಯಾಲಯಗಳಿಗೆ ಮೊದಲ ಸುತ್ತಿನ AIQ ಕೌನ್ಸೆಲಿಂಗ್ ಆಗಸ್ಟ್ 4 ರಿಂದ ಆಗಸ್ಟ್ 17 ರವರೆಗೆ ನಡೆಯಲಿದೆ. ಒಅಅ ಹಂಚಿಕೊಂಡ ವೇಳಾಪಟ್ಟಿಯ ಪ್ರಕಾರ, ಆಗಸ್ಟ್ 22 ಸೇರ್ಪಡೆಗೆ ಕೊನೆಯ ದಿನಾಂಕವಾಗಿರುತ್ತದೆ.




ಎರಡನೇ ಸುತ್ತಿನ ಂಖಕಿ ಕೌನ್ಸಿಲಿಂಗ್ ಆಗಸ್ಟ್ 24 ರಿಂದ ಸೆಪ್ಟೆಂಬರ್ 2 ರವರೆಗೆ, ಮೂರನೇ ಸುತ್ತಿನ ನೀಟ್ ಕೌನ್ಸೆಲಿಂಗ್ ಸೆಪ್ಟೆಂಬರ್ 10 ರಿಂದ ಸೆ.18 ರವರೆಗೆ ನಡೆಯಲಿದೆ. ಸ್ಟ್ರೇಡ್ ಸುತ್ತಿನ ಖಾಲಿ ಹುದ್ದೆಗಳು ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 3 ರವರೆಗೆ ನಿಗದಿಯಾಗಿದೆ. ಅ.10 ಸ್ಟ್ರೇಡ್ ಸುತ್ತಿನ ನಂತರ ಸೇರ್ಪಡೆಗೆ ಕೊನೆಯ ದಿನಾಂಕವಾಗಿದೆ

ರಾಜ್ಯ ಕೋಟಾ ಸೀಟುಗಳಿಗೆ ಮೊದಲ ಸುತ್ತಿನ ಕೌನ್ಸೆಲಿಂಗ್ ಆಗಸ್ಟ್ 13 ರಿಂದ ಆಗಸ್ಟ್ 22 ರವರೆಗೆ ನಡೆಯಲಿದ್ದು, ಅಭ್ಯರ್ಥಿಗಳು ಆಗಸ್ಟ್ 28 ರೊಳಗೆ ಸೇರಿಕೊಳ್ಳಬೇಕು. ಎರಡನೇ ಸುತ್ತಿನ ಕೌನ್ಸೆಲಿಂಗ್ ಆಗಸ್ಟ್ 31 ರಿಂದ ಸೆಪ್ಟೆಂಬರ್ 8 ರವರೆಗೆ ಮತ್ತು ಮೂರನೇ ಸುತ್ತಿನ ಕೌನ್ಸೆಲಿಂಗ್ ಸೆಪ್ಟೆಂಬರ್ 16 ರಿಂದ ಸೆಪ್ಟೆಂಬರ್ 26 ರವರೆಗೆ ನಡೆಯಲಿದೆ. ರಾಜ್ಯ ಕೋಟಾ ಸೀಟುಗಳಿಗೆ ಅಕ್ಟೋಬರ್ 3 ರಿಂದ ಅಕ್ಟೋಬರ್ 5 ರವರೆಗೆ ಖಾಲಿ ಹುದ್ದೆಗಳ ಸುತ್ತು ನಡೆಸಲಾಗುವುದು.

ಸೀಟು ಸಂಸ್ಕರಣೆ ಮತ್ತು ನಂತರದ ಹಂಚಿಕೆಗಳನ್ನು ಸುಗಮಗೊಳಿಸಲು, ಪ್ರತಿ ಸುತ್ತಿನ ನಂತರ ವೈದ್ಯಕೀಯ ಸಮಾಲೋಚನಾ ಸಮಿತಿ ಮತ್ತು ರಾಜ್ಯ ಸಮಾಲೋಚನಾ ಅಧಿಕಾರಿಗಳು ಸೇರ್ಪಡೆಗೊಂಡ ಅಭ್ಯರ್ಥಿಗಳ ಪರಿಶೀಲನೆಗಾಗಿ ವೇಳಾಪಟ್ಟಿಯನ್ನು ಸಹ ಈ ವೇಳಾಪಟ್ಟಿಯಲ್ಲೇ ನೀಡಲಾಗಿದೆ. ಭಾಗವಹಿಸುವ ಎಲ್ಲಾ ಸಂಸ್ಥೆಗಳು, ರಾಜ್ಯ ಕೌನ್ಸೆಲಿಂಗ್ ಅಧಿಕಾರಿಗಳು ಮತ್ತು ಗೊತ್ತುಪಡಿಸಿದ ಏಜೆನ್ಸಿಗಳು ವೇಳಾಪಟ್ಟಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಒಅಅ ನಿರ್ದೇಶಿಸಿದೆ. ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಸಕಾಲಿಕವಾಗಿ ಪೂರ್ಣಗೊಳಿಸುವುದನ್ನು ಖಚಿತಪಡಿಸಿ ಕೊಳ್ಳಲು ಎಲ್ಲಾ ಶನಿವಾರ,ಭಾನುವಾರ ಮತ್ತು ಗೆಜೆಟೆಡ್ ರಜಾದಿನಗಳನ್ನು ಕೆಲಸದದಿನಗಳಾಗಿ ಪರಿಗಣಿಸುವಂತೆ ಸಂಸ್ಥೆಗಳನ್ನು ಕೇಳಿದೆ.

# ಭಾರತ-ಚೀನಾ ಗಡಿಯಾಚೆಗಿನ ವ್ಯಾಪಾರ ಪುನರಾರಂಭ

ಗ್ಯಾಂಗ್ಟಾಕ್, ಆಗಸ್ಟ್ 2: ಆರು ವರ್ಷಗಳ ವಿರಾಮದ ನಂತರ, ಹಿಮಾಚಲ ಪ್ರದೇಶದ ಕಿನ್ನೌರ್ ಜಿಲ್ಲೆಯ ಶಿಪ್ಕಿ-ಲಾ ಪಾಸ್ ಮೂಲಕ ಮತ್ತು ಸಿಕ್ಕಿಂನ ನಾಥು-ಲಾ ಪಾಸ್ ಮೂಲಕ ಭಾರತ ಮತ್ತು ಚೀನಾ ನಡುವಿನ ಗಡಿಯಾಚೆಗಿನ ವ್ಯಾಪಾರ ಭಾನುವಾರ ಪುನರಾರಂಭವಾಯಿತು. ಹಿಮಾಚಲ ಪ್ರದೇಶದಲ್ಲಿ, ಕಂದಾಯ ಸಚಿವ ಜಗತ್ ಸಿಂಗ್ ನೇಗಿ ಕಿನ್ನೌರ್ ಜಿಲ್ಲೆಯ ಪೂಹ್ ಉಪವಿಭಾಗದಲ್ಲಿರುವ ಗಡಿ ಪಂಚಾಯತ್ ನಮ್ಗ್ಯಾದಲ್ಲಿ ಚುಪನ್ ಟ್ರೇಡ್ ಮಾರ್ಟ್ ಉದ್ಘಾಟಿಸಿದರು ಮತ್ತು ಗಡಿಯಾಚೆಗಿನ ವ್ಯಾಪಾರವನ್ನು ಪ್ರಾರಂಭಿಸಲು 16 ವ್ಯಾಪಾರಿಗಳ ಗುಂಪಿಗೆ ಚಾಲನೆ ನೀಡಿದರು.

ಕೋವಿಡ್ -19 ಸಾಂಕ್ರಾಮಿಕ ಮತ್ತು ಗಡಿ ಉದ್ವಿಗ್ನತೆಯ ನಂತರ 2020 ರಿಂದ ಗಡಿಯಾಚೆಗಿನ ವ್ಯಾಪಾರವನ್ನು ಸ್ಥಗಿತಗೊಳಿಸಲಾಗಿತ್ತು. ಕಿನ್ನೌರ್‌ನಿಂದ ಚೀನಾ ಆಡಳಿತದಲ್ಲಿರುವ ಟಿಬೆಟ್ಗೆ ತೆರಳುತ್ತಿದ್ದ ಭಾರತೀಯ ವ್ಯಾಪಾರಿಗಳ ಮೊದಲ ಬ್ಯಾಚ್ ಬೆಲ್ಲ, ಅಕ್ಕಿ, ಚಹಾ ಎಲೆಗಳು, ಸಕ್ಕರೆ, ಕಾರ್ಪೆಟ್ಗಳು, ಸ್ಥಳೀಯ ಧಾನ್ಯಗಳು ಮತ್ತು ಬಿಸ್ಕತ್ತುಗಳನ್ನು ಸಾಗಿಸುತ್ತಿತ್ತು. ಕಿನ್ನೌರ್ ವ್ಯಾಪಾರಿಗಳು ಹಿಂದೆ ವ್ಯಾಪಾರ ನಡೆಸಲು ಟಿಬೆಟ್ನ ದೂರದ ಪ್ರದೇಶಗಳಿಗೆ ಪ್ರಯಾಣಿಸಬೇಕಾಗಿತ್ತು, ಆದರೆ ಶಿಪ್ಕಿ ಗ್ರಾಮದಲ್ಲಿ ವ್ಯಾಪಾರ ಕೇಂದ್ರವನ್ನು ಸ್ಥಾಪಿಸುವುದರಿಂದ ಈಗ ಎರಡೂ ಕಡೆಯ ವ್ಯಾಪಾರಿಗಳಿಗೆ ಸರಕುಗಳ ವಿನಿಮಯಕ್ಕೆ ಅನುಕೂಲವಾಗುತ್ತದೆ ಎಂದು ಸಚಿವ ನೇಗಿ ಹೇಳಿದರು. ಗಡಿ ವ್ಯಾಪಾರದ ಪುನರಾರಂಭವು ಈ ಪ್ರದೇಶದಲ್ಲಿ




ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ ಮತ್ತು ಸ್ಥಳೀಯ ಆರ್ಥಿಕತೆಯನ್ನು ಬಲಪಡಿಸುತ್ತದೆ ಎಂದು ಅವರು ಹೇಳಿದರು. ವಿದೇಶಿ ವ್ಯಾಪಾರ ನಿರ್ದೇಶನಾಲಯ ಪ್ರಕಾರ, ಭಾರತವು ಚೀನಾಕ್ಕೆ 36 ವರ್ಗದ ಸರಕುಗಳ ರಫ್ತುಗೆ ಅನುಮೋದನೆ ನೀಡಿದೆ, ಆದರೆ 20 ವರ್ಗದ ಸರಕುಗಳನ್ನು ಚೀನಾದಿಂದ ಆಮದು ಮಾಡಿಕೊಳ್ಳಬಹುದು. ಪೂರ್ವ ಸಿಕ್ಕಿಂನ ನಾಥು-ಲಾದಲ್ಲಿ, ಉದ್ಘಾಟನಾ ಸಮಾರಂಭದಲ್ಲಿ, ಸಿಕ್ಕಿಂ ಮತ್ತು ಟಿಬೆಟ್ ಸ್ವಾಯತ್ತ ಪ್ರದೇಶದ ಅಧಿಕಾರಿಗಳು ಶೆರಾಥಾಂಗ್ ಟ್ರೇಡ್ ಮಾರ್ಟ್‌ನಲ್ಲಿ ಔಪಚಾರಿಕವಾಗಿ ಪ್ರಾರಂಭವಾಗುವ ಮೊದಲು ನೋ ಮ್ಯಾನ್ಸ್ ಲ್ಯಾಂಡ್‌ನಲ್ಲಿ ಉಡುಗೊರೆಗಳನ್ನು ವಿನಿಮಯ ಮಾಡಿಕೊಂಡರು. ಐತಿಹಾಸಿಕ ವ್ಯಾಪಾರ ಮಾರ್ಗದ ಪುನರುಜ್ಜೀವನವು ಸಿಕ್ಕಿಂನ ಆರ್ಥಿಕತೆಯನ್ನು ಹೆಚ್ಚಿಸುತ್ತದೆ, ಉದ್ಯೋಗಗಳನ್ನು ಸೃಷ್ಟಿಸುತ್ತದೆ, ಸ್ಥಳೀಯ ಉದ್ಯಮಶೀಲತೆಯನ್ನು ಬಲಪಡಿಸುತ್ತದೆ ಮತ್ತು ಆಕ್ಟ್ ಈಸ್ಟ್ ಪಾಲಿಸಿ ಮತ್ತು ವಿಕಸಿತ ಭಾರತ ದೃಷ್ಟಿಕೋನದ ಅಡಿಯಲ್ಲಿ ಪ್ರಾದೇಶಿಕ ಸಂಪರ್ಕವನ್ನು ಹೆಚ್ಚಿಸುತ್ತದೆ ಎಂದು ಸಿಕ್ಕಿಂ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಟಿಟಿ ಭುಟಿಯಾ ಹೇಳಿದರು. ಗಡಿಯಾಚೆಗಿನ ವ್ಯಾಪಾರವನ್ನು ಪುನಃ ತೆರೆಯುವುದರಿಂದ ಸಿಕ್ಕಿಂನ ಕೃಮಗ್ಗ, ಕರಕುಶಲ ವಸ್ತುಗಳು, ಸಾವಯವ ಉತ್ಪನ್ನಗಳು ಮತ್ತು ಇತರ ಅಧಿಸೂಚಿತ ಸರಕುಗಳಿಗೆ ಮಾರುಕಟ್ಟೆಗಳನ್ನು ಒದಗಿಸುವ ನಿರೀಕ್ಷೆಯಿದೆ, ಜೊತೆಗೆ ಗಡಿ ಗ್ರಾಮಗಳು ಮತ್ತು ಗಡಿಯಾಚೆಗಿನ ಆರ್ಥಿಕ ಸಹಕಾರವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಗಡಿ ವ್ಯಾಪಾರ ಪಾಸ್ಗಳು ಮತ್ತು ಕೆಫೆಟೇರಿಯಾ ಹಂಚಿಕೆ ಆದೇಶಗಳನ್ನು ವಿತರಿಸಲಾಯಿತು, ಇದು ನಾಥು-ಲಾ ಮೂಲಕ ಐತಿಹಾಸಿಕ ರೇಷ್ಮೆ ಮಾರ್ಗಕ್ಕೆ ಹೊಸ ಅಧ್ಯಾಯವನ್ನು ಗುರುತಿಸಿತು. ಸಾಂಪ್ರದಾಯಿಕ ಗಡಿ ವ್ಯಾಪಾರ ಮಾರ್ಗಗಳನ್ನು ಪುನಃಸ್ಥಾಪಿಸಲು ಭಾರತ ಮತ್ತು ಚೀನಾ ನಡುವಿನ ರಾಜತಾಂತ್ರಿಕ ಪ್ರಯತ್ನಗಳ ನಂತರ ಈ ನಿರ್ಧಾರ ಕೈಗೊಳ್ಳಲಾಯಿತು. ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ನಡುವಿನ ಮಾತುಕತೆಯ ಸಮಯದಲ್ಲಿ ಎರಡೂ ಕಡೆಯವರು ಹಿಮಾಚಲ ಪ್ರದೇಶದ ಶಿಪ್ಕಿ ಲಾ, ಉತ್ತರಾಖಂಡದ ಲಿಪುಲೇಖ್ ಮತ್ತು ಸಿಕ್ಕಿಂನ ನಾಥು ಲಾ ಮೂಲಕ ಗಡಿ ವ್ಯಾಪಾರವನ್ನು ಪುನರುಜ್ಜೀವನಗೊಳಿಸಲು ಒಪ್ಪಿಕೊಂಡರು. ಸಟ್ಲೆಜ್ ಕಣಿವೆಯ ಉದ್ದಕ್ಕೂ ಕಿನ್ನೌರ್ ಜಿಲ್ಲೆಯಲ್ಲಿ ನೆಲೆಗೊಂಡಿರುವ ಶಿಪ್ಕಿ ಲಾ ಭಾರತ ಮತ್ತು ಚೀನಾದ ಟಿಬೆಟ್ ಸ್ವಾಯತ್ತ ಪ್ರದೇಶದ ನಡುವಿನ ನೈಸರ್ಗಿಕ ಗಡಿಯನ್ನು ರೂಪಿಸುತ್ತದೆ. ಈ ಪಾಸ್ ಶತಮಾನಗಳಿಂದ ಪ್ರಮುಖ ವ್ಯಾಪಾರ ಮಾರ್ಗವಾಗಿ ಕಾರ್ಯನಿರ್ವಹಿಸುತ್ತಿದೆ, ಕಿನ್ನೌರ್ನ ವ್ಯಾಪಾರಿಗಳು ಮಸಾಲೆಗಳು, ದ್ವಿದಳ ಧಾನ್ಯಗಳು, ಸಕ್ಕರೆ, ವಾಲ್ನಟ್ಸ್, ಅರಿಶಿನ ಮತ್ತು ಇತರ ಸರಕುಗಳನ್ನು ರಫ್ತು ಮಾಡುತ್ತಾರೆ, ಆದರೆ ಟಿಬೆಟ್ನ ವ್ಯಾಪಾರಿಗಳು ರೇಷ್ಮೆ, ಚರ್ಮದ ಪಾದರಕ್ಷೆಗಳು, ಇಂಗು, ಥರ್ಮೋಸ್ ಫ್ಲಾಸ್ಕ್‌ಗಳು ಮತ್ತು ಗಾಜಿನ ಸಾಮಾನುಗಳಂತಹ ಸರಕುಗಳನ್ನು ತಂದರು.



**ಒಡಿಶಾದ ಪುರಿ ಲೋಕಸಭಾ ಕ್ಷೇತ್ರದ ಪ್ರವಾಹಪೀಡಿತ ಪ್ರದೇಶಗಳಿಗೆ ಭಾನುವಾರ ಭೇಟಿ ನೀಡಿದ ಬಿಜೆಪಿ ಸಂಸದ ಸಂಬಿತ್ ಪಾತ್ರಾ, ಪ್ರವಾಹ ಪರಿಸ್ಥಿತಿಯ ನಡುವೆ ನಡೆಯುತ್ತಿರುವ ಪರಿಹಾರ ಮತ್ತು ರಕ್ಷಣಾ ಕಾರ್ಯಗಳನ್ನು ಪರಿಶೀಲಿಸಿದರು. ಸಂತ್ರಸ್ತರ ಅಳಲು ಆಲಿಸಿದರು.**

# ಆ.8 ರವರೆಗೆ ವಾಯುವ್ಯ ಭಾರತದಾದ್ಯಂತ ಮಳೆ ಹೆಚ್ಚಾಗುವ ಸಾಧ್ಯತೆ: ಹವಾಮಾನ ಇಲಾಖೆ

**ಪಂಚಕುಲ, ಆ.2:** ಈ ವಾರ ವಾಯುವ್ಯ ಭಾರತದಾದ್ಯಂತ ಮಳೆಯಾಗುವ ಸಾಧ್ಯತೆ ಇದೆ, ಆಗಸ್ಟ್ 3 ರಿಂದ 6 ರವರೆಗೆ ಹರಿಯಾಣ, ಚಂಡೀಗಢ, ದೆಹಲಿ ಮತ್ತು ಪಂಜಾಬ್‌ನಲ್ಲಿ ಸ್ಥಿರವಾದ, ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ. ಏತನ್ಮಧ್ಯೆ, ಪಶ್ಚಿಮ ಹಿಮಾಲಯ ಪ್ರದೇಶವು ಇನ್ನೂ ಹೆಚ್ಚಿನ ನಿರಂತರ ಮಳೆಯಾಗುವ ಸಾಧ್ಯತೆ ಇದೆ. ಪ್ರಾದೇಶಿಕ ಹವಾಮಾನ ಕೇಂದ್ರದ ಪ್ರಕಾರ, ಆಗಸ್ಟ್ 2 ರಂದು ಸಂಜೆ 5 ಗಂಟೆಗೆ ಭಾರತೀಯ ಕಾಲಮಾನ ಬಿಡುಗಡೆ ಮಾಡಿದ ಹವಾಮಾನ ವರದಿಯಲ್ಲಿ ಮುಂದಿನ ಐದು ದಿನಗಳಲ್ಲಿ ವಾಯುವ್ಯ ಭಾರತದ ಬಯಲು ಪ್ರದೇಶಗಳಲ್ಲಿ ಗರಿಷ್ಠ ತಾಪಮಾನದಲ್ಲಿ ಯಾವುದೇ ಗಮನಾರ್ಹ ಬದಲಾವಣೆ ಇರುವುದಿಲ್ಲ. ಆಗಸ್ಟ್ 3 ರಿಂದ 6 ರವರೆಗೆ ಮಳೆ ತೀವ್ರಗೊಂಡು ವ್ಯಾಪಕವಾಗಿ ಹರಡುವ ಮೊದಲು ಆಗಸ್ಟ್ 2 ರಂದು ಹರಿಯಾಣ, ಚಂಡೀಗಢ ಮತ್ತು ದೆಹಲಿಯಲ್ಲಿ ಚದುರಿದ ಮಳೆಯಾಗಲಿದೆ ಎಂದು ಮುನ್ಸೂಚನೆ ಸೂಚಿಸುತ್ತದೆ. ವಾರದ ಗಾಳಿ ಕಡಿಮೆಯಾಗುತ್ತಿದ್ದಂತೆ, ಆಗಸ್ಟ್ 7 ಮತ್ತು 8 ರಂದು ಮಳೆ ಚದುರಿದ ಮಳೆಯಾಗುತ್ತದೆ. ಪಂಜಾಬ್ ಇದೇ ರೀತಿಯ ಲಯವನ್ನು ಅನುಸರಿಸುವ ನಿರೀಕ್ಷೆಯಿದೆ, ಅವಧಿಯ ಆರಂಭ ಮತ್ತು ಅಂತ್ಯದಲ್ಲಿ ಚದುರಿದ ಮಳೆ ಮತ್ತು ನಡುವೆ ವ್ಯಾಪಕ ಮಳೆಯಾಗುತ್ತದೆ. ಪಶ್ಚಿಮ ಹಿಮಾಲಯದಾದ್ಯಂತ, ಆಗಸ್ಟ್ 5 ರವರೆಗೆ ನಿರಂತರ ಮಳೆಯಾಗಲು ಜಮ್ಮು ಮತ್ತು ಕಾಶ್ಮೀರ, ಲಡಾಖ್, ಗಿಲ್ಗಿಟ್-ಬಾಲ್ಟಿಸ್ತಾನ್ ಮತ್ತು ಮುಜಫರಾಬಾದ್ ಸಿದ್ಧವಾಗಿವೆ. ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ ಕೂಡ ಒಂದು ವಾರದವರೆಗೆ ಆಗಾಗ್ಗೆ ಮತ್ತು ವ್ಯಾಪಕ ಮಳೆಯಾಗಲಿದೆ. ಆಗಸ್ಟ್ 2 ರಂದು ಬೆಳಿಗ್ಗೆ 8:30 ಕ್ಕೆ ಕೊನೆಗೊಂಡ 24 ಗಂಟೆಗಳಲ್ಲಿ, ಜಮ್ಮು ಮತ್ತು ಕಾಶ್ಮೀರ, ಲಡಾಖ್, ಗಿಲ್ಗಿಟ್-ಬಾಲ್ಟಿಸ್ತಾನ್ ಮತ್ತು ಮುಜಫರಾಬಾದ್‌ನ ಹೆಚ್ಚಿನ ಸ್ಥಳಗಳಲ್ಲಿ ಮತ್ತು ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡದ ಅನೇಕ ಸ್ಥಳಗಳಲ್ಲಿ ಮಳೆ ಅಥವಾ ಹಿಮ ಬಿದ್ದಿದೆ ಎಂದು ಐಎಂಡಿ ವರದಿ ಮಾಡಿದೆ. ದೆಹಲಿ ಮತ್ತು ಪೂರ್ವ ರಾಜಸ್ಥಾನದ ಅನೇಕ ಸ್ಥಳಗಳಲ್ಲಿ, ಪೂರ್ವ ಉತ್ತರ ಪ್ರದೇಶ ಮತ್ತು ಪಶ್ಚಿಮ ರಾಜಸ್ಥಾನದ ಕೆಲವು ಸ್ಥಳಗಳಲ್ಲಿ ಮತ್ತು ಪಂಜಾಬ್, ಹರಿಯಾಣ ಮತ್ತು ಪಶ್ಚಿಮ ಉತ್ತರ ಪ್ರದೇಶದ ಪ್ರತ್ಯೇಕ ಸ್ಥಳಗಳಲ್ಲಿ ಮಳೆ ಅಥವಾ ಗುಡುಗು ಸಹಿತ ಮಳೆಯಾಗಿದೆ. ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಖಂಡ, ಪಂಜಾಬ್, ಉತ್ತರ ಪ್ರದೇಶ ಮತ್ತು ಪಶ್ಚಿಮ ರಾಜಸ್ಥಾನದ ಪ್ರತ್ಯೇಕ ಸ್ಥಳಗಳಲ್ಲಿ ಗುಡುಗು ಸಹಿತ ಮಳೆಯಾಗಿದೆ ಎಂದು ವರದಿಯಾಗಿದೆ. ಬುಲೆಟಿನ್‌ನಲ್ಲಿ ಹಿಮಾಚಲ ಪ್ರದೇಶದ ಬ್ರಹ್ಮಣಿ (ಬಿಲಾಸ್ಪುರ) 93.6 ಮಿಮೀ; ಉತ್ತರಾಖಂಡದ ಗಂಗಾನಗರ 95 ಮಿಮೀ; ಉತ್ತರ ಪ್ರದೇಶದ ಬನ್ಸಿ (ಸಿದ್ಧಾರ್ಥ ನಗರ) 135 ಮಿ.ಮೀ; ಮತ್ತು ರಾಜಸ್ಥಾನದ ಸ್ಲಂಬರ್ ಮತ್ತು ಕುಶಾಲ್‌ಗಢ (ಬನ್ಸ್ವಾರಾ) ಕ್ರಮವಾಗಿ 67 ಮಿ.ಮೀ ಮತ್ತು 66 ಮಿ.ಮೀ. ಮಳೆಯಾಗಿದೆ. ಉತ್ತರಾಖಂಡ, ಪಶ್ಚಿಮ ಉತ್ತರ ಪ್ರದೇಶ ಮತ್ತು ಪೂರ್ವ ರಾಜಸ್ಥಾನದ ಪ್ರತ್ಯೇಕ ಸ್ಥಳಗಳಲ್ಲಿ ಬಿರುಗಾಳಿ ಬೀಸಿದೆ. ಆಗಸ್ಟ್ 9 ರಿಂದ 11 ರವರೆಗೆ ಪಶ್ಚಿಮ ಹಿಮಾಲಯ ಪ್ರದೇಶವು ಚದುರಿದ ಅಥವಾ ವ್ಯಾಪಕ ಮಳೆಯನ್ನು ನಿರೀಕ್ಷಿಸಬಹುದು ಎಂದು ಹವಾಮಾನ ಕಚೇರಿ ತಿಳಿಸಿದೆ, ಆದರೆ ವಾಯುವ್ಯ ಭಾರತದ ಬಯಲು ಪ್ರದೇಶಗಳಲ್ಲಿ ಚದುರಿದ ಅಥವಾ ಪ್ರತ್ಯೇಕವಾದ ಮಳೆ ಬೀಳುತ್ತದೆ. ಇದು ಮಾನ್ಸೂನ್ನ ಉಪಸ್ಥಿತಿಯು ಪ್ರಸ್ತುತ ಮುನ್ಸೂಚನೆಯ ವಿಂಡೋವನ್ನು ಮೀರಿ ಇರುತ್ತದೆ ಎಂದು ಸೂಚಿಸುತ್ತದೆ.

# ಕಸ, ಮುರಿದ ಭರವಸೆಗಳಲ್ಲಿ ಪಂಜಾಬ್ ಮುಳುಗಿದೆ ಅರವಿಂದ ಕೇಜ್ರಿವಾಲ್ ವಿರುದ್ಧ ಬಿಜೆಪಿ ವಾಗ್ದಾಳಿ

**ನವದೆಹಲಿ, ಆ.2:** ಚುನಾವಣೆ ನಡೆಯಲಿರುವ ಪಂಜಾಬ್‌ನ ಲುಧಿಯಾನದಲ್ಲಿ ಕಸದ ರಾಶಿಯನ್ನು ತೋರಿಸುವ ವೀಡಿಯೊವನ್ನು ಬಿಜೆಪಿ ಭಾನುವಾರ ಪೋಸ್ಟ್ ಮಾಡಿದೆ, ಎಎಪಿ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ದೆಹಲಿಗೆ "ಕಸ, ದುರಾಡಳಿತ ಮತ್ತು ಮುರಿದ ಭರವಸೆಗಳಲ್ಲಿ ಮುಳುಗುವಂತೆ" ಮಾಡುವ ಮೂಲಕ ರಾಜ್ಯಕ್ಕೆ ನಿಖರವಾಗಿ ಮಾಡಿದ್ದಾರೆ ಎಂದು ಆರೋಪಿಸಿದೆ. ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ಪೋಸ್ಟ್ ನಲ್ಲಿ, ಬಿಜೆಪಿ ಐಟಿ ಸೆಲ್ ಉಸ್ತುವಾರಿ ಅಮಿತ್ ಮಾಳವಿಯಾ ಹೀಗೆ ಹೇಳಿದರು: "ಅರವಿಂದ್ ಕೇಜ್ರಿವಾಲ್ ದೆಹಲಿಗೆ ಮಾಡಿದ್ದನ್ನೇ ಪಂಜಾಬ್‌ಗೆ ಮಾಡಿದ್ದಾರೆ, ಅದು ಕಸ, ದುರಾಡಳಿತ ಮತ್ತು ಮುರಿದ ಭರವಸೆಗಳಲ್ಲಿ ಮುಳುಗುವಂತೆ ಮಾಡಿದ್ದಾರೆ." "ಭಗವಂತ್ ಮಾನ್ ಮತ್ತು ಕೇಜ್ರಿವಾಲ್ ಅವರ ಅಡಿಯಲ್ಲಿ, ಪಂಜಾಬ್‌ನ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ, ಸಾರ್ವಜನಿಕ ಆರೋಗ್ಯ ಮತ್ತು ಶಿಕ್ಷಣವು ನಷ್ಟ ಅನುಭವಿಸಿದೆ ಮತ್ತು ನಗರಗಳು ಕಸದಿಂದ ತುಂಬಿವೆ. "ಬದ್ಲಾವ್" ನ ಉನ್ನತ



ಭರವಸೆಗಳು ಆಡಳಿತಾತ್ಮಕ ಕುಸಿತಕ್ಕೆ ದಾರಿ ಮಾಡಿಕೊಟ್ಟಿವೆ. ಮೂಲಭೂತ ನಾಗರಿಕ ಸೇವೆಗಳು ಕುಸಿಯುತ್ತಿರುವಾಗ ಪ್ರಚಾರದಲ್ಲಿ ಮಾತ್ರ ಶ್ರೇಷ್ಠತೆಯನ್ನು ಹೊಂದಿರುವ ಸರ್ಕಾರಕ್ಕಿಂತ ಪಂಜಾಬ್ ಉತ್ತಮವಾಗಿದೆ. ಪಂಜಾಬ್‌ನ ಜನರು ಒಟ್ಟಾಗಿ ಸೇರಿ ಎಲ್ಲಕ್ಕಿಂತ ದೊಡ್ಡ ಕಸವಾದ ಎಎಪಿ ಸರ್ಕಾರವನ್ನು ಹೊರಹಾಕುವ ಸಮಯ ಇದು" ಎಂದು ಅವರು ಬರೆದಿದ್ದಾರೆ. ಲುಧಿಯಾನದಲ್ಲಿ ಆರು ದಿನಗಳಿಂದ ಹೆಚ್ಚುತ್ತಿರುವ ಕಸ ಮತ್ತು ನಾಗರಿಕ ಪರಿಸ್ಥಿತಿ ಹದಗೆಡುತ್ತಿರುವ ಹಿನ್ನೆಲೆಯಲ್ಲಿ, ಪಂಜಾಬ್ ಸ್ಥಳೀಯ ಸರ್ಕಾರಿ ಸಚಿವ ಹರ್ಜೋತ್ ಸಿಂಗ್ ಬೈನ್ಸ್ ಅವರೊಂದಿಗಿನ ಮಾತುಕತೆಯ ನಂತರ ನೈರ್ಮಲ್ಯ ಕಾರ್ಮಿಕರು ಶನಿವಾರ ತಮ್ಮ ಮುಷ್ಕರವನ್ನು ಹಿಂತೆಗೆದುಕೊಂಡರು. ಮುಷ್ಕರದಿಂದಾಗಿ ನಗರದಲ್ಲಿ ತ್ಯಾಜ್ಯ ಸಂಗ್ರಹಣೆ ತೀವ್ರವಾಗಿ ಅಡ್ಡಿಪಡಿಸಿತು, ರಸ್ತೆಗಳು, ಮಾರುಕಟ್ಟೆಗಳು ಮತ್ತು ವಸತಿ ಪ್ರದೇಶಗಳಲ್ಲಿ 6,000 ಮೆಟ್ರಿಕ್ ಟನ್‌ಗಳಿಗೂ ಹೆಚ್ಚು ಕಸ ಸಂಗ್ರಹವಾಗಿದೆ ಎಂದು ವರದಿಯಾಗಿದೆ.

# ಪ್ರಧಾನಿ ಮೋದಿಯಿಂದ ನನ್ನ ಮಗಳಿಗೆ ಜೀವದಾನ ಸಿಕ್ಕಿದೆ

**ನವದೆಹಲಿ:** ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ ಪ್ರತಿಭಟನೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅವಾಚ್ಯ ಶಬ್ದಗಳಿಂದ ನಿಂದಿಸಿ ಪೊಲೀಸ್ ಕೇಸ್‌ಗೆ ಗುರಿಯಾಗಿದ್ದ ತನ್ನ ಮಗಳನ್ನು ಕ್ಷಮಿಸಿದ್ದಕ್ಕಾಗಿ ಪ್ರಧಾನಿಗೆ ಬಾಲಕಿಯ ತಾಯಿ ಧನ್ಯವಾದ ಅರ್ಪಿಸಿದ್ದಾರೆ. ಪ್ರಧಾನಿ ಮೋದಿ ಅವರ ನಡೆಯಿಂದ ನನ್ನ ಮಗಳಿಗೆ ಜೀವದಾನ ಸಿಕ್ಕಿದೆ ಎಂದು 15 ವರ್ಷದ ಬಾಲಕಿಯ ತಾಯಿ ಹೇಳಿದ್ದಾರೆ.

ಪ್ರಧಾನಿ ಮೋದಿ ಈ ದೇಶದ ನಾಯಕ. ಅವರ ಮುಂದೆ ನಾವು ಏನೂ ಅಲ್ಲ. ಅವರನ್ನು ತುಂಬಾ ಕೆಟ್ಟದಾಗಿ ನಿಂದಿಸಿದ ಹುಡುಗಿಯನ್ನು ಕ್ಷಮಿಸುವ ಮೂಲಕ ಅವರು ದೊಡ್ಡತನ ಮೆರೆದಿದ್ದಾರೆ. ನಾನು ಅವರಿಗೆ ಕೈಜೋಡಿಸಿ ಧನ್ಯವಾದ ಹೇಳುತ್ತೇನೆ. ಇಂದು ನನ್ನ ಮಗಳ ಹುಟ್ಟುಹಬ್ಬ. ಆಕೆಗೆ ಪ್ರಧಾನಿ ಮೋದಿ ಅವರಿಂದ ದೊಡ್ಡ ಉಡುಗೊರೆಯೇ ಸಿಕ್ಕಿದೆ. ಅವರು ಆಕೆಗೆ ಜೀವದಾನ ನೀಡಿದ್ದಾರೆ. ನನ್ನ ಮಗಳು ಇಂದು ಹೊಸ ಜೀವನವನ್ನು ಪಡೆದಿದ್ದಾಳೆ ಎಂದು ಆಕೆಯ ತಾಯಿ ತಿಳಿಸಿದ್ದಾರೆ.

ಭಾವನಾತ್ಮಕವಾಗಿ ಮಾತನಾಡಿದ ಮಹಿಳೆ, ಪ್ರಧಾನಿ ಮೋದಿ ಅವರು ನನ್ನ ಮಗಳನ್ನು ದತ್ತು ಪಡೆದು ಆಕೆಯ ಭವಿಷ್ಯಕ್ಕೆ ನೆರವಾಗುವಂತೆ ವಿನಂತಿಸಿಕೊಂಡಿದ್ದಾರೆ. ದೆಹಲಿಯಲ್ಲಿ ನಡೆದ ನೀಟ್ ಪ್ರತಿಭಟನೆಯ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಅವಾಚ್ಯ ಶಬ್ದಗಳನ್ನು ಬಳಸಿದ್ದಕ್ಕಾಗಿ ಬಾಲಕಿ ವಿರುದ್ಧ ಪ್ರಕರಣ ದಾಖಲಾಗಿತ್ತು. ನಂತರ ಆಕೆ ಸೋಷಿಯಲ್ ಮೀಡಿಯಾದಲ್ಲಿ ವಿಡಿಯೋ ಮೂಲಕ ಕ್ಷಮೆಯಾಚಿಸಿದ್ದಾಳೆ.

# ರಾಜ್ಯದ ರೈತರ ಧ್ವನಿಯಾಗಿ ಬಿಜೆಪಿ ಹೋರಾಟ ನಡೆಸಲಿದೆ ಸದನದಲ್ಲಿ ಚರ್ಚೆ: ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ

**ಬೆಂಗಳೂರು, ಆ. 2:** ರಾಜ್ಯದ ಬರ ಪರಿಸ್ಥಿತಿಯನ್ನು ನಿಭಾಯಿಸಲು ವಿಫಲವಾಗಿರುವ ರಾಜ್ಯ ಸರ್ಕಾರದ ವಿರುದ್ಧ ಹೋರಾಟ, ಮುಂದಿನ ಉಪಚುನಾವಣೆಗಳು, ಕಾವೇರಿ ನದಿ ನೀರಿನ ವಿಚಾರ, ಕೆಪಿಎಸ್ಸಿ ಹಗರಣ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ಚರ್ಚೆಗಳನ್ನು ನಡೆಸಲಾಗಿದೆ.

ಬೆಂಗಳೂರಿನ ಬಿಜೆಪಿ ರಾಜ್ಯ ಕಚೇರಿಯಲ್ಲಿಂದು ಬಿಜೆಪಿ ರಾಜ್ಯ ಉಸ್ತುವಾರಿ ರಾಧಾ ಮೋಹನ್ದಾಸ್, ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ನಡೆದ ಕೋರ್ ಕಮಿಟಿ ಸಭೆಯಲ್ಲಿ, ರಾಜ್ಯದಲ್ಲಿ ಮಳೆ ಕೊರತೆ, ಬರ ಪರಿಸ್ಥಿತಿ, ಬರ ಪರಿಹಾರದಲ್ಲಿ ರಾಜ್ಯ ಸರ್ಕಾರದ ವೈಫಲ್ಯ, ಪಿಂಚಣಿ ವಿವಾದ ಮತ್ತು ಮುಂಬರುವ ಉಪಚುನಾವಣೆಗಳ ಬಗ್ಗೆ ಚರ್ಚೆ ನಡೆಸಲಾಯಿತು.

ರಾಜ್ಯದಲ್ಲಿ ಬರ ಇದ್ದರೂ ರಾಜ್ಯ ಸರ್ಕಾರ ಪರಿಹಾರ ಕಾರ್ಯಗಳನ್ನು ಕೈಗೊಳ್ಳದೆ ಇರುವುದರ ವಿರುದ್ಧ ಮುಂಬರುವ ವಿಧಾನಸಭಾ ಅಧಿವೇಶನದಲ್ಲಿ ಪ್ರಸ್ತಾಪಿಸಿ, ಸದನದಲ್ಲಿ ಯಾವ ರೀತಿ1 ಹೋರಾಟ ನಡೆಸಬೇಕು ಎಂಬ ಬಗ್ಗೆಯೂ ಕೋರ್ ಕಮಿಟಿ ಸಭೆಯಲ್ಲಿ



ಚರ್ಚಿಸಲಾಯಿತು.

ಮುಂಬರುವ ಹಿರಿಯೂರು ಕ್ಷೇತ್ರದ ಉಪಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಯನ್ನು ನಿಲ್ಲಿಸುವ ಸಂಬಂಧ ಚರ್ಚೆಗಳು ನಡೆದವು. ಹಾಗರ್ಯೇ ಆಕ್ಟೋಬರ್‌ನಲ್ಲಿ ನಡೆಸುವ ವಿಧಾನಪರಿಷತ್ ಚುನಾವಣೆ ಸಂಬಂಧವೂ ಚರ್ಚೆಗಳು ನಡೆದವು. ಕೆಪಿಎಸ್ಸಿ ಹಗರಣದ ಬಗ್ಗೆಯೂ ವಿಧಾನಮಂಡಲದ ಅಧಿವೇಶನದಲ್ಲಿ ಚರ್ಚೆ ಮಾಡುವ ಬಗ್ಗೆಯೂ ಕೋರ್ ಕಮಿಟಿ ಸಭೆಯಲ್ಲಿ ಚರ್ಚಿಸಲಾಗಿದೆ.

ತಾಂತ್ರಿಕ ಕಾರಣದಿಂದ ಪಿಂಚಣಿ ವಂಚಿತರಾದರಪರ ಹೋರಾಟ ನಡೆಸಲುಸಭೆಯಲ್ಲಿ ತೀರ್ಮಾನಗಳಾದವು ಎಂದು ಹೇಳಲಾಗಿದೆ. ಹಾಗೆಯೇ ಕಾವೇರಿ ವಿಚಾರದಲ್ಲಿ ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲು ರಾಜ್ಯಸ ರ್ಕಾರದ ಮೇಲೆ ಯಾವ ರೀತಿ ಒತ್ತಡ ಹೇರಬೇಕು, ಅಗ ತ್ಯವಿದ್ದೆ ಕಾವೇರಿ ವಿಚಾರದಲ್ಲಿ ಹೋರಾಟ ನಡೆಸುವ ಬಗ್ಗೆಯೂ ಇಂದಿನ ಕೋರ್ ಕಮಿಟಿ ಸಭೆಯಲ್ಲಿ ಚರ್ಚೆಗಳು ನಡೆದವು ಎನ್ನಲಾಗಿದೆ.

ಇಂದಿನ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ವಿಧಾನಪರಿಷತ್ತಿನ ಪ್ರತಿಪಕ್ಷ ನಾಯಕರಾದ ಆರ್. ಅಶೋಕ್, ಛಲವಾದಿ ನಾರಾಯಣಸ್ವಾಮಿ, ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ಸದಾನಂದಗೌಡ, ಸಂಸದ ಗೋವಿಂದ ಕಾರಜೋಳ, ಮಾಜಿ ಸಚಿವರಾದ ಸಿ.ಟಿ. ರವಿ, ಡಾ.ಸಿ.ಎನ್. ಅಶ್ವತ್ಥ್ ನಾರಾಯಣ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲು, ಮಾಜಿ ಶಾಸಕರುಗಳಾದ ನಿರ್ಮಲ್ ಕುಮಾರ್ ಸುರಾನಾ, ಪಿ. ರಾಜೀವ್, ರಾಜ್ಯ ಸಹ ಉಸ್ತುವಾರಿ ಪಿ. ಸುಧಾಕರರೆಡ್ಡಿ ಭಾಗಿಯಾಗಿದ್ದರು.

### ರಾಜ್ಯ ಸರ್ಕಾರದ ಈ ನಡೆಯ ವಿರುದ್ಧ ಮುಂದಿನ ವಿಧಾನಸಭಾ ಅಧಿವೇಶನದಲ್ಲಿ ಬಿಜೆಪಿ ಹೋರಾಟ ನಡೆಸಲಿದೆ

ಸದನದಲ್ಲಿ ರೈತರ ಧ್ವನಿಯಾಗಿ ಯಾವ ವಿಚಾರಗಳನ್ನು ಮಂಡನೆ ಮಾಡಬೇಕು ಎಂಬ ಬಗ್ಗೆ ಕೋರ್ ಕಮಿಟಿ ಸಭೆಯಲ್ಲಿ ಚರ್ಚಿಸಿದ್ದೇವೆ. ಸದನದ ಹೊರಗೂ, ಒಳಗೂ ಬಿಜೆಪಿ ರಾಜ್ಯದ ಜನತೆ ಪರವಾಗಿ ಹೋರಾಟ ನಡೆಸಲಿದೆ ಎಂದರು.

ಕೆಪಿಎಸ್ಸಿ ಹಗರಣದ ಬಗ್ಗೆಯೂ ಅಧಿವೇಶನದಲ್ಲಿ ಚರ್ಚೆ ಮಾಡುತ್ತೇವೆ. ಕೆಪಿಎಸ್ಸಿಯಲ್ಲಿ ನಡೆದ ಅಕ್ರಮದಿಂದ ಪ್ರತಿಭಾವಂತ ಯುವಕರಿಗೆ ಅನ್ಯಾಯವಾಗಿದೆ ಈ ಬಗ್ಗೆಯೂ ಬಿಜೆಪಿ ಹೋರಾಟ ನಡೆಸಲಿದೆ ಎಂದರು. ಮುಂದಿನ ಅಕ್ಟೋಬರ್‌ನಲ್ಲಿ ವಿಧಾನ ಪರಿಷತ್‌ನ ನಾಲ್ಕು ಕ್ಷೇತ್ರಗಳಿಗೆ ನಡೆಯುವ ಚುನಾವಣೆ ಬಗ್ಗೆ ಚರ್ಚೆ ನಡೆಸಲಾಯಿತು. ಈಗಾಗಲೇ ಮೂರು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಣೆ ಮಾಡಲಾಗಿದೆ. ಇನ್ನೂ ಒಂದು ಕ್ಷೇತ್ರಕ್ಕೆ ಜೆಡಿಎಸ್ ಜತೆ ಸಮಾಲೋಚನೆ ಮಾಡಿ ಅಭ್ಯರ್ಥಿಯನ್ನು ಅಂತಿಮಗೊಳಿಸಲಾಗುವುದು ಎಂದರು.



ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಏಸರ್ ರನ್ 2026 ಎಂಬ ಫಿಟ್‌ನೆಸ್ ಕಾರ್ಯಕ್ರಮದಲ್ಲಿ ಬೆಂಗಳೂರಿನಾದ್ಯಂತ 2,000 ಕ್ಕೂ ಹೆಚ್ಚು ಓಟಗಾರರು ಭಾಗವಹಿಸಿದ್ದರು.

# ರಾಜ್ಯಾದ್ಯಂತ ಸುಗಮವಾಗಿ ನಡೆದ ಸಿವಿಲ್ ಪೊಲೀಸ್ ಪೇದೆಗಳ ನೇಮಕಾತಿ ಪರೀಕ್ಷೆ

**ಬೆಂಗಳೂರು, ಆ.2–** ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವತಿಯಿಂದ ರಾಜ್ಯದಾದ್ಯಂತ ನಡೆಸಲಾದ ಸಿವಿಲ್ ಪೊಲೀಸ್ ಕಾನ್ಸ್ ಟೇಬಲ್ ನೇಮಕಾತಿ ಪರೀಕ್ಷೆ ಸುಸೂತ್ರವಾಗಿ ನೆರವೇರಿದೆ. ಒಟ್ಟು 3,991 ಪೊಲೀಸ್ ಕಾನ್ಸ ಟೇಬಲ್ ಹುದ್ದೆಗಳ ನೇಮಕಾತಿಗೆ ನಡೆದ ಪರೀಕ್ಷೆಗೆ ರಾಜ್ಯಾದ್ಯಂತ 4,54,532 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದು, 884 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಆಯೋಜಿಸಲಾಗಿತ್ತು. ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಬೆಳಗ್ಗೆ 10.30ರಿಂದ ಮಧ್ಯಾಹ್ನ 12ರವರೆಗೆ ಪರೀಕ್ಷೆ ನಡೆದರೆ, ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಮಧ್ಯಾಹ್ನ 4ರಿಂದಸಂಜೆ 5.30ರವರೆಗೆ ಪರೀಕ್ಷೆ ನಡೆಯಿತು.

ಪರೀಕ್ಷೆಯಲ್ಲಿ ಅಕ್ರಮಗಳಿಗೆ ಕಡಿವಾಣ ಹಾಕಲು ಕೆಇಎ ವತಿಯಿಂದ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿತ್ತು. ಪರೀಕ್ಷಾ ಕೇಂದ್ರಗಳಲ್ಲಿ ವೆಬ್ಕಾಸ್ಟಿಂಗ್, ಸಿಸಿಟಿವಿ ಕ್ಯಾಮೆರಾ ಹಾಗೂ ಜಾಮರ್ಗಳ ಮೂಲಕ ನಿಗಾ ವಹಿಸಲಾಗಿತ್ತು. ಬೆಂಗಳೂರು ಸೇರಿದಂತೆ ಎಂಟು ಜಿಲ್ಲೆಗಳಲ್ಲಿ ಕೆಇಎ ಕಮಾಂಡ್ ಸೆಂಟರ್ ಸ್ಥಾಪಿಸಲಾಗಿತ್ತು. ಬೆಂಗಳೂರು, ಕಲಬುರಗಿ, ಯಾದಗಿರಿ, ರಾಯಚೂರು, ಬೀದರ್, ಬಳ್ಳಾರಿ, ವಿಜಯನಗರ ಹಾಗೂ ಕೊಪ್ಪಳ ಜಿಲ್ಲೆಗಳ ಪರೀಕ್ಷಾ ಕೇಂದ್ರಗಳ ಮೇಲೆ ಬೆಂಗಳೂರಿನ ಕಮಾಂಡ್ ಸೆಂಟರ್ನಿಂದಲೇ ನಿಗಾ ವಹಿಸಲಾಯಿತು. ಉಳಿದ ಜಿಲ್ಲೆಗಳಲ್ಲಿ ಆಯಾ ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ ಪರೀಕ್ಷೆಯ ಭದ್ರತೆ ಹಾಗೂ ಮೇಲ್ವಿಚಾರಣೆ ನಡೆಸಲಾಯಿತು.

ಬೆಂಗಳೂರು ನಗರದಲ್ಲಿ ಬೆಳಗ್ಗೆ 149 ಪರೀಕ್ಷಾ ಕೇಂದ್ರಗಳಲ್ಲಿ 74,942 ಅಭ್ಯರ್ಥಿಗಳು ಹಾಗೂ ಮಧ್ಯಾಹ್ನ 47 ಕೇಂದ್ರಗಳಲ್ಲಿ 22,369 ಅಭ್ಯರ್ಥಿಗಳು ಪರೀಕ್ಷೆ ಬರೆದರು. ಒಟ್ಟು 97,311



ಅಭ್ಯರ್ಥಿಗಳು ಬೆಂಗಳೂರಿನಲ್ಲಿ ಪರೀಕ್ಷೆಗೆ ನೋಂದಾಯಿಸಿದ್ದರು.ಪರೀಕ್ಷೆಯ ಸುಗಮ ನಿರ್ವಹಣೆಗಾಗಿ 196 ಪ್ರಶ್ನೆಪತ್ರಿಕೆ ಪಾಲಕರು, 196 ಜಾಗೃತ ದಳದ ಸಿಬ್ಬಂದಿ, 72 ಮಾರ್ಗಾಧಿಕಾರಿಗಳು, 196 ವಸ್ತ್ರಸಂಹಿತೆ ಅಧಿಕಾರಿಗಳು ಹಾಗೂ 196 ವೀಕ್ಷಕರನ್ನು ನಿಯೋಜಿಸಲಾಗಿತ್ತು.

200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿತ್ತು.ಬೆಳಗ್ಗೆ 7ರಿಂದ ಪರೀಕ್ಷೆ ಆರಂಭವಾಗಿ ಮುಕ್ತಾಯ ವಾಗುವವರೆಗೆ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಬಂದ್ ಮಾಡಲಾಗಿತ್ತು. ಅಕ್ರಮ ತಡೆಗಟ್ಟುವ ನಿಟ್ಟಿನಲ್ಲಿ ಅಭ್ಯರ್ಥಿಗಳ ಮೇಲೆ ಕಟ್ಟುನಿಟ್ಟಿನ ತಪಾಸಣೆ ನಡೆಸಲಾಯಿತು. ಮೊಬೈಲ್, ಬ್ಲೂಟೂತ್ ಸಾಧನ, ಸ್ಮಾರ್ಟ್‌ವಾಚ್, ವಾಚ್, ಕ್ಯಾಲ್ಕುಲೇಟರ್ ಸೇರಿದಂತೆ ಯಾವುದೇ ಎಲೆಕ್ಟ್ರಾನಿಕ್ ಸಾಧನಗಳನ್ನು ಪರೀಕ್ಷಾ ಕೇಂದ್ರದೊಳಗೆ ಕೊಂಡೊಯ್ಯಲು ಅವಕಾಶ ಇರಲಿಲ್ಲ.

ಯಾವುದೇ ರೀತಿಯ ಲೋಹದ ವಸ್ತು, ಆಭರಣ ಹಾಗೂ ವೈಯಕ್ತಿಕ ವಸ್ತುಗಳಿಗೂ ನಿರ್ಬಂಧ ವಿಧಿಸಲಾಗಿತ್ತು.ಅಭ್ಯರ್ಥಿಗಳು ಉದ್ದ ತೋಳಿನ ಉಡುಪು, ಮುಖ ಅಥವಾ ತಲೆ ಮುಚ್ಚುವ ವಸ್ತ್ರ ಧರಿಸುವಂತಿರಲಿಲ್ಲ. ಮೂಗುತಿ ಹಾಗೂ ಮಂಗಳಸೂತ್ರಕ್ಕೆ ಮಾತ್ರ ವಿನಾಯಿತಿ ನೀಡಲಾಗಿತ್ತು. ಶೂ ಧರಿಸುವುದಕ್ಕೂ ನಿರ್ಬಂಧ ವಿದ್ದು, ಚಪ್ಪಲಿ ಅಥವಾ ಕಡಿಮೆ ಹಿಮ್ಮಡಿಯ ಸ್ಯಾಂಡಲ್ ಧರಿಸಿ ಬರುವಂತೆ ಸೂಚಿಸಲಾಗಿತ್ತು. ಪರೀಕ್ಷೆ ಆರಂಭಕ್ಕೂ ಎರಡು ಗಂಟೆ ಮುಂಚಿತವಾಗಿ ಅಭ್ಯರ್ಥಿಗಳು ಕೇಂದ್ರಕ್ಕೆ ಹಾಜರಾಗುವಂತೆ ಸೂಚಿಸಲಾಗಿತ್ತು. ಪರೀಕ್ಷೆ ಆರಂಭಕ್ಕೂ 30 ನಿಮಿಷ ಮುಂಚಿತವಾಗಿ ಕೇಂದ್ರದೊಳಗೆ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿತ್ತು. ವಿಶೇಷ ಚೇತನ ಅಭ್ಯರ್ಥಿಗಳಲ್ಲಿ ಶ್ರವಣ ಸಾಧನ ಅಥವಾ ಕೋಕ್ಲಿಯರ್ ಇಂಪ್ಲಾಂಟ್ ಬಳಸುವವರು ಯುಡಿಐಡಿ ಕಾರ್ಡ್ ಹಾಗೂ ವೈದ್ಯಕೀಯ ಪ್ರಮಾಣಪತ್ರದೊಂದಿಗೆ ಹಾಜರಾಗುವಂತೆ ಸೂಚಿಸಲಾಗಿತ್ತು. ಪರಿಶೀಲನೆ ಬಳಿಕ ಅವರಿಗೆ ಶ್ರವಣ ಸಾಧನದೊಂದಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಯಿತು.ಪರೀಕ್ಷೆಯನ್ನು ಪಾರದರ್ಶಕವಾಗಿ ಹಾಗೂ ಯಾವುದೇ ಅಕ್ರಮಗಳಿಗೆ ಅವಕಾಶವಿಲ್ಲದಂತೆ ನಡೆಸಲು ಅಗತ್ಯವಿರುವ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು ಸಿಸಿಟಿವಿಗಳನ್ನು ಕೂಡ ಅಳವಡಿಕೆ ಮಾಡಲಾಗಿದೆ. ಕಾಲೇಜುಗಳಲ್ಲಿ ಕೂಡ ಮಾನಿಟರಿಂಗ್ ಮಾಡಲಾಗಿದೆ. ನಾವು ಇಲ್ಲಿ ಬೆಂಗಳೂರಿನ ಕೇಂದ್ರಗಳ ಮಾನಿಟರ್ ಮಾಡ್ತಾ ಇದ್ದೇವೆ. ಕಲಬುರಗಿ ಸೇರಿದಂತೆ ಸೂಕ್ಷ್ಮ ಕೇಂದ್ರಗಳ ಮಾನಿಟರಿಂಗ್ ಬೆಂಗಳೂರಲ್ಲಿ ಆಗುತಿದೆಯಾವುದೇ ಅಕ್ರಮ ಆಗದಂತೆ ಎಚ್ಚರಿಕೆಯನ್ನು ವಹಿಸಲಾಗಿದೆ. ಮಳೆ ಬಂದು ಪರೀಕ್ಷೆಗಳಿಗೆ ಹೋಗಲು ಆಗದೇ ಇರುವಂತಹ ಅಭ್ಯರ್ಥಿಗಳಿಗೆ 10 ದಿನ ಮುಂಚಿತವಾಗಿ ನಾವು ಜಿಲ್ಲೆಗಳು ತಿಳಿಸಿದ್ದೇವೆ. ಯಾವ ಜಿಲ್ಲೆಯಲ್ಲಿ ಪರೀಕ್ಷೆ ಆಗಲಿದೆ ಎಂದು ಮುಂಚಿತವಾಗಿಯೇ ತಿಳಿಸಲಾಗಿತ್ತು. ಪರೀಕ್ಷಾ ಕೇಂದ್ರಗಳನ್ನು ಮೂರು ದಿನ ಮುಂಚಿತವಾಗಿ ತಿಳಿಸಿದ್ದೇವೆ ಎಂದು ತಿಳಿಸಿದರು.

**ಪರೀಕ್ಷೆ ಕೇಂದ್ರಗಳಿಗೆ ನೇಮಕಾತಿ ವಿಭಾಗದ ಡಿಜಿಪಿ ಉಮೇಶ್ ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿ, ಕಳೆದ ಬಾರಿ ಪಿಎಸ್‌ಐ ಎಕ್ಸಾಂ ಕೆಇಎ ಬಹಳ ಚನ್ನಾಗಿ ನಡೆಸಿತ್ತು. ಹೀಗಾಗಿ ಕಾನ್ಸ್ಟೇಬಲ್ ಎಕ್ಸಾಂ ಕೂಡ ಕೆಇಎಗೆ ನಡೆಸಲು ಹೇಳಿದ್ದೇವೆ. ನಾನು ಬಂದು ಪರೀಶೀಲನೆ ಮಾಡಿದ್ದೇವೆ. ಯಾವುದೇ ರೀತಿ ತೊಂದರೆ ಆಗದಂತೆ ಕ್ರಮ ವಹಿಸಲಾಗುತ್ತಿದೆ. ಎಸ್ಪಿ ಆಫೀಸ್ ಅಲ್ಲಿ ಕೂಡ ಮಾನಿಟರಿಂಗ್ ಮಾಡಲಾಗುತ್ತಿದೆ ಎಂದರು.**

## ಸಂತ ಶಿರೋಮಣಿ ಗುರು ಶ್ರೀ ರವಿದಾಸ್‌ರವರ 650ನೇ ಜಯಂತಿ ಅಂಗವಾಗಿ ದೇಶಾದ್ಯಂತ ಯಾತ್ರೆ–ಬಿ.ವೈ. ವಿಜಯೇಂದ್ರ



**ಬೆಂಗಳೂರು,ಆ.2:** ಸಂತ ರವಿದಾಸದ ಪವಿತ್ರ ಕಳಸವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಕಾರ್ಯಕರ್ತರು ತೆಗೆದುಕೊಂಡು ಹೋಗಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ತಿಳಿಸಿದ್ದಾರೆ.

ಸಂತ ಶಿರೋಮಣಿ ಗುರು ಶ್ರೀ ರವಿದಾಸರ 650ನೇ ವರ್ಷದ ಜಯಂತಿ ಅಂಗವಾಗಿ ದೇಶದಾದ್ಯಂತ ಶ್ರೀ ಗುರು ರವಿದಾಸ್ ಮಹಾರಾಜ್ ಕಲಶ್ ವಂದನ್ ಅಭಿಯಾನ ಮತ್ತು ಕಳಶ ಯಾತ್ರೆಯ ಅಂಗವಾಗಿ ಕಳಶವನ್ನು ಇಂದು ಸ್ವೀಕರಿಸಿ ಅವರು ಮಾತನಾಡಿದರು. ಸಮ ಸಮಾಜ ನಿರ್ಮಾಣ ಮಾಡಬೇಕು ಎಂಬ ಸಂದೇಶವನ್ನು ರಾಜ್ಯದ ಮೂಲೆ ಮೂಲೆಗೆ ಹರಡಲಿದ್ದಾರೆ. ಈ ಸಂಬಂಧ ಜಾಗೃತಿ ಮೂಡಿಸಲು ಎಲ್ಲಾ ಕಾರ್ಯಗಳನ್ನು ನಮ್ಮ ಕಾರ್ಯಕರ್ತರು ಮಾಡಲಿದ್ದಾರೆ ಎಂದು ಅವರು ಹೇಳಿದರು.

ಕಲಶ್ ವಂದನ್ ಅಭಿಯಾನ ಮತ್ತು ಕಳಶ ಯಾತ್ರೆಯನ್ನು ವಿಜೃಂಭಣೆಯಿಂದ ನಡೆಸಲು ಉತ್ತರಪ್ರದೇಶದ ಮುಖ್ಯಮಂತ್ರಿಗಳಾದ ಯೋಗಿ ಆದಿತ್ಯನಾಥ್ ಅವರು ಎಲ್ಲಾ ರಾಜ್ಯಗಳಿಗೆ ಪವಿತ್ರ ಕಳಶವನ್ನು ಕಳುಹಿಸಿದ್ದು, ಈ ಕಳಶವನ್ನು ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ವಿಜಯೇಂದ್ರ ಅವರು ಸ್ವೀಕರಿಸಿದರು.

ರಾಜ್ಯ ಉಸ್ತುವಾರಿ ಡಾ. ರಾಧಾಮೋಹನ್ ದಾಸ್ ಅಗ್ರವಾಲ್, ಸಹ ಉಸ್ತುವಾರಿ ಪಿ.ಸುಧಾಕರ ರೆಡ್ಡಿ, ಎಸ್ಸಿ ಮೋರ್ಚಾ ರಾಜ್ಯ ಅಧ್ಯಕ್ಷ ಮತ್ತು ಶಾಸಕ ಸಿಮೆಂಟ್ ಮಂಜುನಾಥ್, ಶಾಸಕ ಬಸವರಾಜ ಮತ್ತಿಮಡು, ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಎಂಎಲ್ಸಿ ಸಿ.ಟಿ.ರವಿ, ಎಸ್ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಹೂಡಿ ಮಂಜುನಾಥ್, ಪ್ರಧಾನ ಕಾರ್ಯದರ್ಶಿಗಳಾದ ಮಹೇಂದ್ರ ಕೌತಾಳ, ಪ್ರಶಾಂತ್ ಕುಮಾರ್ ಮತ್ತು ಪಕ್ಷದ ಮುಖಂಡರು ಉಪಸ್ಥಿತರಿದ್ದರು.

## ರಾಜ್ಯದ ಹಲವೆಡೆ ವ್ಯಾಪಕ ಮಳೆ: ತುಂಬಿ ಹರಿಯುತ್ತಿರುವ ನದಿಗಳು, ತೀರ್ಥಹಳ್ಳಿಯಲ್ಲಿ ಮೂವರ ಸಾವು

**ಬೆಂಗಳೂರು,ಆ.2:** ರಾಜ್ಯದ ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ವ್ಯಾಪಕವಾಗಿ ಮಳೆ ಯಾಗುತ್ತಿದ್ದು, ಹಲವು ಕಡೆಗಳಲ್ಲಿ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಹಲವು ಜಲಾಶಯಗಳು ಬಹುತೇಕ ಭರ್ತಿಯಾಗುವ ಹಂತ ತಲುಪಿವೆ.

ಕಬಿನಿ, ಹಾರಂಗಿ ಜಲಾಶಯಗಳು ಬಹುತೇಕ ಭರ್ತಿಯಾಗಿವೆ. ಮಂಡ್ಯ ಜಿಲ್ಲೆಯಲ್ಲಿರುವ ಕೃಷ್ಣರಾಜಸಾಗರ ಜಲಾಶಯಕ್ಕೂ ಒಳ ಹರಿವು ಹೆಚ್ಚಾಗಿದೆ. ಕಾವೇರಿ ಕಣಿವೆಯ ಕೊಡಗು, ಭಾಗಮಂಡಲದಲ್ಲಿ ಉತ್ತಮ ಮಳೆಯಾಗುತ್ತಿದೆ. ಕೆಆರ್ ಎಸ್ ಜಲಾಶಯಕ್ಕೆ ಕಳೆದ ಮೂರು ದಿನಗಳಿಂದ ಒಳಹರಿವು ಹೆಚ್ಚಾಗಿದೆ. ವಿವಿಧ ಜಲಾಶಯಗಳಿಗೆ ಒಳ ಹರಿವು ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ.



ಕೊಡಗು ಜಿಲ್ಲೆ, ಭಾಗಮಂಡಲದ ತ್ರಿವೇಣಿ ಸಂಗಮ ಸಂಪೂರ್ಣ ಜಲಾವೃತಗೊಂಡಿವೆ. ಈ ನಡುವೆ ಮಲೆನಾಡು ಭಾಗದಲ್ಲೂ ಭಾರೀ ಪ್ರಮಾಣದಲ್ಲಿ ಮಳೆಯಾಗುತ್ತಿದ್ದು, ಹಾಸನ ಜಿಲ್ಲೆ , ಸಕಲೇಶಪುರ ತಾಲೂಕು ಯಡಕುಮರಿ ಬಳಿ ರೈಲ್ವೆ ಹಳಿಯ ಮೇಲೆ ಗುಡ್ಡ ಕುಸಿದಿದೆ.

ಇಂದೂ ಸಹ ರಾಜ್ಯಾದ್ಯಂತ ಭಾರೀ ಮಳೆಯಾಗುವ ಸಾಧ್ಯತೆಗಳಿದ್ದು, 5 ಜಿಲ್ಲೆಗಳಿಗೆ ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದೆ. ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್, ಕೊಡುಗು ಮತ್ತು ಹಾಸನ ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಗಾಳಿಯು ಗಂಟೆಗೆ 30–40 ಕಿಲೋ ಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆ ಇದ್ದು, ಮೀನುಗಾರರು ಸಮುದ್ರಕ್ಕಿಳಿಯದಂತೆ ಎಚ್ಚರಿಕೆ ನೀಡಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಾದ್ಯಂತ ಭಾರೀ ಮಳೆಯಾಗಿದೆ. ಅಘನಾಶಿನಿ, ಶಾಲ್ ಮಲಾ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಕೆಂಗ್ರೆಹೊಳೆ ಸೇರಿ ಹಳ್ಳಕೊಳ್ಳಗಳೆಲ್ಲಾ ಭರ್ತಿಯಾಗಿವೆ. ಶಿವಮೊಗ್ಗ ಜಿಲ್ಲೆಯ ಗಾಜನೂರಿನ ತುಂಗಾ ಜಲಾಶಯ, ಲಕವಳ್ಳಿಯ ಭದ್ರ ಜಲಾಶಯ, ಕಾರ್ಗಲ್ ಬಳಿಯ ಲಿಂಗನಮಕ್ಕಿ ಜಲಾಶಯಕ್ಕೆ ಭಾರಿ ಪ್ರಮಾಣದಲ್ಲಿ ಒಳಹರಿವು ಹೆಚ್ಚಾಗಿದೆ.

ತೀರ್ಥಹಳ್ಳಿ ತಾಲೂಕಿನ ಆಗುಂಬೆ, ಹೊಸನಗರ, ಚಕ್ರನಗರ, ಸಾವೆ ಹಕ್ಕಲು, ಮಾಣಿ, ಮಾಸ್ತಿಕಟ್ಟೆಯಲ್ಲಿ ದಾಖಲೆಯ ಮಳೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಕೊಪ್ಪದಲ್ಲೂ ಸಹ ಮಳೆ ಮುಂದು ವರಿದಿದೆ. ತುಂಗಾ ಅಣೆಕಟ್ಟೆಗೆ ಒಳಹರಿವು ಹೆಚ್ಚಾಗಿದ್ದು, 5 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ.

ತುಂಗಭದ್ರಾ ಜಲಾಶಯದಲ್ಲಿ ಒಳಹರಿವಿನ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಗಳಿವೆ. ಮಹಾರಾಷ್ಟ್ರದಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕೊಯ್ನಾ ಜಲಾಶಯದಿಂದ 23 ಸಾವಿರ ಕ್ಯುಸೆಕ್ ನೀರನ್ನು ಕೃಷ್ಣಾ ನದಿಗೆ ಹರಿಯಬಿಡಲಾಗಿದೆ. ಇದರಿಂದ ಬೆಳಗಾವಿ ಜಿಲ್ಲೆಯಲ್ಲಿರುವ ಕೃಷ್ಣಾ ಹಾಗೂ ಘಟಪ್ರಭಾ ನದಿಗಳು ಉಕ್ಕಿ ಹರಿಯುತ್ತಿವೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಇಂದಿರಾ ನಗರದಲ್ಲಿ ಶನಿವಾರ ತಡರಾತ್ರಿ ಸುರಿದ ಭಾರೀ ಮಳೆಯಿಂದಾಗಿ ಗುಡ್ಡ ಕುಸಿದಿದ್ದು, ಕೆಳಭಾಗದಲ್ಲಿ ಶೆಡ್ ನಿರ್ಮಿಸಿಕೊಂಡು, ವಾಸಿಸುತ್ತಿದ್ದ ಕುಟುಂಬದ ಮೇಲೆ ಉರುಳಿ ಬಿದ್ದ ಪರಿಣಾಮ ಶೆಡ್ ನಲ್ಲಿದ್ದ ಒಂದೇ ಕುಟುಂಬದ ಮೂವರು ಮೃತಪಟ್ಟಿದ್ದಾರೆ. ಬಂಡೆಯಡಿ ಸಿಲುಕಿಕೊಂಡಿದ್ದ ಮತ್ತೋರ್ವ ವ್ಯಕ್ತಿಯನ್ನು ಸ್ಥಳೀಯರು ರಕ್ಷಿಸಿ, ಆಸ್ಪತ್ರೆಗೆ ದಾಖಲಿಸಿದ್ದಾರೆ. ಶೃಂಗೇರಿಯಲ್ಲಿ ಸಿರಿಮನೆ ಫಾಲ್ಸ್ ಗೆ ಹೋಗುವ ರಸ್ತೆಯಲ್ಲಿ ಮಳೆಯಿಂದಾಗಿ ಮರಗಳು ಉರುಳಿ ಬಿದ್ದಿದ್ದು, ಸುತ್ತಮುತ್ತಲ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಡಿತವಾಗಿದ್ದು, ರಸ್ತೆ ಬಂದ್ ಆಗಿದೆ. ಶೃಂಗೇರಿಯ ತುಂಗಾನದಿಯಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, ಶಾರದಾಂಬೆ ದೇವಾಲಯದ ಭೋಜನಾಲಯದವರೆಗೂ ನೀರು ಆವರಿಸಿದೆ.

ನದಿ ತೀರಕ್ಕೆ ಪ್ರವಾಸಿಗರು ತೆರಳದಂತೆ ಜಿಲ್ಲಾಡಳಿತ ಸೂಚನೆ ನೀಡಿದೆ. ಇದರಿಂದಾಗಿ ಬೆಂಗಳೂರು–ಮಂಗಳೂರು ಮಾರ್ಗದ ಎಲ್ಲ ರೈಲುಗಳ ಪ್ರಯಾಣ ರದ್ದುಗೊಳಿಸಲಾಗಿದೆ. ರೈಲ್ವೆ ಇಲಾಖೆಯ ಸಿಬ್ಬಂದಿ ಘಟನಾ ಸ್ಥಳಕ್ಕೆ ಧಾವಿಸಿದ್ದು, ಮಣ್ಣು ತೆರವು ಕಾರ್ಯಾಚರಣೆ ಆರಂಭಿಸಿದೆ.

ಬೆಂಗಳೂರು– ಮುರುಡೇಶ್ವರ, ಬೆಂಗಳೂರು ಕೋಜಿಕೋಡ್, ವಿಜಯಪುರ–ಮಂಗಳೂರು ರೈಲುಗಳನ್ನು ಹಾಸನದಲ್ಲಿ ಬೆಂಗಳೂರು–ಕಾರವಾರ ಎಕ್ಸ್ ಪ್ರೆಸ್ ರೈಲನ್ನು ಸಕಲೇಶಪುರದಲ್ಲಿ, ಮುರುಡೇಶ್ವರ– ಬೆಂಗಳೂರು, ಮಂಗಳೂರು–ವಿಜಯಪುರ ರೈಲುಗಳನ್ನು ಸುಬ್ರಹ್ಮಣ್ಯ ಗೇಟ್‌ನಲ್ಲಿ ಕೋಯಿಕೋಡ್ ಬೆಂಗಳೂರು ರೈಲನ್ನು ಪುತ್ತೂರಿನಲ್ಲಿ ನಿಲುಗಡೆ ಮಾಡಲಾಗಿದೆ. ರೈಲು ರದ್ದತಿಯ ಬಗ್ಗೆ ಇಲಾಖೆ ಪ್ರಯಾಣಿಕರಿಗೆ ಮಾಹಿತಿ ನೀಡಿದೆ. ಇದರಿಂದಾಗಿ ಆ ಮಾರ್ಗದ ಬಸ್ ಗಳಲ್ಲಿ ಪ್ರಯಾಣಿಕರ ದಟ್ಟಣೆ ಉಂಟಾಗಿದೆ.

## ತ್ಯಾಜ್ಯದಿಂದ ಸ್ವಾತಂತ್ರ್ಯ ಅಭಿಯಾನ ತ್ಯಾಜ್ಯ ಸಂಗ್ರಹಕ್ಕೆ 12 ಟಿಪ್ಪರ್ ವಾಹನಗಳ ಹಂಚಿಕೆ: ಜಗದೀಶ್ ಜಿ.

**ಬೆಂಗಳೂರು,ಆ.2:** ಬೆಂಗಳೂರು ನಗರವನ್ನು ಸ್ವಚ್ಛ, ಸುಂದರ ಹಾಗೂ ಸುಸ್ಥಿರ ನಗರವನ್ನಾಗಿ ರೂಪಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ತ್ಯಾಜ್ಯದಿಂದ ಸ್ವಾತಂತ್ರ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದ್ದು, ತ್ಯಾಜ್ಯ ಸಂಗ್ರಹಕ್ಕೆ 12 ಟಿಪ್ಪರ್ ವಾಹನಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಆಯುಕ್ತ ಜಗದೀಶ್ ಜಿ. ತಿಳಿಸಿದ್ದಾರೆ.

ಈ ಅಭಿಯಾನದ ಅಂಗವಾಗಿ, ಬೆಂಗಳೂರು ಕೇಂದ್ರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಕಟ್ಟಡ ಮತ್ತು ಭಗ್ನಾವಶೇಷ ತ್ಯಾಜ್ಯ, ರಸ್ತೆ ಬದಿ ತ್ಯಾಜ್ಯ, ತೋಟದ ತ್ಯಾಜ್ಯ ಸೇರಿದಂತೆ



ವಿವಿಧ ರೀತಿಯ ತ್ಯಾಜ್ಯಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸಿ, ವಿಲೇವಾರಿ ಮಾಡುವ ವ್ಯವಸ್ಥೆಗಾಗಿ ಕೇಂದ್ರ ನಗರ ಪಾಲಿಕೆಯ 6 ವಿಭಾಗಗಳಿಗೆ ತಲಾ 2 ವಾಹನಗಳಂತೆ ಒಟ್ಟು 12 ತ್ಯಾಜ್ಯ ಸಾಗಾಟ ಟಿಪ್ಪರ್ ವಾಹನಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

## ಸುಗಮ ಸಂಚಾರಕ್ಕಾಗಿ ಪೂರ್ವ ನಗರಪಾಲಿಕೆಯಿಂದ ಇ.ಇ.ಎಫ್.ಸಿ ಪ್ರಾಯೋಗಿಕ ಅನುಷ್ಠಾನ



**ಬೆಂಗಳೂರು,ಆ.2:** ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಿ, ವಾಹನಗಳ ಸುಗಮ ಸಂಚಾರ, ಹಾಗೂ ರಸ್ತೆ ಸುರಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ಬೆಂಗಳೂರು ಪೂರ್ವ ನಗರ ಪಾಲಿಕೆಯು ಸುಗಮ ಸಂಚಾರಕ್ಕಾಗಿ ಶಿಸ್ತುಬದ್ಧ ಸಂಚಾರಿ ಕಾರಿಡಾರ್ ಪರಿಕಲ್ಪನೆಯನ್ನು ಕಗ್ಗದಾಸಪುರ ರೈಲ್ವೆ ಕ್ರಾಸಿಂಗ್ ಹಾಗೂ ಕಗ್ಗದಾಸಪುರ ಮುಖ್ಯರಸ್ತೆಯಲ್ಲಿ ಪ್ರಾಯೋಗಿಕವಾಗಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ ಎಂದು ಅಪರ ಆಯುಕ್ತರಾದ ಲೋಖಂಡೆ ಸ್ನೇಹಲ್ ಸುಧಾಕರ್ ತಿಳಿಸಿದರು. ಈ ಯೋಜನೆಯು ಯಾವುದೇ ದೊಡ್ಡ ಪ್ರಮಾಣದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳದೆ, ಈಗಿರುವ ರಸ್ತೆ ಮೂಲಸೌಕರ್ಯವನ್ನು ಸಮರ್ಪಕವಾಗಿ ಬಳಸಿಕೊಂಡು ವಾಹನಗಳ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸುವ ನೂತನ ಸಂಚಾರ ನಿರ್ವಹಣಾ ಮಾದರಿಯಾಗಿದೆ. ಪ್ರಮುಖ ಜಂಕ್ಷನ್‌ಗಳಲ್ಲಿ ಸಂಚಾರದ ಸ್ವರೂಪವನ್ನು ಅಧ್ಯಯನ ಮಾಡಿ, ದಟ್ಟಣೆಗೆ ಕಾರಣವಾಗುವ ಅಂಶಗಳನ್ನು ಗುರುತಿಸಿ, ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ತ್ವರಿತ ಹಾಗೂ ಪರಿಣಾಮಕಾರಿ ಇಂಜಿನಿಯರಿಂಗ್ ಕ್ರಮಗಳನ್ನು ಜಾರಿಗೊಳಿಸುವುದೇ ಇಇಎಫ್ಸಿ ಪರಿಕಲ್ಪನೆ ಮುಖ್ಯ ಉದ್ದೇಶವಾಗಿದೆ. ಇ.ಇ.ಎಫ್.ಸಿ ಪರಿಕಲ್ಪನೆ ಪ್ರಾಯೋಗಿಕ ಅನುಷ್ಠಾನವನ್ನು ಕಗ್ಗದಾಸಪುರ ರೈಲ್ವೆ ಕ್ರಾಸಿಂಗ್ ಪ್ರದೇಶದಲ್ಲಿ ಕೈಗೊಳ್ಳಲಾಗಿದ್ದು, ಒಟ್ಟು ಸುಮಾರು 175 ಮೀಟರ್ ಉದ್ದದ ರಸ್ತೆ ವ್ಯಾಪ್ತಿಯಲ್ಲಿ ಮೂರು ದಿಕ್ಕುಗಳಲ್ಲಿ ಯೋಜನೆಯನ್ನು ಅಭಿವೃದ್ಧಿಪಡಿಸಲಾಗಿದೆ.

# ಚುನಾವಣೆಯಲ್ಲಿ ಅಭ್ಯರ್ಥಿಗಳ ಗೆಲುವಿಗೆ ಸಹಾಯ ಮಾಡಿದವರಿಗೆ ಪುರಸ್ಕಾರ




**ಬೆಂಗಳೂರು,ಆ.2:** 'ಚುನಾವಣೆಗಳಲ್ಲಿ ಅಭ್ಯರ್ಥಿಗಳ ಗೆಲುವಿಗೆ ಸಹಾಯ ಮಾಡಿದವರಿಗೆ ಪ್ರಶಸ್ತಿಗಳು ಲಭಿಸುತ್ತಿವೆ. ರಾಜಕೀಯದಿಂದ ದೂರ ನಿಂತಿರುವ, ನಿಜವಾಗಿಯೂ ಅರ್ಹರಾದವರಿಗೆ ಪ್ರಶಸ್ತಿಗಳು ದೊರಕುತ್ತಿಲ್ಲ' ಎಂಬ ಅಸಮಾಧಾನ, ಆರೋಪಗಳು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಭಾನುವಾರ ವ್ಯಕ್ತವಾದವು.

ಕರ್ನಾಟಕ ವಿಕಾಸ ರಂಗವು ಏರ್ಪಡಿಸಿದ್ದ, ಎಸ್.ಗೋಪಾಲಗೌಡ ಕಲ್ವಮಂಜಲಿ ಅವರಿಗೆ 'ಜರಗನಹಳ್ಳಿ ಶಿವಶಂಕರ್ ನುಡಿಸಿರಿ ಪ್ರಶಸ್ತಿ ಪ್ರದಾನ' ಕಾರ್ಯಕ್ರಮದಲ್ಲಿ ಮಾತನಾಡಿದ ಗಣ್ಯರು ಈ ಬಗ್ಗೆ ತೀವ್ರ ವಿಷಾದವನ್ನು ವ್ಯಕ್ತಪಡಿಸಿದರು. ಅಭಿನಂದನಾ ಭಾಷಣ ಮಾಡಿದ ಲೇಖಕ ರಾ.ನಂ. ಚಂದ್ರಶೇಖರ್, 'ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ಸಹಕರಿಸಿದವರಿಗೆ ಪ್ರಶಸ್ತಿಗಳು ದೊರಕುತ್ತಿವೆ. ಕೇವಲ ಒಂದು ಪುಸ್ತಕ ಬರೆದವರಿಗೂ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಕೊಟ್ಟಿರುವುದು ದುರಂತ' ಎಂದರು.

ನಾಡು ನುಡಿಗೆ ಸೇವೆ ಸಲ್ಲಿಸಿದ ಪ್ರಾಮಾಣಿಕ, ಸಾಧಕ ಲೇಖಕರಿಗೆ ಸಿಗಬೇಕಾದ ಗೌರವ ಸಿಗುತ್ತಿಲ್ಲ' ಎಂದು ವಿಷಾದಿಸಿದರು.

ಅಧ್ಯಕ್ಷತೆ ವಹಿಸಿದ್ದ ಜಾನಪದ ಗಾಯಕ ಅಪ್ಪಗೆರೆ ತಿಮ್ಮರಾಜು, 'ಕೇಳದೇ, ಹೋರಾಟ ಮಾಡದೇ ಪ್ರಶಸ್ತಿಗಳು ಸಿಗುವುದಿಲ್ಲ ಎಂಬ ಕಾಲ ಬಂದಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಾಸ್ತಾವಿಕ ಮಾತನಾಡಿದ ವಿಕಾಸ ರಂಗದ ಅಧ್ಯಕ್ಷ ವ.ಚ.ಚೆನ್ನೇಗೌಡ, ಚುನಾವಣೆ ಸಂದರ್ಭದಲ್ಲಿ ಪಕ್ಷಕ್ಕೆ ಬೆಂಬಲ ನೀಡುವ ಸಾಹಿತಿಗಳಿಗೆ ಪ್ರಶಸ್ತಿಗಳು ಒಲಿದು ಬರುತ್ತಿದೆ ಎಂಬುದು ಶೋಚನೀಯ ಸಂಗತಿ' ಎಂದು ಪ್ರತಿಪಾದಿಸಿದರು.

'ಕೋಲಾರದ ಕಲ್ವಮಂಜಲಿ ಅವರು ತಮ್ಮ ಹುಟ್ಟೂರಾದ ಕೋಲಾರ, ಚಿಕ್ಕಬಳ್ಳಾಪುರದ ವ್ಯಾಪ್ತಿಯಲ್ಲೇ ಸಾಹಿತ್ಯ, ಸಂಘಟನೆಯಲ್ಲಿ ದಶಕಗಳಿಂದ ತೊಡಗಿಸಿಕೊಂಡಿರುವುದರಿಂದ ಅವರಿಗೆ ನುಡಿಸಿರಿ ಪ್ರಶಸ್ತಿ ನೀಡಲಾಗಿದೆ' ಎಂದರು.



ಬಳ್ಳಾರಿ ಸೈಕ್ಲಿಸ್ಟ್‌ಗಳು ಮತ್ತು ರನ್ನರ್ಸ್ ಫೌಂಡೇಶನ್ ಆಯೋಜಿಸಿದ್ದ 5ನೇ ಆವೃತ್ತಿಯ JSW ಸ್ಟೀಲ್ ಸಿಟಿ ರನ್ ಭಾನುವಾರ ಬಳ್ಳಾರಿಯಲ್ಲಿ ನಡೆಯಿತು.

# ಶರಣಬಸವ ವಿವಿಯಲ್ಲಿ ಡ್ರೋನ್ ಪ್ರಯೋಗಾಲಯ ಸ್ಥಾಪನೆ: ಡಾ.ದಾಕ್ಷಾಯಣಿ ಅಪ್ಪಾ

**ಕಲಬುರಗಿ, ಆ. 2:** ಇಂಜಿನಿಯರಿಂಗ್ ವಿದ್ಯಾರ್ಥಿಗಳ ಕೌಶಲಾಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶದಿಂದ ಶರಣಬಸವ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ಬ್ಯಾಂಕ್‌ನ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯಡಿ, 12.98 ಲಕ್ಷ ರೂ. ನೆರವಿನಿಂದ ಅತ್ಯಾಧುನಿಕ ಡ್ರೋನ್ ಪ್ರಯೋಗಾಲಯ ಶೀಘ್ರದಲ್ಲೇ ಸ್ಥಾಪನೆಯಾಗಲಿದೆ.



ಶರಣಬಸವೇಶ್ವರ ಸಂಸ್ಥಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿ ಕುಲಾಧಿಪತಿ ಮಾತೋಶ್ರೀ ಡಾ.ದಾಕ್ಷಾಯಿಣಿ ಅಪ್ಪ ಹಾಗೂ ಸಂಸ್ಥಾನದ 9ನೇ ಪೀಠಾಧಿಪತಿ ಪೂಜ್ಯ ದೊಡ್ಡಪ್ಪ ಅಪ್ಪ ಅವರಿಗೆ ಕರ್ನಾಟಕ ಬ್ಯಾಂಕ್ ಸಹಾಯಕ ಮಹಾಪ್ರಬಂಧಕ ಮಲ್ಲನಗೌಡ ಬಿರಾದಾರ್ ಅವರು, 12.98 ಲಕ್ಷ ರೂ.ಚೆಕ್ ಹಸ್ತಾಂತರಿಸಿದರು. ಉಪಕುಲಪತಿ ಪ್ರೊ.ಅನಿಲಕುಮಾರ ಬಿಡವೆ, ಕುಲಸಚಿವೆ ಡಾ.ಲಕ್ಷ್ಮೀ ಪಾಟೀಲ್ ಮಾಕಾ, ಬ್ಯಾಂಕ್‌ನ ಮುಖ್ಯ ವ್ಯವಸ್ಥಾಪಕ ಶಶಿಕಿರಣ, ಕ್ಲಸ್ಟರ್ ಮುಖ್ಯಸ್ಥ ಕುಲಕರ್ಣಿ, ಆರ್.ಎಲ್.ಪಿ.ಎಸ್.ಸಿ ಮುಖ್ಯ ವ್ಯವಸ್ಥಾಪಕ ಜಿ.ಸೋಮಶೇಖರ ಹಾಗೂ ಶಾಖಾ ವ್ಯವಸ್ಥಾಪಕ ಆರ್.ಡಿ. ಗುರುರಾಜ ಉಪಸ್ಥಿತರಿದ್ದರು.

ಸುಸಜ್ಜಿತ ಪ್ರಯೋಗಾಲಯ: ಸಂಪೂರ್ಣ ಸುಸಜ್ಜಿತ ಡ್ರೋನ್ ಪ್ರಯೋಗಾಲಯ ಸ್ಥಾಪಿಸಲು ಕರ್ನಾಟಕ ಬ್ಯಾಂಕ್ ತನ್ನ ಸಿಎಸ್‌ಆರ್ ಯೋಜನೆಯಡಿ ನೀಡಿರುವ 12.98 ಲಕ್ಷ ರೂ.ಗಿಂತ ಹೆಚ್ಚಿನ ಹಣ ವೆಚ್ಚವಾಗಲಿದ್ದು, ಇದನ್ನು ವಿವಿ ವತಿಯಿಂದ ಭರಿಸಿ ತನ್ನ ಮುಖ್ಯ ಆವರಣದಲ್ಲಿ ಅತ್ಯಾಧುನಿಕ ಲ್ಯಾಬ್ ಸ್ಥಾಪಿಸಲಿದೆ. ಈ ಪ್ರಯೋಗಾಲಯ ವಿದ್ಯಾರ್ಥಿಗಳ ಸಂಶೋಧನೆ, ನವೋದ್ಯಮ, ಕೌಶಲಾಭಿವೃದ್ಧಿ ಹಾಗೂ ಪಠ್ಯಕ್ರಮ ಆಧಾರಿತ ತಾಂತ್ರಿಕ ತರಬೇತಿಗೆ ಮಹತ್ತರ ಕೊಡುಗೆ ನೀಡಲಿದೆ.

> **ಡ್ರೋನ್ ಪ್ರಯೋಗಾಲಯ ಸ್ಥಾಪನೆಗಾಗಿ ಸಿಎಸ್‌ಆರ್ ನಿಧಿಯಿಂದ ಅನುದಾನ ಒದಗಿಸಿದ ಕರ್ನಾಟಕ ಬ್ಯಾಂಕ್‌ನ ಶೈಕ್ಷಣಿಕ ಸೇವೆ ಶ್ಲಾಘನೀಯ. ಶರಣಬಸವ ವಿವಿ ವಿದ್ಯಾರ್ಥಿಗಳಿಗಾಗಿ ಈ ನೆರವು ನೀಡಿದ ಬ್ಯಾಂಕ್ ಅಧಿಕಾರಿಗಳಿಗೆ ಕೃತಜ್ಞತೆಗಳು.**
>
> **– ಮಾತೋಶ್ರೀ ಡಾ.ದಾಕ್ಷಾಯಿಣಿ ಅಪ್ಪ, ಕುಲಾಧಿಪತಿ, ಶರಣಬಸವ ವಿವಿ ಕಲಬುರಗಿ.**

ಅತ್ಯಾಧುನಿಕ ತಾಂತ್ರಿಕ ಉಪಕರಣಗಳೊಂದಿಗೆ ಪ್ರಯೋಗಾಲಯ ತಂತ್ರಜ್ಞಾನ ಶಿಕ್ಷಣದ ಭವಿಷ್ಯ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದರ ಜತೆಗೆ ವಿವಿಧ ಕ್ಷೇತ್ರಗಳಲ್ಲಿ ವೃತ್ತಿ ಜೀವನಕ್ಕೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲಿದೆ. ವಿದ್ಯಾರ್ಥಿಗಳಿಗೆ ನೇರ ಪ್ರಯೋಜನ ಪ್ರಯೋಗಾಲಯದಲ್ಲಿ ವಿದ್ಯಾರ್ಥಿಗಳು ಕೃತಕ ಬುದ್ಧಿಮತ್ತೆ ಆಧಾರಿತ ಡಿಜಿಟಲ್ ಸ್ವಯಂಚಾಲನಾ ತಂತ್ರಜ್ಞಾನದಲ್ಲಿನ ಪ್ರಾಯೋಗಿಕ ಬೆಳವಣಿಗೆ ಅರಿತು ಕೊಳ್ಳಲಿದ್ದು, ಮಾನವರಹಿತ ವೈಮಾನಿಕ ವಾಹನಗಳ ಪರಿಕಲ್ಪನೆ, ಕಾರ್ಯವಿಧಾನ ಮತ್ತು ಅದಕ್ಕೆ ಸಂಬಂಧಿಸಿದ ಅಲ್ಗಾರಿದಮ್‌ಗಳ ಕುರಿತು ಪ್ರಾಯೋ ಗಿಕ ಜ್ಞಾನ ಪಡೆಯಲಿದ್ದಾರೆ.

ಈ ಲ್ಯಾಬ್‌ನಿಂದ ಆರಂಭಿಕ ಹಂತದಲ್ಲೇ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್, ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಆಯಂಡ್ ಮಷಿನ್ ಲರ್ನಿಂಗ್, ಇಲೆಕ್ಟ್ರಾನಿಕ್ಸ್ ಆಯಂಡ್ ಕಮ್ಯುನಿಕೇಶನ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ ಆಯಂಡ್ ಇಲೆಕ್ಟ್ರಾನಿಕ್ಸ್, ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಆಯಂಡ್ ಡೇಟಾ ಸೈನ್ಸ್, ಮೆಕಾನಿಕಲ್, ಸಿವಿಲ್ ಹಾಗೂ ಎನರ್ಜಿ ಇಂಜಿನಿಯರಿಂಗ್ ಸೇರಿದಂತೆ ವಿವಿಧ ವಿಭಾಗಗಳ 1000ಕ್ಕೂ ಹೆಚ್ಚು ವಿದ್ಯಾರ್ಥಿಗಳು ನೇರ ಪ್ರಯೋಜನ ಪಡೆಯಲಿದ್ದಾರೆ.

# ಚಾಂದ್ ಬಾಷಾ ಕವಿತೆಗಳಲ್ಲಿ ಪ್ರಚಲಿತ ವಿದ್ಯಮಾನ ಹಾಗೂ ಶೋಷಣಾಮುಕ್ತ ಸಮ ಸಮಾಜದ ಕನಸು ಅಡಗಿದೆ: ಎಂ ಜಿ ಬಾಲಕೃಷ್ಣ



**ಬಳ್ಳಾರಿ. ಆ. 02:** ಕವಿ ಚಾಂದ್ ಬಾಷ ಅವರ ಪ್ರಥಮ ಕವನ ಸಂಕಲನದ ಕವಿತೆಗಳಲ್ಲಿ ಪ್ರಚಲಿತ ವಿದ್ಯಮಾನಗಳಿಗೆ ಸ್ಪಂದಿಸುವ ಮತ್ತು ಶೋಷಣಾಮುಕ್ತ ಸಮ ಸಮಾಜದ ನಿರ್ಮಾಣದ ಕನಸುಗಳು ಅಡಗಿವೆ ಎಂದು ವಿಜಯನಗರ ಜಿಲ್ಲೆ ಪ್ರಜಾವಾಣಿ ಪತ್ರಿಕೆಯ ಹಿರಿಯ ವರದಿಗಾರರಾದ ಎಂ.ಜಿ. ಬಾಲಕೃಷ್ಣ ಹೇಳಿದರು.

ಅವರು ಭಾನುವಾರದಂದು ಡಾ. ರಾಜಕುಮಾರ್ ರಸ್ತೆಯ ಕನ್ನಡ ಭವನದಲ್ಲಿ ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ , ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಬೆಸ್ಟ್ ಪ್ರಕಾಶನ ತೆಕ್ಕಲಕೋಟೆ ಸಂಯುಕ್ತ ಆಶ್ರಯದಲ್ಲಿ ನಡೆದ ಚಾಂದ್ ಬಾಷಾ ತೆಕ್ಕಲಕೋಟೆ ಇವರ ಪ್ರಥಮ ಕವನ ಸಂಕಲನ ಮಗು ನೀನಾಗುವೆ ನಾ' ಎನ್ನುವ ಕೃತಿಯನ್ನು ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಮಾನವೀಯ ಮೌಲ್ಯಗಳಿಂದ ಪ್ರಫುಲ್ಲಿತವಾಗಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯರಾದ ಅಜ್ಮೀರ್ ನಂದಾಪುರ ಅಭಿಪ್ರಾಯಪಟ್ಟರು. ತೃತೀಯ ಕಾರ್ಯಕ್ರಮವನ್ನು ಉದ್ಘಾಟಿಸಿ, ಲೇಖಕ ಚಂದ್ ಬಾಷಾ ಈ ಕೃತಿಯಲ್ಲಿ ಮಕ್ಕಳು ಅವರವರ ಸ್ವತಂತ್ರ ವಿವೇಚನೆಯಿಂದ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ವಾತಾವರಣ ನಿರ್ಮಾಣ ಮಾಡುವ ಅವಶ್ಯಕತೆಯನ್ನು ಈ ಕವನ ಸಂಕಲನದಲ್ಲಿ ಪ್ರತಿಪಾದಿಸಲ್ಪಟ್ಟಿದೆ ಎಂದರು.

ಕೃತಿಯನ್ನು ಬಿಡುಗಡೆ ಮಾಡಿದ ಜಿಲ್ಲಾ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ಎನ್. ವೀರಭದ್ರ ಗೌಡ ಮಾತನಾಡಿ ಹೊಸ ಆಲೋಚನೆಗಳನ್ನು, ಸಾಮರಸ್ಯದ ನೈತಿಕ ಭಾವನೆಗಳನ್ನು ಹುಟ್ಟು ಹಾಕುವ ಈ ಕೃತಿ ಕವಿ ಚಾಂದ್‌ಬಾಷ ಅವರ ಹೃದಯದ ಸ್ಪಂದನೆಯನ್ನು ಅರಿಯಬಹುದಾಗಿದೆ ಎಂದರು.

ಬಳ್ಳಾರಿ ಜಿಲ್ಲಾ ಕಸಾಪ ಅಧ್ಯಕ್ಷ ಡಾ ನಿಷ್ಠಿ ರುದ್ರಪ್ಪ ಕೃತಿ ಪರಿಚಯ ಮಾಡಿದರು. ಸಿರುಗುಪ್ಪ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಮಧುಸೂದನ ಕಾರಿಗನೂರು, ಟಿಪ್ಪು ಸುಲ್ತಾನ್ ವೇದಿಕೆಯ ಅಧ್ಯಕ್ಷ ರಫೀ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕವಿ ಚಾಂದ್‌ಬಾಷಾ ಮಾತನಾಡುತ್ತಾ ಕವನ ಸಂಕಲನವನ್ನು ಪ್ರಕಟಿಸುವ ನನ್ನ ಬಹುದಿನದ ಕನಸು ನನಸಾಗಿಸಿದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಲು ಇಚ್ಛಿಸುತ್ತೇನೆ ಎಂದರು.

# ಆಗಸ್ಟ್ 13 ರಂದು ಅಖಂಡ ಕರ್ನಾಟಕ ಬಂದ್‌ಗೆ ವಾಟಾಳ್ ನಾಗರಾಜ್ ಕರೆ



**ಮೈಸೂರು, ಆ.2–** ತಮಿಳುನಾಡಿಗೆ ಕರ್ನಾಟಕದ ಕಾವೇರಿ ನೀರು ಹರಿಸುವ ವಿಚಾರಕ್ಕೆ ಸಂಬಂಧಪಟ್ಟಂತೆ ಆಗಸ್ಟ್ 13ರಂದು ಅಖಂಡ ಕರ್ನಾಟಕ ಬಂದ್‌ಗೆ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಕರೆ ನೀಡಿದ್ದಾರೆ.

ಈ ವಿಚಾರಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಬಂದ್‌ನಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಅಖಂಡ ಕರ್ನಾಟಕ ಬಂದ್ ಮಾಡೇ ಮಾಡ್ತಿವಿ ಎಂದು ತಿಳಿಸಿದ್ದಾರೆ.

ಮೈಸೂರಲ್ಲಿ ಮಾಧ್ಯಮಗಳೊಂದಿಗೆ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಮಾತನಾಡಿದ ಅವರು, ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಕೂಡ ಬರಲಿ ಅವರಿಗೆ ವೀಳ್ಯ ನೀಡಿ ಸ್ವಾಗತಿಸುತ್ತೇವೆ.

ಮಳೆಯಾಗಿದೆ ಅಂತ ತಮಿಳುನಾಡಿಗೆ ನೀರು ಹರಿಸಬೇಡಿ. ನಮ್ಮ ನಾಲೆಗಳಿಗೆ ನೀರು ಹರಿಸಿ ಅದಕ್ಕಾಗಿ ಈ ಬಂದ್ ಮಾಡುತ್ತಿದ್ದೇವೆ. ಕರ್ನಾಟಕ ಬಂದ್ ನಿಂದ ಯಾರಿಗೂ ನಷ್ಟ ಆಗುವುದಿಲ್ಲ ಎಂದು ಮೈಸೂರಿನಲ್ಲಿ ವಾಟಾಳ್ ನಾಗರಾಜ್ ತಿಳಿಸಿದರು.

# ಹೆತ್ತ ಮಡಿಲು ಹೊತ್ತ ಹೆಗಲು ಜ್ಞಾನವಿತ್ತ ಗುರುವನ್ನು ಮರೆಯಬಾರದು: ಶ್ರೀ ರಂಭಾಪುರಿ ಜಗದ್ಗುರುಗಳು



**ಬೆಂಗಳೂರು–ಆ.2–** ಸುಖ ಸಮೃದ್ಧಿ ಬದುಕಿಗೆ ಸಂಸ್ಕಾರ ಮುಖ್ಯ. ಬದುಕಿನಲ್ಲಿ ಹೆಜ್ಜೆ ಗುರುತು ಮೂಡಿಸುವುದು ನಡಿಗೆಯಿಂದಲ್ಲ. ನಡತೆಯಿಂದ ಮಾತ್ರ ಸಾಧ್ಯ. ಹೆತ್ತ ಮಡಿಲು ಹೊತ್ತ ಹೆಗಲು ಜ್ಞಾನವಿತ್ತ ಗುರುವನ್ನು ಎಂದೆಂದೂ ಮರೆಯಬಾರದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಸಮಸ್ಯೆಗಳನ್ನು ಪರಿಹರಿಸಲು ನಗು ಮತ್ತು ಸಮಸ್ಯೆಗಳನ್ನು ತಪ್ಪಿಸಲು ಮೌನ ಅವಶ್ಯಕ. ರುಚಿ ಬಿಟ್ಟರೆ ಆರೋಗ್ಯ ಭಾಗ್ಯ ವಿವಾದ ಬಿಟ್ಟರೆ ಸಂಬಂಧಗಳು ಗಟ್ಟಿಯಾಗುತ್ತವೆ. ಸಂಸ್ಕಾರ ಪಡೆದ ಕಲ್ಲು ಮೂರ್ತಿಯಾಗುತ್ತದೆ. ಸಂಸ್ಕಾರ ಪಡೆದ ನೀರು ತೀರ್ಥವಾಗುತ್ತದೆ. ಸಂಸ್ಕಾರದಿಂದ ಬದುಕು ಉಜ್ವಲಗೊಳ್ಳುತ್ತದೆ. ವೀರಶೈವ ಧರ್ಮ ಸಂವಿಧಾನದಲ್ಲಿ ಸಕಲರಿಗೂ ಹಿತವನ್ನೇ ಬಯಸುತ್ತಾ ಬಂದಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಅಹಿಂಸಾದಿ ಧ್ಯಾನ ಪರ್ಯಂತರವಾದ ದಶ ಧರ್ಮ ಸೂತ್ರಗಳನ್ನು ಬೋಧಿಸಿ ಉದ್ಧರಿಸಿದ್ದಾರೆ. ಹೊಗಳುವ ಜನ ಸಿಗುತ್ತಾರೆ. ಆದರೆ ಎಡವಿದಾಗ ತಪ್ಪು ತಿದ್ದುವವರು ಬೆರಳೆಣಿಕೆ ಜನ ಮಾತ್ರ ಎಂಬುದನ್ನು ಯಾರೂ ಮರೆಯಬಾರದು. ಭಾರತ ನಗರದ ಉತ್ಸಾಹಿ ಯುವಕರು ಒಳ್ಳೆಯ ಸಂಘಟನೆ ಮಾಡಿ ಅದ್ಭುತ ಕಾರ್ಯಕ್ರಮ ಮಾಡಿರುವುದು ತಮಗೆ ಸಂತೋಷ ತಂದಿದೆ ಎಂದರು.

ಸಮಾರಂಭ ಉದ್ಘಾಟಿಸಿದ ರಾಜ್ಯದ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ ಮನುಷ್ಯನಿಗೆ ಎರಡು ಕೈಗಳಿವೆ. ಏಕೆಂದರೆ ಒಂದು ಕೈ ನಮ್ಮನ್ನು ನಾವು ಕಾಪಾಡಿಕೊಳ್ಳಲು ಇನ್ನೊಂದು ಕೈ ನಮ್ಮನ್ನು ನಂಬಿದವರನ್ನು ಕಾಪಾಡಲು ಬಳಸಬೇಕಾಗುತ್ತದೆ. ಭಾರತೀಯ ಉತ್ಕೃಷ್ಟ ಸಂಸ್ಕೃತಿ ಮತ್ತು ಪರಂಪರೆಯನ್ನು ಧರ್ಮ ಪೀಠಗಳು ಅತ್ಯುತ್ತಮವಾಗಿ ಉಳಿಸಿ ಬೆಳೆಸಿಕೊಂಡು ಬಂದಿವೆ ಎಂದ ಅವರು ಬಾಳೆಹೊನ್ನೂರು ಶ್ರೀ ರಂಭಾಪುರಿ ಪೀಠ ಯಾವಾಗಲೂ ಭಾವೈಕ್ಯತೆ ಮತ್ತು ಸಾಮರಸ್ಯದ ಬದುಕು ರೂಪಿಸಲು ಸದಾ ಶ್ರಮಿಸಿದ್ದನ್ನು ಮರೆಯಲಾಗದು. ಮುಖ್ಯಮಂತ್ರಿ ಆದಾಗಿನಿಂದ ಶ್ರೀ ಜಗದ್ಗುರುಗಳ ಆಶೀರ್ವಾದ ಪಡೆಯುವ ಅವಕಾಶ ಒದಗಿರಲಿಲ್ಲ. ಇಂದು ಒದಗಿ ಬಂದದ್ದು ಸಂತೋಷ ತಂದಿದೆ ಎಂದರು.

ನೇತೃತ್ವ ವಹಿಸಿದ ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯರು ವೀರಶೈವ ಲಿಂಗಾಯತ ಸಮಾಜದಲ್ಲಿ ಹಲವಾರು ಉಪ ಪಂಗಡಗಳಿವೆ. ಎಲ್ಲ ಒಳಪಂಗಡಗಳು ಭಿನ್ನ ಭಾವನೆ ಬೆಳೆಸದೇ ಎಲ್ಲರೂ ಒಗ್ಗಟ್ಟಿನಿಂದ ಬಾಳುವುದು ಶ್ರೇಯಸ್ಕರ. ಆಚಾರ್ಯ ಪೀಠಗಳಾಗಲಿ ಬಸವಾದಿ ಶಿವಶರಣರಾಗಲಿ ಸಾಮರಸ್ಯ ಸೌಂದರ್ಯ ಸೌಹಾರ್ದತೆಯ ಬದುಕು ಕಟ್ಟಿ ಬೆಳೆಸಲು ಶ್ರಮಿಸಿದ್ದಾರೆಂದು ಸ್ಮರಿಸಿದರು. ಸಿದ್ಧರಬೆಟ್ಟ ಕ್ಷೇತ್ರದ ವೀರಭದ್ರ ಶಿವಾಚಾರ್ಯರು ಪ್ರಾಸ್ತಾವಿಕ ಮಾತನಾಡಿ ನಾವಾಡುವ ಮಾತು ಮಾಡುವ ಕೆಲಸ ಆತ್ಮ ಸಾಕ್ಷಿಗೆ ಒಪ್ಪಿ ಕಾರ್ಯ ಮಾಡಿದರೆ ಅದ್ಭುತ ಯಶಸ್ಸು ಗಳಿಸಲು ಸಾಧ್ಯ ಎಂದರು. ವಿಭೂತಿಪುರ ಮಠದ ಡಾ.ಮಹಾಂತಲಿಂಗ ಶಿವಾಚಾರ್ಯರು ಮಾತನಾಡಿ ತಿಳುವಳಿಕೆ ಇಲ್ಲದವರನ್ನು ಒಪ್ಪಿಸುವುದು ಸುಲಭ. ಹೆಚ್ಚು ತಿಳಿದವರನ್ನು ಒಪ್ಪಿಸುವುದು ಇನ್ನೂ ಸುಲಭ. ಆದರೆ ಸ್ವಲ್ಪ ತಿಳಿದುಕೊಂಡು ಅಹಂಕಾರ ಪಡುವ ಮನುಷ್ಯನನ್ನು ಒಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ.

ಗುರು ಪೀಠಗಳ ಮಾರ್ಗ ದರ್ಶನದಲ್ಲಿ ಆದರ್ಶ ವ್ಯಕ್ತಿಗಳಾಗಿ ಬಾಳುವುದು ಶ್ರೇಷ್ಠ. ಜನರನ್ನು ಸನ್ಮಾರ್ಗಕ್ಕೆ ಕರೆ ತರುವುದು ಗುರು ಧರ್ಮ ಎಂದರು. ತರೀಕೆರೆ ಶಾಸಕ ಜಿ.ಎಚ್. ಶ್ರೀನಿವಾಸ, ಶೃಂಗೇರಿ ಶಾಸಕ ಟಿ.ಡಿ.ರಾಜೇಗೌಡ ಶ್ರೀಮತಿ ವೀಣಾ ಕಾಶಪ್ಪನವರ, ಕೊಡಿಗೇನಹಳ್ಳಿ ನಂಜುಂಡೇಶ್ವರ, ಸಚ್ಚಿದಾನಂದ ಮೂರ್ತಿ, ಹನುಮಂತೇ ಗೌಡ ಇವರು ಸಮಾರಂಭದಲ್ಲಿ ಭಾಗ ವಹಿಸಿದ್ದರು.

ಸಂಗೊಳ್ಳಿ ಗುರುಲಿಂಗ ಶಿವಾಚಾರ್ಯರು ಉಪಸ್ಥಿತರಿದ್ದರು. ಅಧ್ಯಕ್ಷತೆ ವಹಿಸಿದ ಯಶವಂತಪುರ ಎಸ್.ಟಿ.ಸೋಮಶೇಖರ ಮಾತನಾಡಿ ಕೇವಲ ದೇವರನ್ನು ಪೂಜಿಸುವುದರಿಂದ ಪುಣ್ಯ ಬರುವುದಿಲ್ಲ. ಉತ್ತಮ ಬುದ್ಧಿ, ಯೋಚನೆ, ಕರುಣೆಯಿಂದ ಪುಣ್ಯ ಪ್ರಾಪ್ತವಾಗುತ್ತದೆ. ಜನರಲ್ಲಿ ಜಾಗೃತಿ ಉಂಟು ಮಾಡುವುದೇ ಗುರು ಪೀಠಗಳ ಧ್ಯೇಯವಾಗಿದೆ. ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳು ಈ ಭಾಗಕ್ಕೆ ದಯಮಾಡಿಸಿ ಹಾರೈಸಿದ್ದು ನಮ್ಮೆಲ್ಲರ ಸೌಭಾಗ್ಯವೆಂದರು.

# ಕಡಿಮೆ ಬೆಲೆಗೆ ಹರಾಜು ಆಗಿದೆ ಎಂಬ ಆರೋಪ: ಎಪಿಎಂಸಿ ನಿರ್ದೇಶನಾಲಯದ ತಂಡ ಭೇಟಿ, ಪರಿಶೀಲನೆ

**ಬಳ್ಳಾರಿ, ಆ.02:** ಮಾರುಕಟ್ಟೆ ಧರಕ್ಕಿಂತ ಕಡಿಮೆ ಧರದಲ್ಲಿ ಟೆಂಡರ್ ಮಾಡಲಾಗಿದೆ ಎಂಬ ಆರೋಪ ಮತ್ತು ವರದಿಗಳ ಹಿನ್ನಲೆಯಲ್ಲಿ ಎಪಿಎಂಸಿ ನಿರ್ದೇಶನಾಲಯದ ತಂಡ ಇಂದು ನಗರಕ್ಕೆ ಆಗಮಿಸಿ ಪರಿಶೀಲನೆ ನಡೆಸಿತು.



ಈ ನಿವೇಶನವನ್ನು ಸಬ್ ರಿಜಿಸ್ಟರ್ ಕಚೇರಿ ನಿಗಧಿ ಮಾಡಿರುವ ಭೂ ಬೆಲೆಯಂತೆ ಟೆಂಡರ್ ಕರೆಯಲಾಗಿತ್ತು. ಅದಕ್ಕೂ ಹೆಚ್ಚಿನ ಧರದಲ್ಲಿ ಕಾಕರ್ಲತೋಟದ ವಿಜಯ ಕುಮಾರ್ ಅವರಿಗೆ ಟೆಂಡರ್ ಆಗಿದೆ. ಅದನ್ನು ಅವರಿಗೆ ಹಸ್ತಾಂತರಿಸುವ ಮುನ್ನ ಕಡಿಮೆ ಬೆಲೆಗೆ ಹರಾಜು ಆಗಿದೆಂಬ ಆರೋಪದ ಹಿನ್ನಲೆಯಲ್ಲಿ ತಡೆಹಿಡಿದಿದೆ. ಜೊತೆಗೆ ಡಿಸಿಯವರು ಬರೆದ ಪತ್ರದ ಹಿನ್ನಲೆಯಲ್ಲಿ ನಾಳೆ ಈ ತಂಡ ಪರಿಶೀಲನೆಗೆ ಆಗಮಿಸುತ್ತಿದೆ ಎಂದು ಇಂದು ನಿವೃತ್ತಿ ಹೊಂದುತ್ತಿರುವ ಎಪಿಎಂಸಿಯ ಕಾರ್ಯದರ್ಶಿ ವಿ..ಅರ್ ವಿಜಯಕುಮಾ? ತಿಳಿಸಿದ್ದಾರೆ.

ವಿಜಯಕುಮಾರ್ ಅವರ ಸ್ಥಾನದಲ್ಲಿ ನಾಳೆಯಿಂದ ಪ್ರಭಾರ ಕಾರ್ಯದರ್ಶಿಯಾಗಿ ಉಪ ನಿರ್ದೇಶಕ ಓಂಕಾರ ಅವರು ನೇಮಕಗೊಂಡಿದ್ದಾರೆ. ಬಳ್ಳಾರಿ ಡಿಸಿ ಕೆ. ನಾಗೇಂದ್ರ ಪ್ರಸಾದ್ ಅವರ ವರದಿಯ ಮೇಲೆ ಎಪಿಎಂಸಿ ಇಲಾಖೆಯ ನಿರ್ದೇಶಕ ಎ. ಎಂ.ಯೋಗೀಶ್ ಅವರು ಸ್ಥಳಕ್ಕೆ ತೆರಳಿ ವಾಸ್ತವ ವರದಿ ನೀಡುವಂತೆ ಸೂಚಿಸಿದ ನಿರ್ದೇಶನದಂತೆ ಕಲ್ಬುರ್ಗಿ ವಿಭಾಗದ ಹೆಚ್ಚುವರಿ ನಿರ್ದೇಶಕ ಅಲ್ಲಾಭಕ್ಷಿ ನೇತೃತ್ವದ ತ್ರಿ ಸದಸ್ಯರ ತಂಡದಲ್ಲಿ ರಾಯಚೂರು ಎಪಿಎಂಸಿಯ ಕಾರ್ಯದರ್ಶಿ ಆದೆಪ್ಪ ಕಾರ್ಯನಿರ್ವಾಹಕ ಇಂಜಿನೀಯರ್ ಅರುಣ್ ಕುಮಾರ್ ಅವರು ಪರಿಶೀಲನೆ ನಡೆಸಿದರು. ಈ ವೇಳೆ ಬಳ್ಳಾರಿ ಎಪಿಎಂಸಿಯ ಪ್ರಭಾರಿ ಕಾರ್ಯದರ್ಶಿ. ಓಂಕಾರ, ಅಧ್ಯಕ್ಷ ಕಟ್ಟೆಮನೆ ನಾಗೇಂದ್ರ, ಉಪಾಧ್ಯಕ್ಷ ಕಪ್ಪಗಲ್ಲಿನ ಬಿ.ರಾಮಪ್ಪ ಮೊದಲಾದವರು ಉಪಸ್ಥಿತರಿದ್ದರು.

ಈ ವೇಳೆ ಮಾತನಾಡಿದ ತಂಡದ ನೇತೃತ್ವವ ವಹಿಸಿದ್ದ. ಅಲ್ಲಾಭಕ್ಷಿ ಅವರು ನೋಂದಣಿ ಇಲಾಖೆ 2023 ರಲ್ಲಿ ನಿಗಧಿ ಪಡಿಸಿರುವ ಬೆಲೆ ಅಡಿಗೆ 806 ರೂ ಇದೆ. ಇದು 5 ವರ್ಷಗಳಿಗೆ ಒಮ್ಮೆ ಬದಲಾಗುತ್ತದೆ. ಸಧ್ಯ ಹರಾಜು ಮಾಡಿರುವ ಬೆಲೆ 1210 ರೂ ಇದೆ. ನಿಯಮಗಳ ಪ್ರಕಾರ ಮೇಲ್ನೋಟಕ್ಕೆ ಅವ್ಯವಹಾರ ಎಂದು ಕಾಣುವುದಿಲ್ಲ. ಆದರೂ ವಾಸ್ತವ ಅಂಶಗಳನ್ನು ಪರಿಶೀಲಿಸಿ ವರದಿ ನೀಡಲಿದೆಂದರು.

ಈ ವೇಳೆ ಮಾತನಾಡಿದ ಎಪಿಎಂಸಿ ಅಧ್ಯಕ್ಷ ಕಟ್ಟೆಮನೆ ನಾಗೇಂದ್ರ. ಇದರಲ್ಲಿ ನಿಯಮ ಮೀರಿ ಏನೂ ನಡೆದಿಲ್ಲ. ಹರಾಜು ಮೂಲಕ ನಡೆದಿದೆ. ತನಿಖೆಯ ನಂತರ ಸತ್ಯ ಹೊರ ಬರಲಿದೆ. ಎಪಿಎಂಸಿಯ 40 ನಿವೇಶನಗಳನ್ನು 800 ರೂ ಗೆ ಚದರ ಅಡಿಯಂತೆ ಹರಾಜು ಕರೆದರೂ ಕೇವಲ 15 ಮಾತ್ರ ಹರಾಜಾಗಿವೆ. ಬೆಲೆ ಹೆಚ್ಚಳ ಆದರೆ ಯಾರು ತೆಗೆದುಕೊಳ್ಳುತ್ತಾರೆ. ನೋಂದಣಿ ಇಲಾಖೆ ನಿಗಧಿ ಪಡಿಸಿದಂತೆ ಹರಾಜು ಮಾಡಿದೆ. ಇನ್ನು ಅಲಾಟ್ ಮಾಡುವ 24 ಮೂಲೆ ನಿವೇಶನಗಳಿಗೆ ಜೇಷ್ಟತಾ ಆಧಾರದ ಮೇಲೆ ಅಲಾಟ್ ಮಾಡಲು 58 ಅರ್ಜಿ ಬಂದಿದ್ದವು. ಆದರೆ 2023 ರಲ್ಲಿ ಅರ್ಜಿ ಸಲ್ಲಿಸದವರು ನಮಗೆ ಆದ್ಯತೆ ನೀಡಿ ಎಂದು ನ್ಯಾಯಾಲಯದ ಮೊರೆ ಹೋಗಿದ್ದರಿಂದ ಮತ್ತು ಡಿಸಿಯವರು ಜು.29 ರಂದು ವಾಟ್ಸ್ ಅಪ್ ಮೆಸೇಜ್ ಮೂಲಕ ನಿಲ್ಲಿಸುವಂತೆ ಹೇಳಿದ್ದರಿಂದ ಈ ಪ್ರಕ್ರಿಯೆಯನ್ನು ಸದ್ಯ ಸಂಪೂರ್ಣ ನಿಲ್ಲಿಸಿದೆಂದು ಹೇಳಿದರು.

ಇನ್ನು ಒಬ್ಬರು ಮಳಿಗೆ ಗುತ್ತಿಗೆ ಪಡೆದು ಮತ್ತೊಬ್ಬರಿಗೆ ಅಂಗಡಿ ನಡೆಸಲು ನೀಡಿರುವುದು. ಈ ಹಿಂದಿನಿಂದ ನಡೆದುಕೊಂಡು ಬಂದಿದೆ ಎಂಬುದನ್ನು ಒಪ್ಪಿಕೊಂಡ ಅವರು ಇದರ ಬಗ್ಗೆ ಹಾಗೂ ಕೃಷಿಯಲ್ಲದೆ ಬೇರೆ ಉದ್ದೇಶಕ್ಕೆ ಬಳಸಿಕೊಂಡಿರುವ ಮಳಿಗೆಗಳ ಮಾಲೀಕರಿಗೆ ಈಗಾಗಲೇ ನೋಟೀಸ್ ನೀಡಿದೆ. ಇವರ ಮೇಲೆ ಕಾನೂನು ರೀತಿ ಕ್ರಮ ಜರುಗಿಸಲಿ ಎಂದು ಹೇಳಿದರು.

# ಪರಿಷ್ಕೃತ ಕನಿಷ್ಠ ವೇತನ ಅಧಿಸೂಚನೆ ವಾಪಸ್ ಬೇಡ: ಎಐಸಿಸಿಟಿಯು ಆಗ್ರಹ




**ರಾಯಚೂರು, ಆ. 2:** ರಾಜ್ಯದಲ್ಲಿ ಜಾರಿಯಲ್ಲಿರುವ ಪರಿಷ್ಕೃತ ಕನಿಷ್ಠ ವೇತನದ ಅಂತಿಮ ಅಧಿಸೂಚನೆಯನ್ನು ಮರುಪರಿಶೀಲಿಸುವ ಅಥವಾ ಹಿಂಪಡೆಯುವ ಯಾವುದೇ ಕ್ರಮವನ್ನು ತಕ್ಷಣ ಕೈಬಿಡಬೇಕು ಎಂದು ಆಗ್ರಹಿಸಿ ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ (ಎಐಸಿಸಿಟಿಯು) ಜಿಲ್ಲಾ ಸಮಿತಿಯ ಪದಾಧಿಕಾರಿಗಳು ನಗರದ ಕಾರ್ಮಿಕ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

2017–18ರಿಂದ ಬಾಕಿ ಉಳಿದಿದ್ದ ಕನಿಷ್ಠ ವೇತನ ಪರಿಷ್ಕರಣೆಯನ್ನು ಸುದೀರ್ಘ ಕಾನೂನುಬದ್ಧ ಪ್ರಕ್ರಿಯೆಯ ನಂತರ ಜಾರಿಗೊಳಿಸಲಾಗಿದ್ದು, ಇದರಿಂದ ರಾಜ್ಯದ ಒಂದು ಕೋಟಿಗೂ ಹೆಚ್ಚು ಕಾರ್ಮಿಕ ಕುಟುಂಬಗಳಿಗೆ ನ್ಯಾಯಯುತ ವೇತನ ದೊರೆಯಲಿದೆ. ಅವರ ಜೀವನಮಟ್ಟ ಸುಧಾರಿಸುವುದರ ಜೊತೆಗೆ ರಾಜ್ಯದ ಆರ್ಥಿಕ ಚಟುವಟಿಕೆಗೂ ಉತ್ತೇಜನ ಸಿಗಲಿದೆ ಎಂದು ತಿಳಿಸಿದರು.

ಪರಿಷ್ಕೃತ ಕನಿಷ್ಠ ವೇತನವನ್ನು 15ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಮಾನದಂಡಗಳು, ವೇತನ ಸಂಹಿತೆ–2019 ಹಾಗೂ ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳ ಅನುಸಾರ ನಿಗದಿಪಡಿಸಲಾಗಿದೆ. ಕರಡು ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿದ ಬಳಿಕವೇ ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದು, ಈಗ ಅದನ್ನು ಹಿಂಪಡೆಯುವುದು ಕಾನೂನುಬಾಹಿರವಾಗುತ್ತದೆ ಎಂದು ಆರೋಪಿಸಿದರು.

ವಿಷಯವು ಈಗಾಗಲೇ ಕರ್ನಾಟಕ ಹೈಕೋರ್ಟ್‌ನಲ್ಲಿ ವಿಚಾರಣೆಯಲ್ಲಿದ್ದು, ಸರ್ಕಾರವೇ ತನ್ನ ಅಧಿಸೂಚನೆಯನ್ನು ನ್ಯಾಯಾಲಯದಲ್ಲಿ ಸಮರ್ಥಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಅದನ್ನು ಮರು ಪರಿಶೀಲಿಸುವುದು ಸೂಕ್ತವಲ್ಲ ಎಂದು ಆಕ್ರೋಶ ಹೊರಹಾಕಿದರು.

ಕೆಪಿಟಿಸಿಎಲ್ ಸೇರಿದಂತೆ ಹಲವು ಸರ್ಕಾರಿ ಸಂಸ್ಥೆಗಳು, ನಿಗಮಗಳು ಹಾಗೂ ಖಾಸಗಿ ಸಂಸ್ಥೆಗಳು ಈಗಾಗಲೇ ಪರಿಷ್ಕೃತ ಕನಿಷ್ಠವೇತನ ಜಾರಿಗೊಳಿಸಿರುವುದರಿಂದ ಕಾರ್ಮಿಕರಿಗೆ ದೊರೆತಿರುವ ಹಕ್ಕುಗಳನ್ನು ಯಾವುದೇ ಕಾರಣಕ್ಕೂ ಹಿಂಪಡೆಯಬಾರದು ಎಂದು ಒತ್ತಾಯಿಸಿದರು.

ಉದ್ಯೋಗದಾತರ ಒತ್ತಡಕ್ಕೆ ಮಣಿದು ಸರ್ಕಾರ ಪರಿಷ್ಕೃತ ಕನಿಷ್ಠ ವೇತನ ಹಿಂಪಡೆದರೆ, ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ಪ್ರತಿಭಟನೆ, ಸರ್ಕಾರಿ ಕಚೇರಿಗಳ ಮುಂದೆ ಪಿಕೆಟಿಂಗ್ ಹಾಗೂ ರಾಜ್ಯ ಮಟ್ಟದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಬಳಿಕ ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಮೂಲಕ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಎಐಸಿಸಿಟಿಯು ಜಿಲ್ಲಾ ಘಟಕದ ಅಧ್ಯಕ್ಷ ಅಜೀಜ್ ಜಾಗೀರದಾರ್, ಮುಖಂಡರಾದ ಜಿಲಾನಿ ಯರಗೇರಾ, ಭೀಮಯ್ಯ, ಲಕ್ಷ್ಮಣ್, ನಿಸಾರ್ ಅಹ್ಮದ್, ಪ್ರಹ್ಲಾದ್, ಜಗದೀಶ್, ಮಾರಣ್ಣ, ಚಾಂದ್, ಈರಣ್ಣ, ಆಂಜನೇಯ, ನರಸಿಂಹಲು, ಮೌಲಾಲಿ, ಪರಶುರಾಮ್, ಇಮಾಮ್ ಸಾಬ್, ಮೂವೀಸ್ ಸಣ್ಣ ಹನುಮಂತ ಸೇರಿದಂತೆ ಕಾರ್ಮಿಕರು ಪಾಲ್ಗೊಂಡಿದ್ದರು.

# ಮಾದಕವಸ್ತು ಮುಕ್ತ ಸಮಾಜಕ್ಕೆ ಯುವಜನತೆಯ ಸಹಕಾರ ಅಗತ್ಯ: ಡಾ.ಶರಣಪ್ಪ

**ಕಲಬುರಗಿ, ಆ. 2:** ಇಂದಿನ ಡಿಜಿಟಲ್ ಯುಗದಲ್ಲಿ ಯುವಜನತೆ ದುಶ್ಚಟಗಳು ಹಾಗೂ ಡಿಜಿಟಲ್ ತಂತ್ರಜ್ಞಾನದ ದುರ್ಬಳಕೆಯಿಂದ ದೂರವಿದ್ದು, ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬೇಕು ಎಂದು ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ ಕರೆ ನೀಡಿದರು.



ಕರ್ನಾಟಕ ರಾಜ್ಯವನ್ನು ಹಾಗೂ ಕಲಬುರಗಿ ನಗರವನ್ನು ಮಾದಕ ವಸ್ತು ಮುಕ್ತಗೊಳಿಸಲು ಪೊಲೀಸ್ ಇಲಾಖೆಯು 'ಆಪರೇಷನ್ ರೈಸ್' ಮತ್ತು 'ಬೇಡ ಬ್ರೋ' ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳಲಾಗಿದೆ. ಬರೀ ಪೊಲೀಸ್ ಇಲಾಖೆಯಿಂದಲೇ ಮಾದಕವಸ್ತುಗಳ ನಿರ್ಮೂಲನೆ ಸಾಧ್ಯವಿಲ್ಲ; ಇದಕ್ಕೆ ಯುವಜನತೆ, ಸಮುದಾಯ ಹಾಗೂ ಸಾರ್ವಜನಿಕರ ಸಹಭಾಗಿತ್ವ ಅಗತ್ಯವಾಗಿದೆ ಎಂದು ಪ್ರತಿಪಾದಿಸಿದರು.

ಶ್ರೀ ಮಹಾಂತ ಶಿವಯೋಗಿಗಳ ಜನ್ಮದಿನವಾದ ಇಂದು ವ್ಯಸನಮುಕ್ತ ದಿನಾಚರಣೆ ರಾಜ್ಯದಾದ್ಯಂತ ಆಚರಿಸಲಾಗುತ್ತಿದೆ. ಶ್ರೀ ಮಹಾಂತ ಶಿವಯೋಗಿಗಳು ಕೇವಲ ಆಧ್ಯಾತ್ಮಿಕ ಜೀವಿ ಮಾತ್ರವಲ್ಲದೆ ಸಮಾಜ ಸುಧಾರಕರಾಗಿದ್ದರು. ದುಶ್ಚಟಗಳಿಂದ ವ್ಯಕ್ತಿ, ಕುಟುಂಬ ಹಾಗೂ ದೇಶದ ಮೇಲಾಗುವ ದುಷ್ಟ ಪರಿಣಾಮಗಳ ವಿರುದ್ಧ ಅವರು ಅಂದೇ ಹೋರಾಡಿದ್ದರು. ಇಂದಿನ ಸಂದರ್ಭದಲ್ಲೂ ಅವರ ಚಿಂತನೆಗಳು ಅತ್ಯಂತ ಪ್ರಸ್ತುತವಾಗಿವೆ. ಅಮದಿಕಿಂತಲು ಇಂದು ದುಶ್ಚಟದಿಂದ ಯುವ ಸಮುಹವನ್ನು ಕಾಪಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಮೊಬೈಲ್, ಸೋಶಿಯಲ್ ಮೀಡಿಯಾ ಹಾಗೂ ಓಟಿಟಿ ಅಡಿಕ್ಷನ್ (ಡಿಜಿಟಲ್ ಟಾಕ್ಸಿಸಿಟಿ) ಹೆಚ್ಚಾಗುತ್ತಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಧಕ್ಕೆಯಾಗುತ್ತಿದೆ. ಇದರೊಂದಿಗೆ ತಂಬಾಕು, ಮದ್ಯಪಾನ ಹಾಗೂ ಮಾದಕ ವಸ್ತುಗಳ ಬಳಕೆಯಿಂದ ಯುವಜನತೆ ತಮ್ಮ ಅಮೂಲ್ಯ ಭವಿಷ್ಯವನ್ನು ಹಾಳುಮಾಡಿಕೊಳ್ಳದರು. ವಿದ್ಯಾರ್ಥಿಗಳು ಕೇವಲ ತಮ್ಮ ಕುಟುಂಬಕ್ಕೆ ಮಾತ್ರವಲ್ಲದೆ ಇಡೀ ದೇಶಕ್ಕೆ ಶಕ್ತಿಯಾಗುವ ಪ್ರತಿಭೆಯನ್ನು ಹೊಂದಿದ್ದಾರೆ.

ಮಾದಕ ವಸ್ತುಗಳ ವಿರುದ್ಧ ತಡೆಗಟ್ಟುವಿಕೆ, ಪತ್ತೆ ಹಚ್ಚುವಿಕೆ ಮತ್ತು ಪುನರ್ವಸತಿ ಎಂಬ ತ್ರಿಕೋನ ಸೂತ್ರದಡಿಯಲ್ಲಿ ಕಾರ್ಯ ನಿರ್ವಹಿಸಲಾಗುತ್ತಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ವ್ಯಸನಮುಕ್ತ ಸಮಾಜದ ರಾಯಭಾರಿಯಾಗಬೇಕು ಎಂದು ಆಯುಕ್ತರು ಕರೆ ನೀಡಿದರು.

**3 ವರ್ಷದಲ್ಲಿ 700 ಕೇಸ್:** ಕಲಬುರಗಿಯಲ್ಲಿ ಕಳೆದ 3 ವರ್ಷಗಳಲ್ಲಿ ಮಾದಕವಸ್ತು ಜಾಲಕ್ಕೆ ಸಂಬಂಧಿಸಿದಂತೆ 700ಕ್ಕೂ ಹೆಚ್ಚು ಜನರ ಮೇಲೆ ಪ್ರಕರಣ ದಾಖಲಿಸಲಾಗಿದೆ.

ಹಿಂದೆ ಮಾರಾಟಗಾರರು ಮೇಲೆ ಕ್ರಮ ವಹಿಸಲಾಗುತ್ತಿತ್ತು. ಇನ್ಮುಂದೆ ಮಾದಕ ವಸ್ತುಗಳನ್ನು ಸೇವನೆ ಮಾಡುವವರ ಮೇಲೆಯೂ ಕಾನೂನು ಪ್ರಕಾರ ಪ್ರಕರಣ ದಾಖಲಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಂಯೋಜಕರಾದ ಸುಜಾತಾ ಪಾಟೀಲ, ವ್ಯಸನ ತ್ಯಜಿಸುವ ಮತ್ತು ಅರಿವು ಮೂಡಿಸುವ ಪ್ರತಿಜ್ಞೆ ವಿಧಿ ಬೋಧಿಸಿದರು. ಜಿಲ್ಲಾ ಮಾನಸಿಕ ಕಾರ್ಯಕ್ರಮ ಸಾಮಾಜಿಕ ಕಾರ್ಯಕರ್ತ ನಾಗರಾಜ ಬಿರಾದಾರ, ತಂಬಾಕು ಕೋಶದ ಸಹಾಯವಾಣಿ ಕುರಿತು ಮಾಹಿತಿ ನೀಡಿದರು.

# ಉನ್ನತ ಶಿಕ್ಷಣದಲ್ಲಿ ಎನ್‌ಇಪಿ ಸಮಗ್ರ ಬದಲಾವಣೆ: ಕುಲಪತಿ ಸತ್ಯನಾರಾಯಣ ಹರ್ಷ

**ಕಲಬುರಗಿ, ಆ. 2:** ಇಂದಿನ ಪ್ರಸ್ತುತ ಶಿಕ್ಷಣ ವ್ಯವಸ್ಥೆಯು, ಹಿಂದಿನ ಶಿಕ್ಷಣದ ವ್ಯವಸ್ಥೆಗಿಂತ ಬಹಳ ವಿಭಿನ್ನವಾಗಿದ್ದು, ಎನ್‌ಇಪಿ–2020 ದೇಶದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಹೊಸ ದೂರದೃಷ್ಟಿತ್ವವನ್ನು ಹಾಗೂ ಸಮಗ್ರ ಬದಲಾವಣೆಗಳನ್ನು ತಂದಿದೆ ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಅವರು ಹೇಳಿದರು.

ಇಲ್ಲಿನ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಹಾಗೂ ಕೇಂದ್ರ ಉನ್ನತ ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಅಖಿಲ ಭಾರತೀಯ ಶಿಕ್ಷಾ ಸಮಾಗಮ ಆಶ್ರಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ–2020ರ ವಿಮರ್ಶೆ ಹಾಗೂ ಯಶಸ್ವಿಯಾಗಿ ಆರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎನ್‌ಇಪಿ–2020 ಭಾರತೀಯ ಉನ್ನತ ಶಿಕ್ಷಣದ ವ್ಯವಸ್ಥೆಯಲ್ಲಿಯೇ ಒಂದು ಐತಿಹಾಸಿಕ ಹಾಗೂ ಪರಿವರ್ತನಾತ್ಮಕ ಸುಧಾರಣೆಯಾಗಿದೆ ಎಂದರು.

ಕೇಂದ್ರ ಉನ್ನತ ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಅಖಿಲ ಭಾರತೀಯ ಶಿಕ್ಷಾ ಸಮಾಗಮವು ಶಿಕ್ಷಣ ತಜ್ಞರು, ನೀತಿ ನಿರೂಪಕರು, ಉದ್ಯಮ ಮತ್ತು ಸರ್ಕಾರದ ಅಂಗಸಂಸ್ಥೆಗಳಿಗೆ ಎನ್‌ಇಪಿ–2020ರ ಅಡಿಯಲ್ಲಿ ಸಾಧಿಸಿದ ಗಮನಾರ್ಹ ಪ್ರಗತಿಯನ್ನು ಪರಿಶೀಲಿಸಲು ಮತ್ತು ಮುಂದಿನ ಮಾರ್ಗ ರೂಪಿಸಲು ಒಂದು ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ದೇಶದ ಉನ್ನತ ಶಿಕ್ಷಣದಲ್ಲಿ ಬಹುಶಿಸ್ತೀಯ ಆಯ್ಕೆಯ ಸ್ವಾತಂತ್ರ್ಯ, ಮೌಲ್ಯಾಧಾರಿತ ಮತ್ತು ಕೌಶಲ್ಯಾಧಾರಿತ ಪಠ್ಯಕ್ರಮಗಳು, ಅಪ್ರೆಂಟಿಸ್‌ಶಿಪ್ ಅವಕಾಶಗಳು ಮತ್ತು ವಿದ್ಯಾರ್ಥಿ ಕೇಂದ್ರಿತ ಕಲಿಕಾ ಮಾರ್ಗಗಳನ್ನು ಪರಿಚಯಿಸುವ ಮೂಲಕ ರಾಷ್ಟ್ರೀಯ ಶಿಕ್ಷಣ ನೀತಿಯು ಇಡೀ ವಿದ್ಯಾರ್ಥಿಗಳ ಸಮೂಹದ ಕಲಿಕಾ ವಿಧಾನವನ್ನೇ ಬದಲಿಸಿದೆ. ಇದರಿಂದ ವಿದ್ಯಾರ್ಥಿಗಳನ್ನು ಕೇವಲ ಶಿಕ್ಷಣಕ್ಕಾಗಿ ಮಾತ್ರವಲ್ಲದೇ ಉದ್ಯೋಗಕ್ಕಾಗಿ, ಹೊಸ ನವೋದ್ಯಮ, ಉದ್ಯಮಶೀಲತೆ ಆಧಾರಿತ ಮತ್ತು ವಿದ್ಯಾರ್ಥಿಗಳು ಜೀವನಪರ್ಯಂತ ಕಲಿಕೆಯತ್ತ ಸಿದ್ಧಗೊಳಿಸುತ್ತಿದೆ ಎಂದರು.

ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್ಸ್ ಸೇರಿದಂತೆ ಪ್ರಮುಖ ವಿದ್ಯಾರ್ಥಿಸ್ನೇಹಿ ಯೋಜನೆಗಳನ್ನು ನಮ್ಮ ವಿಶ್ವವಿದ್ಯಾಲಯದಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ತರಲಾಗಿದ್ದು, ವಿದ್ಯಾರ್ಥಿಗಳು ಡಿಜಿಟಲ್ ಹಾಗೂ ಹೊಸ ಕಲಿಕಾ ಅವಕಾಶಗಳ ಪ್ರಯೋಜನ ಪಡೆಯುತ್ತಿದ್ದಾರೆ. ಎನ್‌ಇಪಿ–2020ರ ಈ ಆರು ವರ್ಷದ ಯಶಸ್ವಿ ಶೈಕ್ಷಣಿಕ ಪಯಣದಲ್ಲಿ ಶ್ರಮಿಸಿದ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳನ್ನು ಕುಲಪತಿಗಳು ಅಭಿನಂದನೆ ಸಲ್ಲಿಸಿದರು. ಎನ್‌ಇಪಿ ಅಡಿಯಲ್ಲಿ ಆರಂಭವಾದ ನಾಲ್ಕು ವರ್ಷದ ಸ್ನಾತಕ ಪದವಿ ಕಾರ್ಯಕ್ರಮದ ಮೊದಲ ಬ್ಯಾಚ್



2025–26ನೇ ಶೈಕ್ಷಣಿಕ ವರ್ಷದಲ್ಲಿ ಯಶಸ್ವಿಯಾಗಿ ಪೂರೈಸಿದೆ ಎಂದರು.

ವಿದ್ಯಾರ್ಥಿಗಳು ನಮ್ಮ ವಿಶ್ವವಿದ್ಯಾಲಯದ ಸುಸಜ್ಜಿತ ಪ್ರಯೋಗಾಲಯಗಳು, ಗ್ರಂಥಾಲಯ ಸೌಲಭ್ಯಗಳು ಹಾಗೂ ಒಂದು ದೇಶ–ಒಂದು ಚಂದಾದಾರಿಕೆ ವ್ಯವಸ್ಥೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು. ವಿಶೇಷವಾಗಿ ಕಲಾ ವಿಭಾಗದ ವಿದ್ಯಾರ್ಥಿಗಳು ವಿಜ್ಞಾನ ಸಂಬಂಧಿತ ಕೋರ್ಸ್‌ಗಳನ್ನು ಕೂಡ ಅಧ್ಯಯನ ಮಾಡಬೇಕು ಇದರಿಂದ ಅಂತರಶಿಸ್ತೀಯ ಕಲಿಕೆ ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಭವಿಷ್ಯದ ವೃತ್ತಿಜೀವನದಲ್ಲಿ ಮಹತ್ವದ ಸಹಾಯವಾಗಲಿದೆ. ಎಂದು ಹೇಳಿದರು.

ಪರೀಕ್ಷಾ ನಿಯಂತ್ರಕ (ಪ್ರಭಾರ) ಪ್ರೊ. ಭರತ್ ಕುಮಾರ್ ಅವರು, ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್ಸ್ (ಎಬಿಸಿ) ವ್ಯವಸ್ಥೆಯ ಸಂಪೂರ್ಣ ಕಾರ್ಯವೈಖರಿ ಬಗ್ಗೆ ವಿವರಿಸಿದರು. ವಿದ್ಯಾರ್ಥಿಗಳ ಕೋರ್ಸ್‌ಗಳು ಪೂರ್ಣಗೊಂಡ ಬಳಿಕ ಶೈಕ್ಷಣಿಕ ಕ್ರೆಡಿಟ್‌ಗಳು ಸ್ವಯಂಚಾಲಿತವಾಗಿ ವಿದ್ಯಾರ್ಥಿಗಳ ಎಬಿಸಿ ಖಾತೆಗೆ ಜಮೆಯಾಗುತ್ತವೆ. ಇದರಿಂದ ಆನ್‌ಲೈನ್ ಮತ್ತು ಆಫ್‌ಲೈನ್ ಕಲಿಕೆಯ ಸಮನ್ವಯ ಸಾಧ್ಯವಾಗುತ್ತದೆ ಹಾಗೂ ವಿದ್ಯಾರ್ಥಿ ಸ್ನೇಹಿ, ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ ಮತ್ತಷ್ಟು ಇದರಿಂದ ಬಲಗೊಳ್ಳುತ್ತದೆ ಎಂದು ಹೇಳಿದರು.

ಗಣಿತ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಎನ್. ಸಂದೀಪ್ ಸ್ವಯಂ ಪೋರ್ಟಲ್ ಕುರಿತು ಮಾಹಿತಿ ನೀಡಿದರು. ಪ್ರಭಾರ ಕುಲಸಚಿವ ಪ್ರೊ. ವೆಂಕಟರಮಣ ದೊಡ್ಡಿ, ಎನ್‌ಇಪಿ ಅನುಷ್ಠಾನ ಸಮಿತಿ ಅಧ್ಯಕ್ಷರು ಹಾಗೂ ಪ್ರಾಧ್ಯಾಪಕರಾದ ಪ್ರೊ. ಚನ್ನವೀರ ಆರ್. ಎಂ., ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಹಾಗೂ ಕಾನೂನು ನಿಕಾಯದ ಡೀನ್ ಪ್ರೊ. ಬಸವರಾಜ ಎಂ. ಕುಬಕಡ್ಡಿ, ಶಿಕ್ಷಣ ವಿಭಾಗದ ಸಂಶೋಧನಾ ವಿದ್ಯಾರ್ಥಿ ನೀರವ್ ಕುಮಾರ್ ಅವರೂ ಮಾತನಾಡಿದರು.

ಎನ್‌ಇಪಿ ಯಶಸ್ವಿಯಾಗಿ ಜಾರಿಗೊಳಿಸಲು ಶ್ರಮಿಸಿದ ಕುಲಪತಿಗಳು, ಪಠ್ಯಕ್ರಮ ಹಾಗೂ ಎನ್‌ಇಪಿ ಅನುಷ್ಠಾನ ಸಮಿತಿಯ ಸದಸ್ಯರಾದ ಪ್ರೊ. ರೊಮೇಟ್ ಜಾನ್, ಪ್ರೊ. ಚನ್ನವೀರ ಆರ್.ಎಂ., ಪ್ರೊ. ಎಂ. ಪ್ರಶಾಂತ್ ಮತ್ತು ಡಾ. ಬಾಬು ನಲ್ಲುಸಾಮಿ ಸೇರಿದಂತೆ ಅಧ್ಯಾಪಕರನ್ನು ಈ ಸಂದರ್ಭದಲ್ಲಿ ಅವರು ಅಭಿನಂದನೆ ಸಲ್ಲಿಸಿದರು.

ಎನ್‌ಇಪಿ ಸಂಯೋಜಕ ಪ್ರೊ. ಎಂ. ಪ್ರಶಾಂತ್ ಅವರು ಸ್ವಾಗತಿಸಿ ಮಾತನಾಡಿ, ಎನ್‌ಇಪಿ ಅನುಷ್ಠಾನದ ಸಮಗ್ರ ಅವಲೋಕನವನ್ನು ವಿವರವಾಗಿ ಹೇಳಿದರು. ಡಾ. ಉದಯ್ ಪಾಟೀಲ್ ಅವರು ವಂದಿಸಿದರು. ಕಾರ್ಯಕ್ರಮದಲ್ಲಿ ಪ್ರೊ. ಆರ್.ಎಸ್. ಹೆಗಡಿ, ಪ್ರೊ. ಎ.ಎನ್. ವಿಜಯಕುಮಾರ್, ಪ್ರೊ. ರೊಮೇಟ್ ಜಾನ್, ಪ್ರೊ. ಜೆಯವೇಲ್ ಎಸ್., ಪ್ರೊ. ಮಹಮ್ಮದ್ ಜೋಹಿಯರ್, ಪ್ರೊ. ಪವಿತ್ರಾ ಆರ್. ಆಲೂರ್, ಪ್ರೊ. ಪಾಂಡುರಂಗ ವಿ., ಪ್ರೊ. ದೇವರಾಜಪ್ಪ ಎಸ್., ಪ್ರೊ. ಎಂ. ಅಮರೇಂದ್ರ, ಪ್ರೊ. ರಾಜೀವ ಶೇಷ ಜೋಷಿ, ಪ್ರೊ.ವಿಜಯೇಂದ್ರ ಪಾಂಡಾ, ಪ್ರೊ.ಕೆ.ಹನುಮೇಗೌಡ, ಡಾ.ಶುಷ್ಮಾ ಎಚ್., ಡಾ.ಶೈಲಜಾ, ಡಾ. ಹರೀಶ್ ಹೊಳ್ಳ, ಡಾ. ಪಿ.ಕುಮಾರ್ ಮಂಗಲಂ, ಡಾ. ತೇಜಸ್ವಿ ಲಕ್ಕುಂಡಿ, ಡಾ. ಪಿ. ರಾಜಲಿಂಗೇಗೌಡ, ಸೇರಿದಂತೆ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ದಂತ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಸರ್ಕಾರಿ ದಂತ ವೈದ್ಯಕೀಯ ಕಾಲೇಜು ಶ್ರಮಿಸುತ್ತಿದೆ: ಡಾ.ಗಂಗಾಧರಗೌಡ

**ಬಳ್ಳಾರಿ, ಆ.02:** ನಗರದ ಬಿಎಂಸಿಆರ್‌ಸಿ ಆವರಣದಲ್ಲಿರುವ ಸರ್ಕಾರಿ ದಂತ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಪಿರಿಯೊಡಾಂಟಿಕ್ಸ್ ವಿಭಾಗದಲ್ಲಿ 'ಬಾಯಿ ಸ್ವಚ್ಛತಾ ದಿನ'ವನ್ನು ಆಚರಿಸಿತು.



ಬಿಎಂಸಿಆರ್‌ಸಿ ನಿರ್ದೇಶಕ ಡಾ. ಟಿ. ಗಂಗಾಧರ್‌ಗೌಡ, ದಂತ ಕಾಲೇಜಿನ ಪ್ರಾಂಶುಪಾಲೆ ಡಾ. ಭಾರತಿ ಎಸ್.ಎಚ್., ಬಿಎಂಸಿಆರ್‌ಸಿ ಪ್ರಾಂಶುಪಾಲ ಡಾ. ಎಂ. ಮಲ್ಲಿಕಾರ್ಜುನ್ ಮತ್ತು ವೈದ್ಯಕೀಯ ಅಧೀಕ್ಷಕ ಡಾ. ಇಂದುಮತಿ ಅವರು ಒಸಡು ರೋಗತಜ್ಞ ಆಗಿದ್ದ ಡಾ. ಶಂಕ್ವಾಲ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಡಾ. ಟಿ. ಗಂಗಾಧರ್ ಗೌಡ ದಂತ ವೈದ್ಯಕೀಯ ಕ್ಷೇತ್ರದಲ್ಲಿನ ಬೆಳವಣಿಗೆಗಳು ಮತ್ತು ಹಲ್ಲುಗಳನ್ನು ಉಳಿಸುವ ವಿವಿಧ ಚಿಕಿತ್ಸಾ ವಿಧಾನಗಳ ಕುರಿತು ಮಾತನಾಡಿದರು. ಸಾರ್ವಜನಿಕರಲ್ಲಿ ದಂತ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಸರ್ಕಾರಿ ದಂತ ವೈದ್ಯಕೀಯ ಕಾಲೇಜು ಶ್ರಮಿಸುತ್ತಿದೆಂದು ತಿಳಿಸಿದರು,

ಕರ್ನಾಟಕ ರಾಜ್ಯ ದಂತ ವೈದ್ಯಕೀಯ ಮಂಡಳಿಯ ರಿಜಿಸ್ಟ್ರಾರ್ ಹಾಗೂ ಬೆಂಗಳೂರಿನ ಎಸ್‌ಎಸ್‌ವಿಕೆ ದಂತ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ವಿ. ರಂಗನಾಥ್ ಮುಖ್ಯ ಅತಿಥಿಗಳಾಗಿದ್ದರು. ಬೆಂಗಳೂರಿನ ದಂತ ಕಸಿ ತಜ್ಞ ಡಾ. ವೀರೇಂದ್ರ ಕುಮಾರ್ ವಿಶೇಷ ಉಪನ್ಯಾಸ ನೀಡಿದರು.

## ಕಲಬುರಗಿ ಉಸ್ತುವಾರಿ ಸಚಿವರು ಜಗತ್ತಿನ ಎಲ್ಲ ವಿಷಯ ಮಾತಾಡ್ತಾರೆ

# ಸ್ವಂತ ಜಿಲ್ಲೆಯ ಜನರ ಸಂಕಷ್ಟವೇ ಗೊತ್ತಿಲ್ಲ: ಡಾ.ಜಾಧವ ಆರೋಪ

**ಕಲಬುರಗಿ, ಆ. 2:** ರಾಜ್ಯದ ಗೃಹ ಸಚಿವರೂ ಆಗಿರುವ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಜಗತ್ತಿನ ಆಗು ಹೋಗುಗಳೆಲ್ಲ ಗೊತ್ತಿರುತ್ತದೆ. ಅದರ ಬಗ್ಗೆ ಪುಂಖಾನುಪುಂಖವಾಗಿ ಮಾತನಡುತ್ತಾ ನಿತ್ಯ ಮಾಧ್ಯಮಗಳಲ್ಲಿ ಮಿಂಚುತ್ತಾರೆ. ಆದರೆ ಅವರಿಗೆ ತಮ್ಮ ಸ್ವಂತ ಜಿಲ್ಲೆ ಮತ್ತು ಉಸ್ತುವಾರಿ ವಹಿಸಿಕೊಂಡಿರುವ ಜಿಲ್ಲೆಯ ಸಮಸ್ಯೆಗಳೇ ಗೊತ್ತಿಲ್ಲ. ತಿಳಿದುಕೊಳ್ಳಲು ಪುರುಸೊತ್ತು ಕೂಡ ಇಲ್ಲ. ಎಲ್ಲವನ್ನೂ ಅಧಿಕಾರಿಗಳಿಗೊಪ್ಪಿಸಿ ಬೆಂಗಳೂರಲ್ಲಿ ಪತ್ರಿಕಾಗೋಷ್ಠಿಗಳಲ್ಲಿ ತಲ್ಲಿನರಾಗಿದ್ದಾರೆ ಎಂದು ಮಾಜಿ ಸಂಸದ ಡಾ.ಉಮೇಶ ಜಾಧವ ಅವರು ಕಟುವಾಗಿ ಟೀಕಿಸಿದರು.



ಜಿಲ್ಲೆಯ ಆಡಳಿತ ಪೂರ್ಣ ನಿಷ್ಕ್ರಿಯವಾಗಿದೆ. ಕಾಂಗ್ರೆಸ್ ಭರವಸೆಗಳಲ್ಲಿಯೇ ಕಾಲಹರಣ ಮಾಡದೇ ಜಿಲ್ಲೆಯಲ್ಲಿನ ಕಾನೂನು ಸುವ್ಯವಸ್ಥೆ ಕಾಪಾಡುವುದರೊಂದಿಗೆ ಆಡಳಿತ ಯಂತ್ರ ಸಕ್ರೀಯಗೊಳಿಸಬೇಕು. ಮಳೆಯಿಲ್ಲದೇ ಜನ–ಜಾನುವಾರು ತೀವ್ರ ಸಂಕಷ್ಟದಲ್ಲಿದ್ದಾರೆ. ಅವರ ನೆರವಿಗೆ ಬರಬೇಕು ಎಂದು ಒತ್ತಾಯಿಸಿದರು.

ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಅಭಿವೃದ್ಧಿಯ ಸಂಪೂರ್ಣ ಸ್ಥಗಿತಗೊಂಡಿದೆ. ಜನಸಾಮಾನ್ಯರು ಸಂಕಷ್ಟದ ಜೀವನ ನಡೆಸುತ್ತಿದ್ದಾರೆ. ಮಳೆಗಾಲದಲ್ಲೂ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ, ಹದಗೆಟ್ಟ ರಸ್ತೆಗಳು, ರೈತರ ಸಂಕಷ್ಟ, ನಿರುದ್ಯೋಗ, ಮೂಲಭೂತ ಸೌಲಭ್ಯಗಳ ಕೊರತೆ ಸೇರಿದಂತೆ ಹಲವು ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು.

ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ಬದಲು ಕಾಂಗ್ರೆಸ್ ಸರ್ಕಾರ ಭರವಸೆಗಳಲ್ಲೇ ಕಾಲಹರಣ ಮಾಡುತ್ತಿದೆ. ಅಭಿವೃದ್ಧಿಗಿಂತ ರಾಜಕೀಯಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದು ರಾಜ್ಯದ ದುರಂತವಾಗಿದೆ. ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ವಿಶೇಷ ಗಮನ ನೀಡಿ, ರೈತರು, ಯುವಕರು, ಮಹಿಳೆಯರು ಹಾಗೂ ಬಡವರ ಹಿತಕ್ಕಾಗಿ ತಕ್ಷಣವೇ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು. ಜಿಲ್ಲೆಯ ಕಾನೂನು ಸುವ್ಯವಸ್ಥೆ ಕುಸಿದಿದೆ. ದೇವಲ್ ಗಾಣಗಾಪುರದಲ್ಲಿ ಆಟೋ ಚಾಲಕನ ಮೇಲೆ ಮಾರಣಾಂತಿಕ ಹಲ್ಲೆಯಾಗಿದೆ. ಅದಕ್ಕಿಂತ ಮುಂಚೆ ನಗರದಲ್ಲಿ ಬರ್ಬರ ಹತ್ಯೆಯಾಗಿದೆ. ತಾಜ್‌ಸುಲ್ತಾನಪುರ ಬಳಿ ಯುವಕನ ಮೇಲೆ ಚಾಕುವಿನ ದಾಳಿ ನಡೆದಿದೆ. ಇದರಿಂದ ಸಾರ್ವಜನಿಕರು ಭಯದ ನೆರಳಲ್ಲಿ ಬದುಕುವಂತೆ ಮಾಡಿದೆ. ಕರ್ಜಗಿಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ 55 ವಿದ್ಯಾರ್ಥಿಗಳು ಉಪಹಾರ ಸೇವಿಸಿ ಅಸ್ವಸ್ಥಗೊಂಡರು. ದಂಡೋತಿ ವಸತಿ ಶಾಲೆಯಲ್ಲೂ 50 ವಿದ್ಯಾರ್ಥಿಗಳು ಅಸ್ವಸ್ಥಗೊಂಡರು. ಇಂತಹ ಗಂಭೀರ ಘಟನೆಯಾದರೂ ಸಹ ಸಚಿವರು ಭೇಟಿನೀಡಿಲ್ಲ ಎಂದು ಆರೋಪಿಸಿದರು.

ಜಿಲ್ಲೆಯಲ್ಲಿ ಮುಂಗಾರು ಮಳೆ ವಿಫಲವಾಗಿದೆ. ಈ ಕುರಿತು ಸ್ವತ: ಅಧಿಕಾರಿಗಳು ಹಾಗೂ ಸರ್ಕಾರವೇ ಹೇಳುತ್ತಿದೆ. ಆದಾಗ್ಯೂ, ಪರಿಹಾರ ಕಾಮಗಾರಿಗಳನ್ನು ಆರಂಭ ಮಾಡಿಲ್ಲ. ಇದರಿಂದಾಗಿ ಕೃಷಿ ಕೂಲಿ ಕಾರ್ಮಿಕರು ಉದ್ಯೋಗ ಇಲ್ಲದೇ ದೊಡ್ಡ, ದೊಡ್ಡ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಕೂಡಲೇ ರಾಜ್ಯ ಸರ್ಕಾರವು ವಲಸೆ ತಡೆಯಲು ಪರಿಹಾರ ಕಾಮಗಾರಿಗಳನ್ನು ಆರಂಭಿಸಬೇಕು ಎಂದು ಅವರು ಒತ್ತಾಯಿಸಿದರು.

ರಾಜ್ಯ ಸರ್ಕಾರವು ನಿರ್ಲಕ್ಷ್ಯ ವಹಿಸುತ್ತಿದೆ ಎಂದು ದೂರಿದ ಅವರು, ಕೆಲವು ಕಡೆ ಮಳೆ ಮಾಪಕ ಘಟಕಗಳ ಒಳಗೆ ಮಳೆ ನೀರು ಬೀಳದಂತೆ ಅದರ ಮೇಲೆಯೇ ಛಾವಣಿ ನಿರ್ಮಿಸಲಾಗಿದೆ. ಮಳೆ ನೀರೇ ಒಳಗೆ ಹೋಗದಿದ್ದರೆ, ಮಳೆಯ ಪ್ರಮಾಣ ಹೇಗೆ ದಾಖಲಾಗುತ್ತದೆ. ಅಧಿಕಾರಿಗಳ ಈ ಎಡವಟ್ಟಿನಿಂದ ರೈತರು ವಿಮೆಯಿಂದ ವಂಚಿತರಾಗಿದ್ದಾರೆ. ಸರ್ಕಾರದ ಕಣ್ಣೊರೆಸುವ ತಂತ್ರ: ಪತ್ರಿಕಾ ವರದಿಗಳ ನಂತರ ಈಗ ಎಚ್ಚೆತ್ತುಕೊಂಡಿರುವ ಕಂದಾಯ ಇಲಾಖೆ, ಜಿಲ್ಲಾಧಿಕಾರಿ ಮತ್ತು ಗ್ರಾಮ ಆಡಳಿತಾಧಿಕಾರಿಗಳಿಗೆ ನಿರ್ವಹಣೆ ಜವಾಬ್ದಾರಿ ವಹಿಸಿ ಕೈತೊಳೆದುಕೊಳ್ಳುತ್ತಿದೆ. ಕೇವಲ 250ರೂ.ಗಳ ಭತ್ಯೆ ನೀಡಿ, ಕೆಟ್ಟುಹೋದ ಮಾಪಕಗಳನ್ನು ಸರಿಪ ಡಿಸಲು 3 ತಿಂಗಳ ಕಾಲಾವಕಾಶ ಕೇಳುತ್ತಿದೆ. ಆದರೆ, ಈ ಯಂತ್ರಗಳ ವೈಫಲ್ಯದಿಂದ ಈಗಾಗಲೇ ವಿಮೆ ಕಳೆದುಕೊಂಡು ನಷ್ಟ ಅನುಭವಿಸಿದ ರೈತರಿಗೆ ಇದರಿಂದ ಯಾವ ನ್ಯಾಯ ಸಿಗುತ್ತದೆ? ಎಂದು ಖಾರವಾಗಿ ಪ್ರಶ್ನಿಸಿದರು.

ಇಡೀ ಹಳ್ಳಿಗೆ ಯಾವುದೋ ಒಂದು ಸಣ್ಣ ತುಂಡು ಭೂಮಿಯಲ್ಲಿ ಬೆಳೆ ಕಟಾವು ಪ್ರಯೋಗ ಮಾಡಿ, ಅಲ್ಲಿನ ಇಳುವರಿ ಆಧರಿಸಿ ಇಡೀ ಗ್ರಾಮದ ಬೆಳೆ ಹಾನಿ ನಿರ್ಧರಿಸುವುದು ಸಂಪೂರ್ಣ ಅವೈಜ್ಞಾನಿಕ. ಕೃಷಿ ಮತ್ತು ಕಂದಾಯ ಅಧಿಕಾರಿಗಳು ಹೊಲಗಳತ್ತ ಸುಳಿಯದೆ ಕಚೇರಿಯಲ್ಲೇ ಕುಳಿತು ಸುಳ್ಳು ವರದಿ ಕಳಿಸುತ್ತಿದ್ದಾರೆ. ಅಕ್ಕಪಕ್ಕದ ಹಳ್ಳಿಗಳಲ್ಲಿ ವ್ಯತ್ಯಾಸ: ಒಂದೇ ರೀತಿಯ ಫಲವತ್ತಾದ ಭೂಮಿ ಮತ್ತು ಹವಾಮಾನ ಹೊಂದಿರುವ ಪಕ್ಕದ ಹಳ್ಳಿಗಳ ನಡುವೆ ಬೆಳೆ ವಿಮೆ ಪರಿಹಾರದಲ್ಲಿ ಭಾರಿ ವ್ಯತ್ಯಾಸವಿದೆ. ಮುಗ್ಧ ರೈತರಲ್ಲಿ ವಿಮೆಯ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಅವರು ದೂರಿದರು.

ಕೂಡಲೇ ಬೆಳೆ ಕಳೆದುಕೊಂಡ ಪ್ರತಿಯೊಬ್ಬ ರೈತನಿಗೂ ಶೇ.100ರಷ್ಟು ಬೆಳೆವಿಮೆ ಮತ್ತು ಪರಿಹಾರವನ್ನು ತಕ್ಷಣವೇ ಒದಗಿಸುವಂತೆ, ರೈತರ ಹೆಸರಿನಲ್ಲಿ ಬೇರೆ ರಾಜ್ಯಗಳ ಮಾಲನ್ನು ಎಪಿಎಂಸಿಗೆ ತಂದು ಸುರಿಯುತ್ತಿರುವ ಜಾಲದ ಬಗ್ಗೆ ಉನ್ನತ ಮಟ್ಟದ ತನಿಖೆ ಮಾಡುವಂತೆ,

**ಮಳೆ ಮಾಪಕಗಳ ತನಿಖೆ ಮತ್ತು CCE ರದ್ದು:** ಮಳೆ ಮಾಪಕಗಳ ನಿರ್ವಹಣೆಯಲ್ಲಿನ ಭ್ರಷ್ಟಾಚಾರವನ್ನು ತನಿಖೆ ಮಾಡಬೇಕು. ಅವೈಜ್ಞಾನಿಕ ಅಅಇ ಪದ್ಧತಿಯನ್ನು ರದ್ದುಗೊಳಿಸಿ, ರೈತರ ಹೊಲಗಳಲ್ಲಿ ಜಾಗೃತಿ ಮೂಡಿಸಿ ನೈಜ ಬೆಳೆ ಹಾನಿ ಸಮೀಕ್ಷೆ ನಡೆಸುವಂತೆ ಒತ್ತಾಯಿಸಿದರು.

# ನಿಜಸುಖಿ ಹಡಪದ ಅಪ್ಪಣ್ಣ ಶ್ರೇಷ್ಠ ಶರಣರು: ಡಾ.ಗಂಗಾಂಬಿಕಾ ಅಕ್ಕ



**ಬಸವಕಲ್ಯಾಣ, ಆ. 2:** ನಿಜಸುಖಿ ಹಡಪದ ಅಪ್ಪಣ್ಣನವರು ಶ್ರೇಷ್ಠ ಶರಣರಾಗಿದ್ದರು. ಅವರು ತಮ್ಮ ವಚನಗಳ ಮೂಲಕ ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ ಜಾತಿ ವ್ಯವಸ್ಥೆ, ಕಂದಾಚಾರ, ಮೂಢನಂಬಿಕೆ ವಿರುದ್ಧ ಹೋರಾಡಿ ಕ್ರಾಂತಿಕಾರಕ ಬದಲಾವಣೆ ಕುರಿತು ತಿಳಿಸಿರುವುದು ಅವಿಸ್ಮರಣೀಯ ಎಂದು ಹರಳಯ್ಯ ಗವಿಯ ಪೂಜ್ಯ ಡಾ.ಗಂಗಾಂಬಿಕಾ ಅಕ್ಕ ಬಣ್ಣಿಸಿದರು.

ನಗರದ ಹರಳಯ್ಯನವರ ಗವಿಯಲ್ಲಿ ಅಂತಾರಾಷ್ಟ್ರೀಯ ಲಿಂಗಾಯತ ಧರ್ಮ ಕೇಂದ್ರ ಹಾಗೂ ಅಖಿಲ ಭಾರತ ಲಿಂಗವಂತ ಹರಳಯ್ಯ ಪೀಠದ ವತಿಯಿಂದ ಭಾನುವಾರ ಸಂಜೆ ಆಯೋಜಿಸಿದ್ದ ಶರಣು ಶರಣಾರ್ಥಿ ಸಮಾವೇಶ ಹಾಗೂ ಹಡಪದ ಅಪ್ಪಣ್ಣನವರ ವಚನ ಚಿಂತನ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಅಪ್ಪಣ್ಣನವರು ಗುರು ಬಸವಣ್ಣನವರ ಕಾರ್ಯದರ್ಶಿಯಾಗಿ ಬಸವಣ್ಣನವರಿಗೆ ಸರ್ವ ರೀತಿಯಿಂದಲೂ ಸಹಕರಿಸಿ ಅಜರಾಮರರಾದವರು.

ಅಸಮ ಸಮಾಜದ ಶೋಷಣೆ ವಿರೋಧಿಸಿ ಹೊಸ ಸಮಾಜದ ಸ್ಥಾಪನೆಗೆ ಹೋರಾಡಿದ ಬಸವಣ್ಣ–ಅಲ್ಲಮ, ಅಕ್ಕಮಹಾದೇವಿ, ಮಾಚಿದೇವ ಮುಂತಾದ ಶರಣರಂತಯೇ ಅಪ್ಪಣ್ಣನವರು ಪೂಜ್ಯನಿಯರು ಎಂದು ಹೇಳಿದರು.

ಕಲಬುರಗಿ ಪದವಿಪೂರ್ವ ಶಿಕ್ಷಣ ಇಲಾಖೆ undefine ಜಯ ಉಪನಿರ್ದೇಶಕ ಸುರೇಶ ಅಕ್ಕಣ್ಣ ಉದ್ಘಾಟಿಸಿ ಮಾತನಾಡಿ, ಶಾಂತಿ, ಸಹಬಾಳ್ವೆ, ನೆಮ್ಮದಿ ಬದುಕಿಗೆ ಆಧಾರವಾಗಿರುವ ಶರಣ ಸಂಸತಿ ಮುಂದಿನ ಪೀಳಿಗೆಗೆ ತಿಳಿಸಿಕೊಡಬೇಕು ಪೂಜ್ಯ ಡಾ.ಗಂಗಾಂ ಬಿಕಾ ಅಕ್ಕನವರು ಬಸವತತ್ವ ಮನೆ–ಮನಗಳಿಗೆ ಮುಟ್ಟಿಸುವ ಕಾರ್ಯ ಮಾಡುತ್ತಿರುವುದು ಶ್ಲಾಘನಿಯ ಎಂದರು. ಶ್ರೀ ಗುರುಬಸವ ಯೋಗಾಶ್ರಮದ ಪೂಜ್ಯ ಗಾಯತ್ರಿ ತಾಯಿ ಅನುಭಾವ ನೀಡಿ, ಅನುಭವ ಮಂಟಪ ಮತ್ತು ಬಸವಣ್ಣನವರ ಕಾಯಕಕ್ಕೆ ಹಡಪದ ಅಪ್ಪಣ್ಣ ಆಧಾರ ಸ್ತಂಭವಾಗಿದರು. ಅವರ ಸುಮಾರು 251 ವಚನಗಳು ದೊರಕಿವೆ.

ಬದುಕನ್ನು ಸಮರ್ಥ ರೀತಿಯಲ್ಲಿ ಮುನ್ನಡೆಸಿಕೊಂಡು ಹೋಗಲು ಶರಣ ದಂಪತಿಗಳಾದ ಅಪ್ಪಣ್ಣ ಲಿಂಗಮ್ಮನವರ ಹಿತನುಡಿಗಳು ಸರ್ವರಿಗೂ ದಾರಿ ದೀಪವಾಗಿವೆ ಎಂದರು

## ಬೀದರ್‌ನಲ್ಲಿ ಸತತ ಮೂರನೇ ದಿನವೂ ಜಿಟಿಜಿಟಿ ಮಳೆ

**ಬೀದರ್, ಆ. 2:** ಸತತ ಮೂರನೇ ದಿನವೂ ಜಿಲ್ಲೆಯಾದ್ಯಂತ ಜಿಟಿ ಜಿಟಿ ಮಳೆಯಾಗುತ್ತಿದೆ. ಗುರುವಾರ ಬೆಳಕು ಹರಿಯುತ್ತಿದ್ದಂತೆ ಆರ್ಭಟಿಸಲು ಆರಂಭಿಸಿದ ಮಳೆ ರಾತ್ರಿ ಒಂಬತ್ತರ ವರೆಗೆ ನಿರಂತರ ಬಿಟ್ಟು ಬಿಟ್ಟು ಸುರಿಯಿತು. ಕೆಲವೊಮ್ಮೆ ಜಿಟಿಜಿಟಿ, ಕೆಲವು ಸಲ ಜೋರು ಹೀಗೆ ದಿನವಿಡೀ ಆಕಾಶಕ್ಕೆ ತೂತು ಬಿದ್ದಂತೆ ಮಳೆ ಸುರಿಯಿತು.

ಶುಕ್ರವರ, ಶನಿವಾರವೂ ಸಹ ಹಗಲು–ರಾತ್ರಿ ಎನ್ನದೆ ಮಳೆಯಾಗಿತ್ತು. ಸತತ ಮಳೆಗೆ ವಾತಾವರಣ ಸಂಪೂರ್ಣ ತಂಪಾಗಿ, ಜನಜೀವನ ಅಸ್ತವ್ಯಸ್ತ ಗೊಂಡಿದೆ. ಬೆಳಿಗ್ಗೆ ಶಾಲಾ, ಕಾಲೇಜು, ಕಚೇರಿಗೆ ಹೋಗುವ ಸಮಯ ಹಾಗೂ ಸಂಜೆ ಅಲ್ಲಿಂದ ಮನೆ ಸೇರುವ ವೇಳೆಯಷ್ಟೇ ಜನ ಹೆಚ್ಚಾಗಿ ರಸ್ತೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಸತತ ಮಳೆಗೆ ಹಳ್ಳ, ಕೊಳ್ಳಗಳಿಗೆ ಜೀವ ಕಳೆ ಬಂದಿದೆ. ಸೋಯಾ, ತೊಗರಿ ಬಿತ್ತನೆ ಮಾಡಿದ ರೈತರ ಸಂತಸಕ್ಕೆ ಕಾರಣವಾಗಿದೆ. ನೀರು ಚರಂಡಿ ಸೇರುವುದರ ಬದಲು ಮುಖ್ಯರಸ್ತೆ ಗಳಲ್ಲಿಯೇ ಹರಿಯುತ್ತಿರುವುದರಿಂದ ವಾಹನಗಳ ಸಂಚಾರಕ್ಕೂ ತೊಡಕಾಗಿದೆ. ನೀರಿನಲ್ಲೇ ಸಂಚರಿಸುವ ಪರಿಸ್ಥಿತಿ ಇದೆ. ಶುಕ್ರವಾರವೂ ಮಳೆ ಮುಂದುವರೆಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

## ಸ್ಟೀಲ್‌ಸಿಟಿ ರನ್‌ನಲ್ಲಿ ಮಿಂಚಿದ ವಾಸವಿ ವಿದ್ಯಾಲಯದ ವಿದ್ಯಾರ್ಥಿಗಳು ಭಾಗಿ

**ಬಳ್ಳಾರಿ, ಆ. 02.** ಬಳ್ಳಾರಿ ಸೈಕ್ಲಿಂಗ್ ಅಂಡ್ ರನ್ನಿಂಗ್ ಫೌಂಡೇಶನ್ ವತಿಯಿಂದ ಬಳ್ಳಾರಿಯಲ್ಲಿ ಆಯೋಜಿಸಲಾದ ಸ್ಟೀಲ್ ಸಿಟಿ ರನ್ ನಲ್ಲಿ ಶ್ರೀ ವಾಸವಿ ವಿದ್ಯಾಲಯದ ಪ್ರೌಢಶಾಲಾ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ, ಕ್ರೀಡಾ ಮನೋಭಾವ ಮತ್ತು ಆರೋಗ್ಯ ಜಾಗೃತಿಯ ಸಂದೇಶವನ್ನು ಸಾರಿದರು.




ದೈಹಿಕ ಆರೋಗ್ಯ, ಮಾನಸಿಕ ಉಲ್ಲಾಸ ಹಾಗೂ ಶಿಸ್ತಿನ ಜೀವನಶೈಲಿಯನ್ನು ಉತ್ತೇಜಿಸುವ ಉದ್ದೇಶದಿಂದ ಆಯೋಜಿಸಲಾದ ಈ ರನ್ ನಲ್ಲಿ ಶಾಲೆಯ ವಿದ್ಯಾರ್ಥಿಗಳು ಉತ್ಸಾಹದಿಂದ ಓಡಿ ತಮ್ಮ ಕ್ರೀಡಾಸಕ್ತಿಯನ್ನು ಪ್ರದರ್ಶಿಸಿದರು. ರನ್‌ನಲ್ಲಿ ಭಾಗವಹಿಸುವ ಮೂಲಕ ವಿದ್ಯಾರ್ಥಿಗಳು ಶಿಸ್ತು, ಸಹನೆ, ಆತ್ಮವಿಶ್ವಾಸ, ನಿರಂತರ ಪ್ರಯತ್ನ ಮತ್ತು ಗೆಲುವಿನ ಮನೋಭಾವವನ್ನು ತಮ್ಮದಾಗಿಸಿಕೊಂಡರು. ವಿದ್ಯಾರ್ಥಿಗಳಿಗೆ ಸದಾ ಪ್ರೇರಣೆಯ ಚಿಲುಮೆಯಾಗಿರುವ ಶಾಲೆಯ ಮುಖ್ಯೋಪಾಧ್ಯಾಯರಾದ ವೀರೇಶ್ ಯು ರವರು ರನ್ ನಲ್ಲಿ ಸಕ್ರಿಯವಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಮಾದರಿ ಯಾದರು.

ಮುಖ್ಯೋಪಾಧ್ಯಾಯರ ಉತ್ಸಾಹಭರಿತ ಭಾಗವಹಿಸುವಿಕೆ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಉತ್ಸಾಹವನ್ನು ಮೂಡಿಸಿತು. ಅವರ ಸ್ಫೂರ್ತಿಯಿಂದ ವಿದ್ಯಾರ್ಥಿಗಳು ಮ್ಯಾರಥಾನ್‌ನಲ್ಲಿ ಇನ್ನಷ್ಟು ಹುಮ್ಮಸ್ಸಿನಿಂದ ಪಾಲ್ಗೊಂಡರು.

ಈ ಓಟದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ವಿದ್ಯಾರ್ಥಿಯು ಪದಕ ಮತ್ತು ಪ್ರಮಾಣಪತ್ರವನ್ನು ಪಡೆದರು.

ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಯನ್ನು ವಾಸವಿ ವಿದ್ಯಾಲಯದ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕ ವೃಂದ ಅಭಿನಂದಿಸಿದರು. ಶಿಕ್ಷಣದ ಜೊತೆಗೆ ಕ್ರೀಡೆ ಮತ್ತು ದೈಹಿಕ ಚಟುವಟಿಕೆಗಳಿಗೆ ಆದ್ಯತೆ ನೀಡುವ ಮೂಲಕ ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಶಾಲೆ ಸದಾ ಪ್ರೋತ್ಸಾಹ ನೀಡುತ್ತಿದೆ ಎಂದು ತಿಳಿಸಲಾಯಿತು. ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಆರೋಗ್ಯವಂತ ಯುವ ಜನತೆ ಅಗತ್ಯ ಎಂಬ ಸಂದೇಶವನ್ನು ಸಾರಿದ ಈ ರನ್, ವಿದ್ಯಾರ್ಥಿಗಳಲ್ಲಿ ಕ್ರೀಡಾಸ್ಫೂರ್ತಿ ಮತ್ತು ಆರೋಗ್ಯದ ಕುರಿತಾದ ಜಾಗೃತಿಯನ್ನು ಮೂಡಿಸುವಲ್ಲಿ ಯಶಸ್ವಿಯಾಯಿತು.

# ಮಾನವ ಕಳ್ಳಸಾಗಣೆ ಘೋರ ಅಪರಾಧ: ನ್ಯಾ.ಸಿದ್ದರಾಮಪ್ಪ

**ರಾಯಚೂರು, ಆ. 2:** 21ನೇ ಶತಮಾನದಲ್ಲಿ ನಾವು ತಂತ್ರಜ್ಞಾನ, ವಿಜ್ಞಾನ ಮತ್ತು ಆರ್ಥಿಕತೆಯಲ್ಲಿ ಮುನ್ನಡೆ ಸಾಧಿಸಿದ್ದರೂ, ಮಾನವೀಯತೆಯನ್ನು ತಲೆತಗ್ಗಿಸುವಂತಹ ಘೋರ ಅಪರಾಧವು ಸಮಾಜದಲ್ಲಿ ಇಂದಿಗೂ ಜೀವಂತವಾಗಿದೆ ಎಂದು ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಿದ್ದರಾಮಪ್ಪ ಕಲ್ಯಾಣರಾವ್ ಹೇಳಿದರು.




ಇಲ್ಲಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿ.ಪಂ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಮಹಿಳಾ ಸಬಲೀಕರಣ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಮಾನವ ಕಳ್ಳ ಸಾಗಾಣಿಕೆ ತಡೆ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಾನವ ಕಳ್ಳ ಸಾಗಾಣಿಕೆಗೆ ಬಡತನ ಮತ್ತು ನಿರುದ್ಯೋಗವೇ ಕಾರಣ. ಉತ್ತಮ ಕೆಲಸ ಮತ್ತು ಹೆಚ್ಚಿನ ಆದಾಯದ ಆಮಿಷವೊಡ್ಡಿ ಗ್ರಾಮೀಣ ಹಾಗೂ ಬಡ ಕುಟುಂಬಗಳ ಮಹಿಳೆಯರನ್ನು ಸುಲಭವಾಗಿ ವಂಚಿಸಲಾಗುತ್ತದೆ. ಮಹಿಳೆಯರು ಮತ್ತು ಹೆಣ್ಣುಮಕ್ಕಳ ಕಳ್ಳ ಸಾಗಾಣಿಕೆ ಮಾಡುವುದು ಶಿಕ್ಷಾರ್ಹ ಅಪರಾಧ. ಆಮಿಷ, ವಂಚನೆ, ಬೆದರಿಕೆ ಅಥವಾ ಬಲವಂತದಿಂದ ಮಹಿಳೆಯರ ಒಪ್ಪಿಗೆಯಿಲ್ಲದೆ ಬೇರೆ ಸ್ಥಳಕ್ಕೆ ಕರೆದೊಯ್ದು, ಲೈಂಗಿಕ ಶೋಷಣೆ, ಜೀತದಾಳು ಕೆಲಸ, ಬಲವಂತದ ಮದುವೆ ಅಥವಾ ಅಂಗಾಂಗ ಮಾರಾಟಕ್ಕೆ ಒಳಪಡಿಸುವುದೇ ಮಹಿಳೆಯರ ಅಕ್ರಮ ಸಾಗಾಣಿಕೆಯಾಗಿದೆ ಎಂದು ತಿಳಿಸಿದರು.

ಮಾನವ ಕಳ್ಳ ಸಾಗಾಣಿಕೆಗೆ ವಿರೋಧಿಸಬೇಕು. ಪ್ರತಿಯೊಬ್ಬರೂ ತಮ್ಮ ಸುತ್ತ ಇಂತಹ ಚಟುವಟಿಕೆಗಳು ಕಂಡರೆ ತಕ್ಷಣ ಪೊಲೀಸ್ ಇಲಾಖೆಗೆ ಮಾಹಿತಿ ನೀಡಬೇಕು. ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆಗೆ ಸಹಕಾರ, ಪ್ರೋತ್ಸಾಹ ನೀಡುವವರಿಗೂ ಕಠಿಣ ಶಿಕ್ಷೆ ಇದೆ ಎಂದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ಹರೀಶ್ ಜಿ. ಮಾತನಾಡಿ, ಮಾನವ ಕಳ್ಳ ಸಾಗಾಣಿಕೆ ಶಿಕ್ಷಾರ್ಹ ಅಪರಾಧ. ಅದನ್ನು ವಿರೋಧಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಮಹಿಳೆಯರ ಮತ್ತು ಮಕ್ಕಳ ವಿರುದ್ಧ ಅನೈತಿಕ ಚಟುವಟಿಕೆಗಳು ಕಂಡರೆ ಸಾರ್ವಜನಿಕರು ಪೊಲೀಸ್ ಇಲಾಖೆಗೆ ಮಾಹಿತಿ ನೀಡಿ ಅಥವಾ ತುರ್ತು ಸಹಾಯವಾಣಿ ಸಂಖ್ಯೆಗೆ ಮತ್ತು ಮಹಿಳಾ ಸಹಾಯ ವಾಣಿಗೆ ಕರೆ ಮಾಡಿ ಮಾಹಿತಿ ನೀಡಬೇಕು ಎಂದು ಹೇಳಿದರು.

ಮಕ್ಕಳ ಕಳ್ಳ ಸಾಗಾಣಿಕೆಯಲ್ಲಿ ಸಿಲುಕಿಕೊಂಡಿರುವ ಮಹಿಳೆಯರ ಮತ್ತು ಮಕ್ಕಳ ರಕ್ಷಣೆಗೆ ನಮ್ಮ ಪೊಲೀಸ್ ಇಲಾಖೆ ಸದಾಕಾಲ ಶ್ರಮಿಸುತ್ತಿದೆ. ಪ್ರತಿಯೊಬ್ಬ ನಾಗರಿಕನ ಸಾಮಾಜಿಕ ಹೊಣೆಗಾರಿಕೆ ನಮ್ಮ ಸುತ್ತಮುತ್ತ ಶಂಕಾಸ್ಪದ ಚಟುವಟಿಕೆಗಳು ಕಂಡರೆ ತಕ್ಷಣವೇ ಪೊಲೀಸರಿಗೆ ತಿಳಿಸಬೇಕು. ಅಲ್ಲದೆ ಮಹಿಳೆಗೆ ಸೂಕ್ತ ಗೌರವ ಮತ್ತು ಸುರಕ್ಷತೆ ಸಿಕ್ಕಾಗ ಮಾತ್ರ ಸಮಾಜದ ನೈಜ ಅಭಿವೃದ್ಧಿ ಸಾಧ್ಯ ಎಂದು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಶರಣಮ್ಮ, ಮಹಿಳಾ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಮಂಜುನಾಥ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಭಿವೃದ್ಧಿ ಅಧಿಕಾರಿ ಎಂ.ಡಿ.ಗೋಕುಲ್ ಹುಸೇನ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ವೆಂಕಟೇಶ ದೇಸಾಯಿ, ಸರಸ್ವತಿ, ಕಾನೂನು ನೆರವು,ಅಭೀರಕ್ಷಕ ಗಣೇಶ್ ಮಾಲಿ ಪಾಟೀಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧೀಕ್ಷಕ ಚಾಮರಾಜ, ಮಿಷನ್ ಶಕ್ತಿ ಸಂಯೋಜಕ ಬಾವಸಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜೆಂಡರ್ ತಜ್ಞೆ ಗಿರಿಜವ್ವ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿ ಉಪಸ್ಥಿತರಿದ್ದರು.

## ಆಷಾಢೋತ್ಸವದ ಅಂಗವಾಗಿ, ಸಂಭ್ರಮದ ಪಾಂಡುರಂಗ ಪಲ್ಲಕ್ಕಿ, ದಹಿ ಹಂಡಿ ಉತ್ಸವ

**ಬೀದರ್, ಆ. 2:** ನಗರದಲ್ಲಿ ಆಷಾಡೋತ್ಸವದ ಅಂಗವಾಗಿ ಸಡಗರ, ಸಂಭ್ರಮದ ನಡುವೆ ಚೌಬಾರದ ಪಾಂಡುರಂಗ ದೇವಸ್ಥಾನದಲ್ಲಿ ಆಷಾಢ ಸಪ್ತಾಹ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.



ದೇವಸ್ಥಾನದಲ್ಲಿ ಪಾಂಡುರಂಗನಿಗೆ ವಿಶೇಷ ಪೂಜೆ ನೆರವೇರಿಸಿ, ನೈವೇದ್ಯ ಸಮರ್ಪಿಸಲಾಯಿತು. ಬೆಳಿಗ್ಗೆಯಿಂದಲೇ ದೇವಸ್ಥಾನದಲ್ಲಿ ವಿಶೇಷಪೂಜೆ, ಪಂಚಾಮೃತ ಅಭಿಷೇಕ, ತುಳಸಿ ಅರ್ಚನೆ, ವೇದ ಮಂತ್ರೋಚ್ಚಾರಣೆ, ಅಲಂಕಾರ ಸೇವೆ ಹಾಗೂ ಮಹಾಮಂಗಳಾರತಿ ನೆರವೇರಿತು. ವಿವಿಧ ಕಡೆಗಳಿಂದ ಬಂದು ಭಕ್ತರು ದೇವರ ದರ್ಶನ ಪಡೆದರು. ಪ್ರಸಾದ ವ್ಯವಸ್ಥೆ ಕೂಡ ಮಾಡಲಾಯಿತು.

ಸಮಾರೋಪದ ಅಂಗವಾಗಿ ವಿಶೇಷ ಪೂಜೆ, ಪ್ರಾರ್ಥನೆ, ಪಲ್ಲಕ್ಕಿ ಉತ್ಸವ, ದಹಿ ಹಂಡಿ, ಹರಿನಾಮ ಸಂಕೀರ್ತನೆ, ವಿವಿಧ ಭಜನಾ ಮಂಡಳಿಗಳ ಭಜನೆ, ಯುವಕ–ಯುವತಿಯರ ಫುಗಡಿ ನೃತ್ಯ ಜರುಗಿತು.

ಮಧ್ಯಾಹ್ನ ಪಾಂಡುರಂಗನ ಉತ್ಸವಮೂರ್ತಿಯನ್ನು ಹೂವಿನಿಂದ ಅಲಂಕರಿಸಿದ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ, ಮೆರವಣಿಗೆ ಮಾಡಲಾಯಿತು.

ಚೌಬಾರದಿಂದ ಆರಂಭವಾದ ಪಲ್ಲಕ್ಕಿ ಉತ್ಸವ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿತು. ಇದರೊಟ್ಟಿಗೆ ಭಕ್ತರು ಕೂಡ ಹೆಜ್ಜೆಹಾಕಿದರು. ಮೆರವಣಿಗೆ ಸಾಗಿದ ಮಾರ್ಗದುದ್ದಕ್ಕೂ ಭಕ್ತರು ಹೂವಿನ ಮೆಗರೆದರು.

# ಇರಾನ್ ಮೇಲಿನ ಅಮೆರಿಕದ ಸಂಘರ್ಷ ಕೊನೆಗೊಳಿಸಲು 'ತ್ವರಿತ' ಒಪ್ಪಂದದ ಮೇಲೆ ವಿರಾಮ

**ವಾಷಿಂಗ್ಟನ್, ಆ.2:** ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣವಾಗಿ ತೆರೆಯುವುದನ್ನು ಒಳಗೊಂಡ ಐದು ತಿಂಗಳ ಸಂಘರ್ಷವನ್ನು ಕೊನೆಗೊಳಿಸುವ ಸಂಭಾವ್ಯ ಒಪ್ಪಂದದ ಕಡೆಗೆ "ಪ್ರಗತಿ"ಯನ್ನು ಉಲ್ಲೇಖಿಸಿ, ಇರಾನ್ ಮೇಲಿನ ಅಮೆರಿಕದ ಯೋಜಿತ ದಾಳಿಗಳನ್ನು ರದ್ದುಗೊಳಿಸಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದರು, ಆದರೆ ವಿರಾಮವು ಟೆಹ್ರಾನ್ ವಾಷಿಂಗ್ಟನ್ನೊಂದಿಗೆ ಒಪ್ಪಂದವನ್ನು ತ್ವರಿತವಾಗಿ ತಲುಪುವುದರ ಮೇಲೆ ಷರತ್ತುಬದ್ಧವಾಗಿದೆ ಎಂದು ಸ್ಪಷ್ಟಪಡಿಸಿದರು. ಈ ವಾರಾಂತ್ಯದಲ್ಲಿ ಇರಾನ್ ವಿರುದ್ಧ ಹೊಸ ಮಿಲಿಟರಿ ಕ್ರಮ ಪ್ರಾರಂಭವಾಗಬಹುದು ಎಂದು ಟ್ರಂಪ್ ಎಚ್ಚರಿಸಿದ ಒಂದು ದಿನದ ನಂತರ ಈ ಘೋಷಣೆಯು ಅಮೆರಿಕ ನೀತಿಯಲ್ಲಿ ತೀಕ್ಷ್ಣವಾದ ಬದಲಾವಣೆಯನ್ನು ಗುರುತಿಸಿದೆ. ಸಾಮಾಜಿಕ ಮಾಧ್ಯಮದ ಹೇಳಿಕೆಯಲ್ಲಿ, ಟ್ರಂಪ್ ಅಮೆರಿಕ ಮಿಲಿಟರಿ ಕ್ರಮವನ್ನು ಪ್ರಾರಂಭಿಸಲು ಸಿದ್ಧವಾಗಿದೆ ಆದರೆ ಇರಾನ್ ಮತ್ತು ಪ್ರಾದೇಶಿಕ ದೇಶಗಳ ವಿನಂತಿಗಳ ನಂತರ ಅದನ್ನು ವಿಳಂಬಗೊಳಿಸಲು ಒಪ್ಪಿಕೊಂಡಿದೆ ಎಂದು ಹೇಳಿದರು. ಅಮೆರಿಕ ಲಾಕ್ ಆಗಿದೆ ಮತ್ತು ಹೊರೆಯಾಗಿದೆ ಮತ್ತು ಇಸ್ಲಾಮಿಕ್ ಗಣರಾಜ್ಯ ಇರಾನ್ ವಿರುದ್ಧ ಹೋಗಲು ಸಿದ್ಧವಾಗಿದೆ" ಎಂದು ಟ್ರಂಪ್ ಹೇಳಿದರು, ಇರಾನ್ ಮತ್ತು "ಇತರ ಮಧ್ಯಪ್ರಾಚ್ಯ ದೇಶಗಳು" "ಒಪ್ಪಂದದ ಪರಿಧಿಯನ್ನು ಒಪ್ಪಿಕೊಂಡಿರುವ ಯಾವುದೇ ದಾಳಿಯನ್ನು ತಡೆಹಿಡಿಯಲು" ಅವರನ್ನು ಒತ್ತಾಯಿಸಿವೆ ಎಂದು ಹೇಳಿದರು. ಟ್ರಂಪ್ ಪ್ರಕಾರ, ಪ್ರಸ್ತಾವಿತ ಒಪ್ಪಂದವು "ಹಾರ್ಮುಜ್ ಜಲಸಂಧಿಯ ತಕ್ಷಣದ, ಸಂಪೂರ್ಣ ಮತ್ತು ಸಂಪೂರ್ಣ ತೆರೆಯುವಿಕೆ ಮತ್ತು ಇರಾನ್ನ ಪರಮಾಣು ಬೆದರಿಕೆಯನ್ನು ಕೊನೆಗೊಳಿಸುವುದನ್ನು ಒಳಗೊಂಡಿರುತ್ತದೆ." "ಈ ವಿನಂತಿಯ ಆಧಾರದ ಮೇಲೆ, ಪ್ರಪಂಚದ ಭವಿಷ್ಯದ ಪ್ರಯೋಜನಕ್ಕಾಗಿ ಮತ್ತು ಅದೇ ರೀತಿ, ಯಶಸ್ವಿ ಮತ್ತು ಸಮೃದ್ಧ ಇರಾನ್ನ ಉಳಿವಿಗಾಗಿ, ದಾಳಿಯನ್ನು ರದ್ದುಗೊಳಿಸಲು ನಾನು ಒಪ್ಪಿಕೊಂಡಿದ್ದೇನೆ, ಇದು ತ್ವರಿತವಾಗಿ ಒಪ್ಪಂದವನ್ನು ಮಾಡಿಕೊಳ್ಳಲು ಸಾಧ್ಯವಾಗುತ್ತದೆ" ಎಂದು ಅವರು ಹೇಳಿದರು. ಪ್ರಸ್ತಾವಿತ ಒಪ್ಪಂದವನ್ನು ಅಂತಿಮಗೊಳಿಸಲು ಪ್ರಯತ್ನಗಳು ಮುಂದುವರೆದಿರುವಾಗ ಮಿಲಿಟರಿ ಕಾರ್ಯಾಚರಣೆಗಳನ್ನು ವಿರಾಮಗೊಳಿಸುವಲ್ಲಿ ಇಸ್ರೇಲ್ ಅಮೆರಿಕ ಜೊತೆ ಸೇರಲು ಒಪ್ಪಿಕೊಂಡಿದೆ ಎಂದು ಟ್ರಂಪ್ ಹೇಳಿದರು. ಇರಾನ್ ಇನ್ನೂ ಘೋಷಣೆಗೆ ಪ್ರತಿಕ್ರಿಯಿಸಿಲ್ಲ. ಮಿಲಿಟರಿ ಕ್ರಮವನ್ನು ವಿರಾಮಗೊಳಿಸುವ ನಿರ್ಧಾರವು ಮತ್ತೊಂದು ಸುತ್ತಿನ ತೀವ್ರವಾದ ಪ್ರಾದೇಶಿಕ ರಾಜತಾಂತ್ರಿಕತೆಯ



ನಂತರ ಬಂದಿದೆ, ಸಂಘರ್ಷದ ಸಮಯದಲ್ಲಿ ಪದೇ ಪದೇ ಹೊರಹೊಮ್ಮಿದ ಮಾದರಿಯಾಗಿದೆ, ಮಧ್ಯಪ್ರಾಚ್ಯ ದೇಶಗಳ ಉದ್ವಿಗ್ನತೆಯನ್ನು ತಗ್ಗಿಸಲು ಕೊನೆಯ ನಿಮಿಷದ ಪ್ರಯತ್ನಗಳಿಗೆ ದಾರಿ ಮಾಡಿಕೊಟ್ಟವು. ಈ ಬಾರಿಯೂ ಸಹ, ವಾಷಿಂಗ್ಟನ್ ಇರಾನ್ ಮೇಲೆ ಹೊಸ ಸುತ್ತಿನ ದಾಳಿಗಳನ್ನು ಸಿದ್ಧಪಡಿಸುತ್ತಿದೆ ಎಂಬ ವರದಿಗಳು ಹೊರಹೊಮ್ಮಿದ ನಂತರ ಪ್ರಮುಖ ಪ್ರಾದೇಶಿಕ ಆಟಗಾರರನ್ನು ಒಳಗೊಂಡ ರಾಜತಾಂತ್ರಿಕ ನಿಶ್ಚಿತಾರ್ಥದ ನಂತರ ಈ ಕ್ರಮವು ನಡೆಯಿತು. ಒಂದು ದಿನದ ಹಿಂದೆ, ಟ್ರಂಪ್ ಮಿಲಿಟರಿ ಕ್ರಮ ಸನ್ನಿಹಿತವಾಗಿದೆ ಎಂದು ಸೂಚಿಸಿದ್ದರು, ಶುಕ್ರವಾರ ನಡೆದ ಕ್ಯಾಬಿನೆಟ್ ಸಭೆಯಲ್ಲಿ ಅಮೆರಿಕವು ಇರಾನ್ ಮೇಲೆ ಮತ್ತೆ ದಾಳಿ ಮಾಡಲು ಸಿದ್ಧವಾಗಿದೆ ಎಂದು ಹೇಳಿದ್ದರು. "ನಾವು ಅವರನ್ನು ತುಂಬಾ ಕಠಿಣವಾಗಿ ಹೊಡೆಯುತ್ತೇವೆ" ಎಂದು ಅವರು ಹೇಳಿದ್ದರು. "ಒಂದು ಹಂತದಲ್ಲಿ, ಅವರು 'ನಾವು ಇನ್ನು ಮುಂದೆ ಅದನ್ನು ಸಹಿಸಲು ಸಾಧ್ಯವಿಲ್ಲ' ಎಂದು ಹೇಳಲಿದ್ದಾರೆ." ಚರ್ಚೆಗಳ ಬಗ್ಗೆ ಪರಿಚಿತರಾಗಿರುವ ಹಲವಾರು ಜನರನ್ನು ಉಲ್ಲೇಖಿಸಿ, ಟ್ರಂಪ್ ಶನಿವಾರ ಸೌದಿ ಕ್ರೌನ್ ಪ್ರಿನ್ಸ್ ಮೊಹಮ್ಮದ್ ಬಿನ್ ಸಲ್ಮಾನ್ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದರು, ಅವರು ವಿಶಾಲ ಪ್ರಾದೇಶಿಕ ಯುದ್ಧವನ್ನು ತಪ್ಪಿಸುವ ರಿಯಾದ್ನ ಬಯಕೆಯನ್ನು ಒತ್ತಿ ಹೇಳಿದರು ಮತ್ತು ಇರಾನ್ ಮೇಲೆ ಸಂಭವನೀಯ ಹೊಸ ಅಮೆರಿಕ ದಾಳಿಗಳ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಗಲ್ಫ್ ಇಂಧನ ಮೂಲಸೌಕರ್ಯವನ್ನು ಗುರಿಯಾಗಿಸುವ ಮೂಲಕ ಅಥವಾ ವಿಶ್ವದ ಅತ್ಯಂತ ನಿರ್ಣಾಯಕ ತೈಲಸಾಗಣೆ ಮಾರ್ಗಗಳಲ್ಲಿ ಒಂದಾದ ಹಾರ್ಮುಜ್ ಜಲಸಂಧಿಯ ಮೂಲಕ ಸಾಗಣೆಯನ್ನು ಅಡ್ಡಿಪಡಿಸುವ ಮೂಲಕ ಟೆಹ್ರಾನ್ ಪ್ರತೀಕಾರ ತೀರಿಸಿಕೊಳ್ಳಬಹುದು ಎಂದು ಸೌದಿ ನಾಯಕತ್ವವು ವಿಶೇಷವಾಗಿ ಚಿಂತಿತವಾಗಿದೆ ಎಂದು ಹೇಳಲಾಗುತ್ತದೆ. ಕತಾರ್ ಮತ್ತು ಪಾಕಿಸ್ತಾನ ಸೇರಿದಂತೆ ಮಧ್ಯವರ್ತಿ ರಾಷ್ಟ್ರಗಳ ಅಧಿಕಾರಿಗಳು ಮತ್ತೊಂದು ಉಲ್ಬಣವನ್ನು ತಡೆಯಲು ತುರ್ತಾಗಿ ಕೆಲಸ ಮಾಡುತ್ತಿದ್ದಾರೆ, ಟ್ರಂಪ್ ಅವರ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್ ಸೇರಿದಂತೆ ಇರಾನಿನ ಮತ್ತು ಯುಎಸ್ ಅಧಿಕಾರಿಗಳೊಂದಿಗೆ ಚರ್ಚೆ ನಡೆಸುತ್ತಿದ್ದಾರೆ. ಹಾರ್ಮುಜ್ ಜಲಸಂಧಿಯ ಮೂಲಕ ವಾಣಿಜ್ಯ ಸಾಗಣೆಯನ್ನು ಸುರಕ್ಷಿತವಾಗಿ ಪುನರಾರಂಭಿಸಲು ಅನುವು ಮಾಡಿಕೊಡುವ ವ್ಯವಸ್ಥೆಯನ್ನು ಸುಗಮಗೊಳಿಸುವುದು ಒಂದು ತಕ್ಷಣದ ಉದ್ದೇಶವಾಗಿದೆ. ಈ ಜಲಮಾರ್ಗವು ರಾಜತಾಂತ್ರಿಕ ಪ್ರಯತ್ನದ ಕೇಂದ್ರಬಿಂದುವಾಗಿದೆ, ಸೌದಿ ಅರೇಬಿಯಾ ಮತ್ತು ಇರಾನ್ ಎರಡೂ ಅದರ ಅಡಚಣೆಯಿಂದ ಹೆಚ್ಚುತ್ತಿರುವ ಆರ್ಥಿಕ ಒತ್ತಡವನ್ನು ಎದುರಿಸುತ್ತಿವೆ. ಸೌದಿ ಅರೇಬಿಯಾದ ಹೆಚ್ಚಿನ ತೈಲರಫ್ತು ಈ ಜಲಸಂಧಿಯ ಮೂಲಕ ಹಾದು ಹೋಗುತ್ತದೆ, ಇದರಿಂದಾಗಿ ರಿಯಾದ್ಗೆ ಅದರ ಪುನರಾರಂಭವು ಕಾರ್ಯತಂತ್ರದ ಆದ್ಯತೆಯಾಗಿದೆ. ಸೌದಿಯ ಆರ್ಥಿಕತೆಯು ಯುದ್ಧದಿಂದ ಪ್ರಭಾವಿತವಾಗಿರುವುದರಿಂದ ಮತ್ತು ವಾಷಿಂಗ್ಟನ್ ಸೌದಿ ರಾಜತಾಂತ್ರಿಕತೆಯ ಮೇಲೆ ಅವಲಂಬಿತವಾಗಿರುವುದರಿಂದ, ಮಿಲಿಟರಿ ಕ್ರಮವನ್ನು ಮುಂದೂಡುವ ಟ್ರಂಪ್ ನಿರ್ಧಾರದಲ್ಲಿ ಸೌದಿ ರಾಜತಾಂತ್ರಿಕತೆ ನಿರ್ಣಾಯಕ ಪಾತ್ರ ವಹಿಸಿರಬಹುದು ಎಂದು ವಿಶ್ಲೇಷಕರು ಹೇಳಿದ್ದಾರೆ. ಸಂಘರ್ಷದಲ್ಲಿ ಭಾಗಿಯಾಗಿರುವ ಎರಡೂ ದೇಶಗಳು ಉಲ್ಬಣಗೊಳ್ಳುವುದನ್ನು ತಪ್ಪಿಸುವುದು ಮತ್ತು ತಮ್ಮ ಆರ್ಥಿಕತೆಯ ಹಿತಾಸಕ್ತಿಗಳಲ್ಲಿ ರಾಜತಾಂತ್ರಿಕ ಮಾರ್ಗವನ್ನು ಅನುಸರಿಸುವುದು ವಿವೇಕಯುತವಾಗಿರುತ್ತದೆ.

## ಹಾರ್ಮುಜ್ ಜಲಸಂಧಿ ಮತ್ತೆ ತೆರೆಯುವ ಒಪ್ಪಂದಕ್ಕೆ ಇರಾನ್ ನಕಾರ

**ಟೆಹ್ರಾನ್,ಆ.2:** ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯಲು ಇರಾನ್ ಯಾವುದೇ ಒಪ್ಪಂದಕ್ಕೆ ಬಂದಿಲ್ಲ ಎಂದು ಐಆರ್‌ಜಿಸಿ–ಸಂಬಂಧಿತ ಫಾರ್ಸ್ ನ್ಯೂಸ್ ಭಾನುವಾರ ವರದಿ ಮಾಡಿದೆ, ಟೆಹ್ರಾನ್‌ನ ಪರಮಾಣು ಸಮಾಲೋಚನಾ ತಂಡಕ್ಕೆ ಹತ್ತಿರವಿರುವ ಮೂಲವನ್ನು ಉಲ್ಲೇಖಿಸಿ, ಒಂದು ಪ್ರಗತಿಯು ಯೋಜಿತ ಯುಎಸ್ ಮಿಲಿಟರಿ ದಾಳಿಗಳನ್ನು ತಪ್ಪಿಸಲು ಸಹಾಯ ಮಾಡಿದೆ ಎಂಬ ವರದಿಗಳನ್ನು ವಿರೋಧಿಸುತ್ತದೆ. ಅಮೆರಿಕದ "ಪ್ರತಿಕೂಲ ಕ್ರಮಗಳು" ಎಂದು ಅದು ವಿವರಿಸಿದ್ದು ಮುಂದುವರಿಯುವವರೆಗೆ ಕಾರ್ಯತಂತ್ರದ ಜಲಮಾರ್ಗ ಮುಚ್ಚಲ್ಪಡುತ್ತದೆ ಎಂದು ಮೂಲಗಳು ತಿಳಿಸಿವೆ, ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ನೌಕಾಪಡೆಯ ಅನುಮತಿಯೊಂದಿಗೆ ಗೊತ್ತುಪಡಿಸಿದ ಮಾರ್ಗದ ಮೂಲಕ ಮಾತ್ರ ಹಡಗುಗಳನ್ನು ಸಾಗಿಸಲು ಅನುಮತಿಸಲಾಗುತ್ತದೆ ಎಂದು ಸೇರಿಸಿದೆ. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಯುಎಸ್–ಕತಾರಿ ರಾಜಿಯನ್ನು ಒಪ್ಪಿಕೊಂಡಿದ್ದಾರೆ ಎಂದು ಇಸ್ರೇಲ್ನ ಚಾನೆಲ್ 12 ವರದಿ ಮಾಡಿದ ನಂತರ ಈ ಹೇಳಿಕೆ




ಬಂದಿದೆ, ಅದರ ಅಡಿಯಲ್ಲಿ ಹಡಗುಗಳು ಇರಾನಿನ ಪ್ರಾದೇಶಿಕ ನೀರಿನ ಮೂಲಕ ಪರ್ಷಿಯನ್ ಕೊಲ್ಲಿಯನ್ನು ಪ್ರವೇಶಿಸುತ್ತವೆ ಮತ್ತು ಒಮಾನಿ ನೀರಿನ ಮೂಲಕ ನಿರ್ಗಮಿಸುತ್ತವೆ.

ದೇಶದ ಮಾತುಕತೆ ತಂಡಕ್ಕೆ ಹತ್ತಿರವಿರುವ ಮೂಲವನ್ನು ಉಲ್ಲೇಖಿಸಿ ಇರಾನ್‌ನ ಫಾರ್ಸ್ ಸುದ್ದಿಸಂಸ್ಥೆ ವರದಿಯನ್ನು ತಿರಸ್ಕರಿಸಿತು, ಅಂತಹ ಯಾವುದೇ ಒಪ್ಪಂದವನ್ನು ತಲುಪಿಲ್ಲ ಎಂದು ಹೇಳಿದೆ. ಅಮೆರಿಕದ "ಪ್ರತಿಕೂಲ ಮತ್ತು ದುರುದ್ದೇಶಪೂರಿತ ಕೃತ್ಯಗಳು" ಮುಂದುವರಿಯುವವರೆಗೆ ಹಾರ್ಮುಜ್ ಜಲಸಂಧಿಯು ಮುಚ್ಚಿರುತ್ತದೆ ಎಂದು ಮಿಲಿಟರಿ ಮೂಲವೊಂದು ಹೇಳಿರುವುದಾಗಿ ಫಾರ್ಸ್ ಉಲ್ಲೇಖಿಸಿದೆ.

ಇರಾನ್ ಗೊತ್ತುಪಡಿಸಿದ ಮಾರ್ಗಗಳ ಮೂಲಕ ಮತ್ತು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ನೌಕಾಪಡೆಯ ಸಮನ್ವಯ ಮತ್ತು ಅನುಮತಿಯೊಂದಿಗೆ ಮಾತ್ರ ಹಡಗುಗಳನ್ನು ಸಾಗಿಸಲು ಅನುಮತಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ. ಕಾರ್ಯತಂತ್ರದ ಜಲಮಾರ್ಗದ ಕುರಿತು ಇರಾನ್‌ನ ನೀತಿಯು ಬದಲಾಗದೆ ಉಳಿದಿದೆ ಎಂದು ಮೂಲಗಳು ತಿಳಿಸಿವೆ. ಫೆಬ್ರವರಿ ಅಂತ್ಯದಲ್ಲಿ ಇರಾನ್ ಪ್ರದೇಶದ ಮೇಲೆ ಯುಎಸ್ ಮತ್ತು ಇಸ್ರೇಲಿ ಜಂಟಿ ದಾಳಿಗಳ ನಂತರ ಇರಾನ್ ಹಾರ್ಮುಜ್ ಜಲಸಂಧಿಯ ಮೂಲಕ ನೌಕಾಯಾನದ ಮೇಲಿನ ನಿರ್ಬಂಧಗಳನ್ನು ಬಿಗಿಗೊಳಿಸಿತು, ಇದು ಎರಡೂ ದೇಶಗಳಿಗೆ ಸಂಬಂಧಿಸಿದ ಹಡಗುಗಳ ಚಲನೆಯನ್ನು ಸೀಮಿತಗೊಳಿಸಿತು.

ಕೊಲ್ಲಿಯಲ್ಲಿ ವಾಣಿಜ್ಯ ಸಾಗಣೆಗೆ ಬೆದರಿಕೆ ಹಾಕುವ ಟೆಹ್ರಾನ್‌ನ ಸಾಮರ್ಥ್ಯವನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿರುವ ಇರಾನ್ ಸೌಲಭ್ಯಗಳ ಮೇಲೆ ತನ್ನ ಮಿಲಿಟರಿ ದಾಳಿಗಳನ್ನು ನಡೆಸಲಾಗಿದೆ ಎಂದು ಅಮೆರಿಕ ಹೇಳಿದೆ, ಆದರೆ ಇರಾನ್ ಈ ಪ್ರದೇಶದಲ್ಲಿನ ಯುಎಸ್ ಮಿಲಿಟರಿ ನೆಲೆಗಳು ಮತ್ತು ಸೌಲಭ್ಯಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳೊಂದಿಗೆ ಪ್ರತಿಕ್ರಿಯಿಸಿದೆ.

## ಜಪಾನ್ ಭೂಕಂಪ: ಸಾವಿನ ಸಂಖ್ಯೆ 38ಕ್ಕೆ ಏರಿಕೆ



**ಟೋಕಿಯೊ, ಆ.2:** ಕಳೆದ ವಾರ ಜಪಾನ್ನ ನೈಋತ್ಯ ಕುಮಾಮೊಟೊ ಪ್ರಾಂತ್ಯದಲ್ಲಿ ಸಂಭವಿಸಿದ ಪ್ರಬಲ ಭೂಕಂಪದಲ್ಲಿ ಸಾವನ್ನಪ್ಪಿದವರ ಸಂಖ್ಯೆ 38 ಕ್ಕೆ ಏರಿದೆ, ಆದರೆ ಸಾವಿರಾರು ಜನರು ಪರಿಹಾರ ಶಿಬಿರಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆ. ಜಪಾನ್‌ನ ಸಾರ್ವಜನಿಕ ಪ್ರಸಾರಕ ಓಊಏ ಭಾನುವಾರದ ವರದಿಯ ಪ್ರಕಾರ, ಅಧಿಕಾರಿಗಳು ಇಲ್ಲಿಯವರೆಗೆ 36 ಸಾವುಗಳನ್ನು ದೃಢಪಡಿಸಿದ್ದಾರೆ, ಆದರೆ ಕಳೆದ ಮಂಗಳವಾರ ಸಂಭವಿಸಿದ 7.1 ತೀವ್ರತೆಯ ಭೂಕಂಪದಿಂದ ಅವು ಸಂಭವಿಸಿವೆಯೇ ಎಂದು ನಿರ್ಧರಿಸಲು ಇತರ ಎರಡು ಸಾವುನೋವುಗಳನ್ನು ತನಿಖೆ ಮಾಡಲಾಗುತ್ತಿದೆ. ಭೂಕಂಪದ ನಂತರ 9,200 ಕ್ಕೂ ಹೆಚ್ಚು ಜನರು ಪ್ರಸ್ತುತ 210 ಸ್ಥಳಾಂತರಿಸುವ ಕೇಂದ್ರಗಳಲ್ಲಿ ವಾಸಿಸುತ್ತಿದ್ದಾರೆ. 3,400 ಕ್ಕೂ ಹೆಚ್ಚು ಮನೆಗಳು ಹಾನಿಗೊಳಗಾಗಿವೆ, ಆದರೆ ಕುಮಾಮೊಟೊದಾದ್ಯಂತ 69,000ಕ್ಕೂ ಹೆಚ್ಚು ಮನೆಗಳು ಮತ್ತು ವ್ಯಾಪಾರ ಸಂಸ್ಥೆಗಳಲ್ಲಿ ನೀರು ಸರಬರಾಜು ಅಸ್ತವ್ಯಸ್ತವಾಗಿದೆ. ಭೂಕಂಪದಿಂದ ಪ್ರಭಾವಿತವಾಗಿರುವ ವೈದ್ಯಕೀಯ ಸೌಲಭ್ಯಗಳು ಕ್ರಮೇಣ ಸಾಮಾನ್ಯ ಸೇವೆಗಳನ್ನು ಪುನಃಸ್ಥಾಪಿಸಲು ಕೆಲಸ ಮಾಡುತ್ತಿವೆ. ತೀವ್ರ ತಾಪಮಾನದಿಂದಾಗಿ ಶಾಖದ ಹೊಡೆತಕ್ಕೆ ಸಂಬಂಧಿಸಿದ ರೋಗಲಕ್ಷಣಗಳೊಂದಿಗೆ ಶನಿವಾರ ಸುಮಾರು 30 ಜನರನ್ನು ಆಸ್ಪತ್ರೆಗಳಿಗೆ ಕರೆದೊಯ್ಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕುಮಾಮೊಟೊದ ಕೆಲವು ಪ್ರದೇಶಗಳಲ್ಲಿ 37 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಿನ ತಾಪಮಾನ ದಾಖಲಾಗಿದೆ. ಹಾನಿಯ ಸಂಪೂರ್ಣ ಮೌಲ್ಯಮಾಪನ ಇನ್ನೂ ಪೂರ್ಣಗೊಂಡಿಲ್ಲ ಮತ್ತು ತಪಾಸಣೆ ಮುಂದುವರಿದಂತೆ ಹಾನಿಗೊಳಗಾದ ಕಟ್ಟಡಗಳ ಸಂಖ್ಯೆ ಹೆಚ್ಚಾಗಬಹುದು ಎಂದು ಆಡಳಿತ ಹೇಳಿದೆ. ಭೂಕಂಪದ ಸ್ವಲ್ಪ ಸಮಯದ ನಂತರ ಸ್ಫೋಟಕ್ಕೆ ಒಳಗಾದ ಏಯಾನ್ ಶಾಪಿಂಗ್ ಮಾಲ್ನಲ್ಲಿ ಶನಿವಾರ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳು ಮುಕ್ತಾಯಗೊಂಡಿವೆ ಎಂದು ಸರ್ಕಾರ ತಿಳಿಸಿದೆ. ಈ ಘಟನೆಯಲ್ಲಿ ಏಳು ಉದ್ಯೋಗಿಗಳು ಸಾವನ್ನಪ್ಪಿದರು, ಇತರ ಐದು ಮಂದಿ ಗಾಯಗೊಂಡರು. ಜಪಾನ್ ಪೆಸಿಫಿಕ್ ಮಹಾಸಾಗರದ "ರಿಂಗ್ ಆಫ್ ಫೈರ್" ಪ್ರದೇಶದಲ್ಲಿದೆ, ಅಲ್ಲಿ ವಿಶ್ವದ 6.0 ಅಥವಾ ಅದಕ್ಕಿಂತ ಹೆಚ್ಚಿನ ತೀವ್ರತೆಯ ಭೂಕಂಪಗಳಲ್ಲಿ ಸುಮಾರು 20 ಪ್ರತಿಶತ ದಾಖಲಾಗಿದೆ.

## ಸಿಂಧೂ ಒಪ್ಪಂದದ ಸೌಹಾರ್ದತೆಯ ಮನೋಭಾವ ನಾಶಪಡಿಸಿದ ಪಾಕಿಸ್ತಾನ

ನವದೆಹಲಿ, ಆಗಸ್ಟ್ 2: ಸಿಂಧೂ ಜಲ ಒಪ್ಪಂದವನ್ನು (ಐಡಬ್ಲ್ಯೂಟಿ) ಸ್ಥಗಿತಗೊಳಿಸುವ ನವದೆಹಲಿಯ ನಿರ್ಧಾರವನ್ನು ಅಮೆರಿಕಕ್ಕೆ ಭಾರತದ ರಾಯಭಾರಿ ವಿನಯ್ ಮೋಹನ್ ಕ್ವಾತ್ರಾ ಸಮರ್ಥಿಸಿಕೊಂಡಿದ್ದಾರೆ, 1960 ರ ಒಪ್ಪಂದವನ್ನು ಸ್ಥಾಪಿಸಿದ ಸೌಹಾರ್ದತೆ ಮತ್ತು ಸ್ನೇಹದ ಮನೋಭಾವವನ್ನು ಪಾಕಿಸ್ತಾನ ಸ್ಥಿರವಾಗಿ ನಾಶಪಡಿಸಿದೆ ಎಂದು ಪ್ರತಿಪಾದಿಸಿದ್ದಾರೆ.

ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ, ಕ್ವಾತ್ರಾ, ಕಳೆದ ಹಲವು ದಶಕಗಳಲ್ಲಿ ಪಾಕಿಸ್ತಾನದ ನಡವಳಿಕೆಯು ಒಪ್ಪಂದದ ಆಧಾರವನ್ನು ದುರ್ಬಲಗೊಳಿಸಿದೆ ಎಂದು ಹೇಳಿದರು, ಜೊತೆಗೆ ಒಪ್ಪಂದದ ಅಡಿಯಲ್ಲಿ ಭಾರತದ ಕಾನೂನುಬದ್ಧ ಹಕ್ಕುಗಳನ್ನು ಇಸ್ಲಾಮಾಬಾದ್ ಅಡ್ಡಿಪಡಿಸುತ್ತಿದೆ ಮತ್ತು ಗಡಿಯಾಚೆಗಿನ ಭಯೋತ್ಪಾದನೆಯನ್ನು ಪ್ರಾಯೋಜಿಸುವುದನ್ನು ಮುಂದುವರೆಸಿದೆ ಎಂದು ಆರೋಪಿಸಿದರು.

ಒಪ್ಪಂದದ ಮುನ್ನುಡಿಯನ್ನು ಉಲ್ಲೇಖಿಸಿ, ಕ್ವಾತ್ರಾ ಒಪ್ಪಂದವನ್ನು "ಸದ್ಭಾವನೆ ಮತ್ತು ಸ್ನೇಹದ ಮನೋಭಾವದಿಂದ" ತೀರ್ಮಾನಿಸಲಾಗಿದೆ ಎಂದು ಸ್ಪಷ್ಟವಾಗಿ ಹೇಳುತ್ತದೆ ಎಂದು ಹೇಳಿದರು.

"ಒಪ್ಪಂದದ ಪೀಠಿಕೆಯು ಅದನ್ನು 'ಸದ್ಭಾವನೆ ಮತ್ತು ಸ್ನೇಹದ ಮನೋಭಾವದಿಂದ'



ತೀರ್ಮಾನಿಸಲಾಗಿದೆ ಎಂದು ಹೇಳುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಯೋಗ್ಯವಾಗಿದೆ. ಪಾಕಿಸ್ತಾನವು ಆ ಸದ್ಭಾವನೆ ಮತ್ತು ಸ್ನೇಹವನ್ನು ಕೆಡವಲು ಅರ್ಧ ಶತಮಾನವನ್ನು ಕಳೆದಿದೆ. ಈ ತಡೆಹಿಡಿಯುವಿಕೆ ಪಾಕಿಸ್ತಾನದ ನಡವಳಿಕೆ ಈಗಾಗಲೇ ನಾಶಪಡಿಸಿದ್ದನ್ನು ಮಾತ್ರ ಒಪ್ಪಿಕೊಳ್ಳುತ್ತದೆ" ಎಂದು ಕ್ವಾತ್ರಾ ಹೇಳಿದರು.

ಸಿಂಧೂ ಜಲ ಒಪ್ಪಂದವನ್ನು ಸ್ಥಗಿತಗೊಳಿಸುವ ಭಾರತದ ನಿರ್ಧಾರವನ್ನು ಟೀಕಿಸಿ ಪಾಕಿಸ್ತಾನವು ಇಸ್ಲಾಮಾಬಾದ್ನಲ್ಲಿ ಸಮ್ಮೇಳನವನ್ನು ಆಯೋಜಿಸಿದ ವಾರಗಳ ನಂತರ ಅವರ ಹೇಳಿಕೆಗಳು ಬಂದಿವೆ. ಈ ಕಾರ್ಯಕ್ರಮದ ಸಂದರ್ಭದಲ್ಲಿ, ಪಾಕಿಸ್ತಾನದ ಮಾಜಿ ವಿದೇಶಾಂಗ ಸಚಿವರು ಸಿಂಧೂ ನದಿ ವ್ಯವಸ್ಥೆಯ ಮೇಲಿನ ಪಾಕಿಸ್ತಾನದ ಬೇಡಿಕೆಗಳನ್ನು ಈಡೇರಿಸದಿದ್ದರೆ ಯುದ್ಧದ ಎಚ್ಚರಿಕೆ ನೀಡಿದರು.

ಅಂತಹ ಹೇಳಿಕೆಗಳಿಗೆ ಪ್ರತಿಕ್ರಿಯಿಸಿದ ಕ್ವಾತ್ರಾ, "ತನ್ನ ಆಂತರಿಕ ಸಮಸ್ಯೆಗಳಿಂದ ಗಮನವನ್ನು ಬೇರೆಡೆ ಸೆಳೆಯಲು ಭಾರತದ ವಿರುದ್ಧ ಯುದ್ಧದ ಬೆದರಿಕೆ ಹಾಕುವುದು ಇಸ್ಲಾಮಾಬಾದ್ಗೆ ಪ್ರಮಾಣಿತ ನೀತಿ ಆಯ್ಕೆಯಾಗಿದೆ" ಎಂದು ಹೇಳಿದರು.

ಪಾಕಿಸ್ತಾನ ಮೂಲದ ಮತ್ತು ವಿಶ್ವಸಂಸ್ಥೆಯಿಂದ ಗೊತ್ತುಪಡಿಸಿದ ಲಷ್ಕರ್–ಎ–ತೈಬಾದ ಭಯೋತ್ಪಾದಕರು ಜಮ್ಮು ಮತ್ತು ಕಾಶ್ಮೀರದಲ್ಲಿ ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ನಡೆಸಿ 25 ಭಾರತೀಯ ಪ್ರಜೆಗಳು ಮತ್ತು ಒಬ್ಬ ನೇಪಾಳಿ ನಾಗರಿಕ ಸೇರಿದಂತೆ 26 ಜನರನ್ನು ಕೊಂದ ಒಂದು ದಿನದ ನಂತರ, ಏಪ್ರಿಲ್ 23, 2025 ರಂದು ಒಪ್ಪಂದವನ್ನು ಸ್ಥಗಿತಗೊಳಿಸುವ ನಿರ್ಧಾರವನ್ನು ಭಾರತ ಘೋಷಿಸಿತು.

ದಾಳಿಯನ್ನು ವಿವರಿಸುತ್ತಾ, ಕ್ವಾತ್ರಾ, "ಲಷ್ಕರ್–ಎ–ತಯ್ಯಿಬಾ ಸಂಘಟನೆಗೆ ಸೇರಿದ ಪಾಕಿಸ್ತಾನಿ ಮತ್ತು ಪಾಕಿಸ್ತಾನ ತರಬೇತಿ ಪಡೆದ ಭಯೋತ್ಪಾದಕರು ಏಪ್ರಿಲ್ 22, 2025 ರಂದು ಭಾರತದ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ನಲ್ಲಿ ಪ್ರವಾಸಿಗರ ಮೇಲೆ ಘೋರ ದಾಳಿ ನಡೆಸಿದರು. ಅವರು 26 ಜನರನ್ನು ಕೊಂದರು – 25 ಭಾರತೀಯ ಪ್ರಜೆಗಳು ಮತ್ತು ಒಬ್ಬ ನೇಪಾಳಿ ಪ್ರಜೆ – ನವೆಂಬರ್ 26, 2008 ರಂದು ಮುಂಬೈನಲ್ಲಿ ನಡೆದ ದಾಳಿಯ ನಂತರ ಭಾರತದಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಅತಿ ಹೆಚ್ಚು ನಾಗರಿಕ ಸಾವುನೋವುಗಳಿಗೆ ಕಾರಣವಾಯಿತು."

1960 ರಲ್ಲಿ ವಿಶ್ವಬ್ಯಾಂಕ್ನ ಮಧ್ಯಸ್ಥಿಕೆಯೊಂದಿಗೆ ಸಹಿ ಹಾಕಲಾದ ಸಿಂಧೂ ಜಲ ಒಪ್ಪಂದವು ಭಾರತ ಮತ್ತು ಪಾಕಿಸ್ತಾನದ ನಡುವೆ ಸಿಂಧೂ ಜಲಾನಯನ ಪ್ರದೇಶದ ಆರು ನದಿಗಳ ಹಂಚಿಕೆಯನ್ನು ನಿಯಂತ್ರಿಸುತ್ತದೆ. ಒಪ್ಪಂದದಡಿಯಲ್ಲಿ, ಭಾರತವು ಪೂರ್ವ ನದಿಗಳಾದ ರಾವಿ, ಬಿಯಾಸ್ ಮತ್ತು ಸಟ್ಲೆಜ್ ಮೇಲೆ ನಿಯಂತ್ರಣವನ್ನು ಹೊಂದಿದೆ – ಆದರೆ ಪಾಕಿಸ್ತಾನವು ಪಶ್ಚಿಮ ನದಿಗಳಾದ ಸಿಂಧೂ, ಝೇಲಂ ಮತ್ತು ಚೆನಾಬ್ ಮೇಲೆ ಹಕ್ಕುಗಳನ್ನು ಹೊಂದಿದೆ.

ಭಾರತದ ನಿರ್ಧಾರವು ದಶಕಗಳಿಂದ ಪಾಕಿಸ್ತಾನದ ಕ್ರಮಗಳು ಒಪ್ಪಂದದ ಅಡಿಪಾಯವನ್ನು ಮೂಲಭೂತವಾಗಿ ದುರ್ಬಲಗೊಳಿಸಿವೆ ಮತ್ತು ಮೂಲ ಊಹೆಗಳ ಅಡಿಯಲ್ಲಿ ಅದರ ನಿರಂತರ ಅನುಷ್ಠಾನವನ್ನು ಅಸಮರ್ಥನೀಯವಾಗಿಸಿದೆ ಎಂಬ ವಾಸ್ತವವನ್ನು ಪ್ರತಿಬಿಂಬಿಸುತ್ತದೆ ಎಂದು ಕ್ವಾತ್ರಾ ಸಮರ್ಥಿಸಿಕೊಂಡರು.

## ಅಸ್ಸಾಂನ ಶುಭದೀಪ್ ಘೋಷ್ ಭಾರತದ ಹೊಸ ಫೀಲ್ಡಿಂಗ್ ಕೋಚ್ ಆಗಿ ನೇಮಕ



ಗುವಾಹಟಿ, ಆಗಸ್ಟ್ 2: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಶ್ರೀಲಂಕಾ ವಿರುದ್ಧದ ಮುಂಬರುವ ಎರಡು ಟೆಸ್ಟ್ ಸರಣಿಗೆ ಮುಂಚಿತವಾಗಿ ಸಹಾಯಕ ಸಿಬ್ಬಂದಿ ಪುನರುಜ್ಜೀವನದ ಭಾಗವಾಗಿ ಟಿ ದಿಲೀಪ್ ಬದಲಿಗೆ ಅಸ್ಸಾಂನ ಶುಭದೀಪ್ ಘೋಷ್ ಅವರನ್ನು ಭಾರತೀಯ ಹಿರಿಯ ಪುರುಷರ ಕ್ರಿಕೆಟ್ ತಂಡದ ಹೊಸ ಫೀಲ್ಡಿಂಗ್ ಕೋಚ್ ಆಗಿ ನೇಮಿಸಿದೆ. ಅಸ್ಸಾಂ ಮತ್ತು ರೈಲ್ವೇಸ್ ತಂಡದ ಮಾಜಿ ಕ್ರಿಕೆಟಿಗ ಘೋಷ್, ಈ ತಿಂಗಳ ಕೊನೆಯಲ್ಲಿ ಶ್ರೀಲಂಕಾ ಪ್ರವಾಸದ ಸಮಯದಲ್ಲಿ ಮೊದಲ ಬಾರಿಗೆ ಭಾರತೀಯ ತಂಡದ ಫೀಲ್ಡಿಂಗ್ ಘಟಕದ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದ್ದಾರೆ. ಅವರ ನೇಮಕಾತಿಯು ಅಸ್ಸಾಂನಲ್ಲಿ ದೇಶೀಯ ಕ್ರಿಕೆಟ್‌ನಿಂದ ರಾಷ್ಟ್ರದ ಅತ್ಯುನ್ನತ ಮಟ್ಟಕ್ಕೆ ಕೊಂಡೊಯ್ದ ಕೋಚಿಂಗ್ ವೃತ್ತಿಜೀವನದಲ್ಲಿ ಮತ್ತೊಂದು ಮಹತ್ವದ ಮೈಲಿಗಲ್ಲನ್ನು ಗುರುತಿಸುತ್ತದೆ. ಡಿಗ್ಬಾಯ್ನಲ್ಲಿ ಜನಿಸಿದ ಘೋಷ್, ರೈಲ್ವೇಸ್‌ಗಾಗಿ ಆಡುವ ಮೊದಲು ಬಲಗೈ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಮತ್ತು ಆಫ್–ಸ್ಪಿನ್ನರ್ ಆಗಿ ಅಸ್ಸಾಂ ಅನ್ನು ಪ್ರತಿನಿಧಿಸಿದರು. ನಿವೃತ್ತಿ ಹೊಂದಿದ ನಂತರ, ಅವರು ಕೋಚಿಂಗ್‌ಗೆ ತೆರಳಿದರು ಮತ್ತು ಅಸ್ಸಾಂ ಹಿರಿಯ ಪುರುಷರ ತಂಡದ ಮುಖ್ಯ ಕೋಚ್ ಆಗಿ ಸೇವೆ ಸಲ್ಲಿಸಿದರು, ರಾಜ್ಯದ ಹಲವಾರು ಯುವ ಕ್ರಿಕೆಟಿಗರ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದರು.

ಆಗಸ್ಟ್ 15 ರಿಂದ ಆರಂಭವಾಗುವ ಶ್ರೀಲಂಕಾ ವಿರುದ್ಧದ ಎರಡು ಟೆಸ್ಟ್ ಸರಣಿಯು ರಾಷ್ಟ್ರೀಯ ತಂಡದೊಂದಿಗೆ ಘೋಷ್ ಅವರ ಮೊದಲ ಹುದ್ದೆಯಾಗಲಿದೆ. ಸರಣಿ ಆರಂಭವಾಗುವ ಮೊದಲು ತಂಡವು ಕೊಲಂಬೊದಲ್ಲಿ ಮೂರು ದಿನಗಳ ಅಭ್ಯಾಸ ಪಂದ್ಯವನ್ನು ಸಹ ಆಡಲಿದೆ.

## ಮೊಣಕಾಲಿನ ಗಾಯದಿಂದ ಶ್ರೀಲಂಕಾ ಟೆಸ್ಟ್ ಪಂದ್ಯಗಳಿಗೆ ಬುಮ್ರಾ ಮರಳುವುದು ವಿಳಂಬ

**ನವದೆಹಲಿ, ಆ.2:** ಕಳೆದ ತಿಂಗಳು ಇಂಗ್ಲೆಂಡ್ ವಿರುದ್ಧದ ಎರಡನೇ ಏಕದಿನ ಪಂದ್ಯದಲ್ಲಿ ಮೊಣಕಾಲಿನ ಗಾಯದಿಂದ ಚೇತರಿಸಿಕೊಳ್ಳಲು ವಿಫಲರಾದ ಜಸ್ಪ್ರೀತ್ ಬುಮ್ರಾ, ಹೊಸ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಚಕ್ರಕ್ಕೆ ಮುಂಚಿತವಾಗಿ ಭಾರತದ ವೇಗದ ದಾಳಿಗೆ ಮತ್ತೊಂದು ದೊಡ್ಡ ಹೊಡೆತ ನೀಡಿದ ಕಾರಣ ಭಾರತದ ಎರಡು ಟೆಸ್ಟ್ ಪಂದ್ಯಗಳ ಶ್ರೀಲಂಕಾ ಪ್ರವಾಸದಿಂದ ಹೊರಗುಳಿದಿದ್ದಾರೆ. ಬೆಂಗಳೂರಿನಲ್ಲಿರುವ ಬಿಸಿಸಿಐನ ಸೆಂಟರ್ ಆಫ್ ಎಕ್ಸಲೆನ್ಸ್ (ಸಿಓಇ) ನಲ್ಲಿ ಅಂತಿಮ ಫಿಟ್ನೆಸ್ ಮೌಲ್ಯಮಾಪನವನ್ನು ತೆರವುಗೊಳಿಸಿದ ನಂತರ ವಿಶ್ವದ ನಂ. 1 ಟೆಸ್ಟ್ ಬೌಲರ್ ಅವರನ್ನು ತಂಡದಲ್ಲಿ ಹೆಸರಿಸಲಾಗಿತ್ತು. ಆದಾಗ್ಯೂ,



ಪುನರ್ವಸತಿ ಸಮಯದಲ್ಲಿ ಅವರು ಅಸ್ವಸ್ಥತೆಯನ್ನು ಅನುಭವಿಸುತ್ತಲೇ ಇದ್ದ ಕಾರಣ ವೈದ್ಯಕೀಯ ತಂಡವು ಅವರನ್ನು ಹಿಂದಕ್ಕೆ ಕರೆಸಿಕೊಳ್ಳಲು ನಿರ್ಧರಿಸಿದೆ ಎಂದು ಬಹು ಮೂಲಗಳು ದೃಢಪಡಿಸಿವೆ. ಬುಮ್ರಾ ಈ ವಾರದ ಆರಂಭದಲ್ಲಿ ಫಿಟ್ನೆಸ್ ಮೌಲ್ಯಮಾಪನಗಳ ಸರಣಿಗಾಗಿ ಸಿಓಇಗೆ ವರದಿ ಮಾಡಿದ್ದಾರೆ. ಅವರ ಚೇತರಿಕೆ ಮುಂದುವರೆದಿದ್ದರೂ, ಬೌಲಿಂಗ್‌ಗೆ ತಕ್ಷಣ ಮರಳುವುದರಿಂದ ಗಾಯವು ಉಲ್ಬಣಗೊಳ್ಳಬಹುದು ಮತ್ತು ದೂರದಲ್ಲಿ ಹೆಚ್ಚು ಸಮಯ ಉಳಿಯಬಹುದು ಎಂದು ವೈದ್ಯಕೀಯ ಸಿಬ್ಬಂದಿ ಭಾವಿಸಿದ್ದಾರೆ ಎಂದು ತಿಳಿದುಬಂದಿದೆ. ಪರಿಣಾಮವಾಗಿ, ಆಯ್ಕೆದಾರರು ಮತ್ತು ತಂಡದ ಆಡಳಿತ ಮಂಡಳಿಯು ಶ್ರೀಲಂಕಾ ಸರಣಿಗೆ ಅವರನ್ನು ಅಪಾಯಕ್ಕೆ ಸಿಲುಕಿಸದಿರಲು ನಿರ್ಧರಿಸಿದೆ.

ಬುಮ್ರಾ ಅನುಪಸ್ಥಿತಿಯು ಈಗಾಗಲೇ ಗಾಯಗಳಿಂದ ಬಳಲುತ್ತಿರುವ ಭಾರತೀಯ ದಾಳಿಯನ್ನು ಗಮನಾರ್ಹವಾಗಿ ದುರ್ಬಲಗೊಳಿಸುತ್ತದೆ. ಹರ್ಷಿತ್ ರಾಣಾ ಮಂಡಿರಜ್ಜು ಗಾಯದಿಂದ ಹೊರಗುಳಿದಿದ್ದರೆ, ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಕ್ವಾಡ್ರೈಸ್ಪ್ಸ್ ಸಮಸ್ಯೆಯಿಂದ ಹೊರಗುಳಿದಿದ್ದಾರೆ. ಮಂಡಿರಜ್ಜು ಗಾಯದಿಂದ ಬಳಲುತ್ತಿರುವ ಆಫ್–ಸ್ಪಿನ್ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಮೊದಲ ಟೆಸ್ಟ್ ಪಂದ್ಯದಿಂದ ಹೊರಗುಳಿಯಲಿದ್ದಾರೆ ಮತ್ತು ವೇಗದ ಬೌಲರ್ ಆಕಾಶ್ ದೀಪ್ ಬೆನ್ನಿನ ಒತ್ತಡದ ಪ್ರತಿಕ್ರಿಯೆಗಳಿಂದ ಚೇತರಿಸಿಕೊಳ್ಳುತ್ತಿದ್ದಾರೆ. ಇಂಗ್ಲೆಂಡ್ ಪ್ರವಾಸದ ಸಮಯದಲ್ಲಿ ಹೆಚ್ಚುತ್ತಿರುವ ಗಾಯಗಳ ಪಟ್ಟಿ ಈಗಾಗಲೇ ಕಳವಳಕಾರಿಯಾಗಿತ್ತು. ಭಾರತದ ಏಕದಿನ ಸರಣಿ ಸೋಲಿನ ನಂತರ, ನಾಯಕ ಶುಭಮನ್ ಗಿಲ್ ತಂಡವು ತನ್ನ ಕೆಲಸದ ಹೊರೆ ನಿರ್ವಹಣೆಯನ್ನು ಮರುಪರಿಶೀಲಿಸಬೇಕಾಗಿದೆ ಎಂದು ಒಪ್ಪಿಕೊಂಡರು. ದಕ್ಷಿಣ ಆಫ್ರಿಕಾ ವಿರುದ್ಧ 2–0 ಅಂತರದ ಸೋಲಿನ ನಂತರ ನಡೆಯುತ್ತಿರುವ ವಿಶ್ವ ಟೆಸ್ಟ್ ಚಾಂಪಿಯನ್ಶಿಪ್ ಚಕ್ರದಲ್ಲಿ ಭಾರತಕ್ಕೆ ಶ್ರೀಲಂಕಾ ಸರಣಿಯು ಮೊದಲ ಜವಾಬ್ದಾರಿಯಾಗಿದೆ. ಭಾರತ ಪ್ರಸ್ತುತ ಐಸಿಸಿ ಅಂಕಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿದೆ, ಶ್ರೀಲಂಕಾ ಆರನೇ ಸ್ಥಾನದಲ್ಲಿದೆ.

**ಶ್ರೀಲಂಕಾ ಟೆಸ್ಟ್‌ಗೆ ಭಾರತ ತಂಡ:** ಶುಭಮನ್ ಗಿಲ್ (ನಾಯಕ), ಕೆಎಲ್ ರಾಹುಲ್ (ಉಪನಾಯಕ), ಯಶಸ್ವಿ ಜೈಸ್ವಾಲ್, ರಿಷಭ್ ಪಂತ್ (ವಿ.ಕಿ), ಬಿ ಸಾಯಿ ಸುದರ್ಶನ್, ಧ್ರುವ್ ಜುರೆಲ್ (ಫಾಏ), ರವೀಂದ್ರ ಜಡೇಜಾ, ಕುಲದೀಪ್ ಯಾದವ್, ಮಾನವ್ ಸುತಾರ್, ಮೊಹಮ್ಮದ್ ಸಿರಾಜ್, ಪ್ರಸಿದ್ಧರ್ ಕೃಷ್ಣ, ಖ್ಯಾತ್ ಸಿರಾಜ್ ಸರನಶ್ ಜೈನ್.

## ಕಾಮನ್‌ವೆಲ್ತ್ ಟಿಟಿ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಪದಕದ ಓಟದಲ್ಲಿ ಅಂಕುರ್, ಯಶಸ್ವಿನಿ

**ನವದೆಹಲಿ, ಆ.2;** ಕಾಮನ್‌ವೆಲ್ತ್ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್ 2026ರಲ್ಲಿ ಭಾನುವಾರ ನಡೆದ ಪುರುಷ ಮತ್ತು ಮಹಿಳಾ ಸಿಂಗಲ್ಸ್ ಸ್ಪರ್ಧೆಗಳಲ್ಲಿ ಅಂಕುರ್ ಭಟ್ಟಾಚಾರ್ಯ ಮತ್ತು ಯಶಸ್ವಿನಿ ಘೋರ್ಪಡೆ ಗೆದ್ದರು, ಭಾರತ ಕಳೆದ ವಾರ ನವದೆಹಲಿಯಲ್ಲಿ ನೀಡಲಾಗಿದ್ದ ಏಳು ಪ್ರಶಸ್ತಿಗಳಲ್ಲಿ ಆರನ್ನು ಗೆದ್ದುಕೊಂಡಿತು. ಈ ಹಿಂದೆ ಪುರುಷರ ತಂಡ ಮತ್ತು ಮಹಿಳಾ ತಂಡ ಟೇಬಲ್ ಟೆನಿಸ್ ಪ್ರಶಸ್ತಿಗಳನ್ನು ಗೆದ್ದಿದ್ದ ಆತಿಥೇಯರಿಗೆ ಮಲೇಷ್ಯಾ ನಿರಾಕರಿಸಿತು, ಪುರುಷರ ಡಬಲ್ಸ್ ಕಿರೀಟವನ್ನು ಗೆಲ್ಲುವ ಮೂಲಕ ಕ್ಲೀನ್ ಸ್ವೀಪ್ ಮಾಡಿತು.

ಮಹಿಳಾ ಡಬಲ್ಸ್ ಮತ್ತು ಮಿಶ್ರ ಡಬಲ್ಸ್: ಭಾರತ ಚಿನ್ನ ಗೆದ್ದಿತು ಶ್ರೀಜಾ ಅಕುಲಾ ಮತ್ತು ಸಿಂಡ್ರೆಲಾ ದಾಸ್ ಅಂತಿಮ ಪಂದ್ಯದಲ್ಲಿ ತಮ್ಮ ದೇಶಬಾಂಧವರಾದ ಯಶಸ್ವಿನಿ ಘೋರ್ಪಡೆ ಮತ್ತು ದಿವ್ಯಾಂಶಿ ಭೌಮಿಕ್ ವಿರುದ್ಧ 4–0 (11–8, 11–13, 11–8, 11–6) ಅಂತರದಲ್ಲಿ ಜಯಗಳಿಸಿ ಮಹಿಳಾ ಡಬಲ್ಸ್ ಕಿರೀಟವನ್ನು ಪಡೆದರು.

ಮಿಶ್ರ ಡಬಲ್ಸ್ ಫೈನಲ್‌ನಲ್ಲಿ ಮಾನವ್ ಠಕ್ಕರ್ ಮತ್ತು ತನೀಶಾ ಕೋಟೆಚಾ ಮಲೇಷ್ಯಾದ ಐ ಕ್ವಿನ್ ಟೀ ಮತ್ತು ರಿಚರ್ಡ್ ರುಯಿ ಝೂ ಯಾಪ್ ಅವರನ್ನು 3–2 (11–8, 10–12, 10–12, 11–9, 11–5) ಅಂತರದಿಂದ ಸೋಲಿಸಿದರು.

ಆ ವರ್ಷ ಎಲ್ಲಾ ಏಳು ಚಿನ್ನದ ಪದಕಗಳನ್ನು ಕ್ಲೀನ್ ಸ್ವೀಪ್ ಮಾಡಿದ ಮೂರನೇ ರಾಷ್ಟ್ರ ಭಾರತವಾಗಿತ್ತು. ಈ ಬಾರಿ, ಒಲಿಂಪಿಯನ್ ಮತ್ತು ಭಾರತದ ಅಗ್ರ ಶ್ರೇಯಾಂಕಿತ ಮಹಿಳಾ ಆಟಗಾರ್ತಿ ಮಣಿಕಾ ಬಾತ್ರಾ ಅನುಪಸ್ಥಿತಿಯ ಹೊರತಾಗಿಯೂ ಆತಿಥೇಯರು ಆರು ಪ್ರಶಸ್ತಿಗಳನ್ನು ಗೆದ್ದರು.



